

ಜನವರಿ 30, 2000 ಬೆಲೆ ರೂ. 3.00

ಪೆಕ್ಯಾರಂಗ

ದುಡಿವ ಜನರ ಪ್ರಾಣಮಿತ್ರ



ತೊಗರಿಬೆಳೆಯ ರಾಜಕೀಯ ಅರ್ಥಶಾಸ್ತ್ರ



ಉತ್ತರ ಪ್ರದೇಶದಲ್ಲಿ ವಿದ್ಯುತ್ ನೌಕರರು

ಕಾರ್ಮಿಕ ಹೋರಾಟದ ಮೊದಲ ಅಲೆಗಳು

ದೇಶಾದ್ಯಂತ ಬಂದರು ಕಾರ್ಮಿಕರು

ತ್ರಿಪುರಾದಲ್ಲಿ ಭಯೋತ್ಪಾದಕರ ದಾಂಧಲೆಗಳು

ಖಾಸಗೀಯವರಿಗೆ ಮಾರಾಟವಾದ ರಾಜ್ಯದ ಬದುಕು

ಸಂಪಾದಕೀಯ

ವಿದ್ಯುತ್, ನೀರು ಪೂರೈಕೆ ಮತ್ತು ಸ್ವಚ್ಛತೆಯ ಹೊಣೆಯನ್ನು ಖಾಸಗಿಯವರಿಗೆ ವಹಿಸಲು ನಿರ್ಧರಿಸಿರುವ ಕರ್ನಾಟಕ ಸಚಿವ ಸಂಪುಟದ ತೀರ್ಮಾನ ಅತ್ಯಂತ ವಿನಾಶಕಾರಿಯಾದದ್ದು. ಈ ತೀರ್ಮಾನದಿಂದಾಗಿ ವಿದ್ಯುತ್ ವಿತರಣೆಯ ಕೆಲಸವನ್ನು ಇನ್ನು ಮುಂದೆ ಖಾಸಗೀ ಕಂಪನಿ/ಸಂಸ್ಥೆಗಳು ಮಾಡಲಿದ್ದು, ಅದಕ್ಕಾಗಿ ಜಾಗತಿಕ ಮಟ್ಟದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಈ ಮೂಲಕ ಗ್ರಾಮಾಂತರ ಪ್ರದೇಶದ ರೈತರ, ಜನಸಾಮಾನ್ಯರ, ಹಿತವನ್ನು ಭಾರೀ ತಿಮಿಂಗಿಲಗಳ ಬಾಯಿಗೆ ನೂಕಲಾಗಿದೆ. ಸ್ವಾವಲಂಬನೆ ಹಾಗೂ ಜನತೆಯ ಸಾಮಾಜಿಕ ಹಿತದ ಕಲ್ಯಾಣದ ದೃಷ್ಟಿಗೆ ಎಳ್ಳುನೀರು ಬಿಟ್ಟಂತಾಗಿದೆ. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರದ ಸಚಿವ ಕುಮಾರ ಮಂಗಳಂ ಕಳೆದ ವಾರ ಬೆಂಗಳೂರಿಗೆ ಬಂದಿದ್ದಾಗ ಇಂತಹ ನೀತಿಯನ್ನು ಅಳವಡಿಸಿಕೊಳ್ಳಲು ಒತ್ತಾಯ ಮಾಡಿದ್ದರು ಎಂಬ ವರದಿಗಳಿವೆ.

ಹೇಳಿ ಕೇಳಿ ಕಾಂಗ್ರೆಸ್ ಪಕ್ಷವಾಗಿ, ಸ್ವತಃ ಮುಖ್ಯಮಂತ್ರಿಗಳೇ ಉದಾರೀಕರಣ-ಜಾಗತೀಕರಣ ಆರಾಧಕರಾಗಿ ಈ ನೀತಿಯನ್ನು ಪ್ರಕಟಿಸಿದ್ದಾರೆ. ಇದರಿಂದ ಬಹುರಾಷ್ಟ್ರೀಯ ಕಂಪನಿಗಳು ಲಾಭಬಡುಕ ಉದ್ದಿಮೆಗಳು ಸಂತುಷ್ಟವಾಗುತ್ತಾರೆ. ಸಿಂಗಾಪುರದ ಪ್ರಧಾನಿ ಕರ್ನಾಟಕಕ್ಕೆ ಬಂದಿಳಿಯುತ್ತಿದ್ದಂತೆ ಇದು ಪ್ರಕಟವಾದದ್ದು ಗಮನಿಸಬೇಕು. ಆದರೆ ರಾಜ್ಯದಲ್ಲಿ ಸಾವಿರಾರು ಹಳ್ಳಿಗಳಿಗೆ ವಿದ್ಯುತ್ತಿನ ಪೂರೈಕೆ ಇಲ್ಲ. ಇರುವಕಡೆಗೂ ಸಮರ್ಪಕವಾಗಿಲ್ಲ. ಕೃಷಿಗೆ ವಿದ್ಯುತ್ ಬಳಕೆ ಅತ್ಯಂತ ಕಡಿಮೆ. ದುಬಾರಿ ಕೃಷಿ ವೆಚ್ಚ, ನಿರ್ವಹಣೆ ಸಾಲದೇ ಸಾಲದ ಹೊರೆ ಹೆಚ್ಚಿ ರೈತರು ದಿವಾಳಿಯಾಗುತ್ತಿದ್ದಾರೆ. ಮನೆಗಳಿಗೂ ವಿದ್ಯುತ್ ದೀಪಗಳ ಸಂಪರ್ಕವೇ ಅಸಾಧ್ಯವಾಗಿದೆ. ಸರ್ಕಾರದ ವರದಿಯಂತೆ ರಾಜ್ಯದಲ್ಲಿ ಅತ್ಯಂತ ಕಡಿಮೆ ವಿದ್ಯುತ್ ಬಳಕೆದಾರರು ಮಾತ್ರ ಇದ್ದಾರೆ. ಮೇಲಾಗಿ ಇತ್ತೀಚೆಗೆ ಮುಖ್ಯಮಂತ್ರಿಯವರು ಎಲ್ಲಾ ಕಡೆಗಳಲ್ಲಿಯೂ ವಿದ್ಯುತ್ ಮೀಟರ್‌ಗಳನ್ನು ಕಡ್ಡಾಯವಾಗಿ ಅಳವಡಿಸಲಾಗುವುದು ಎಂದಿದ್ದಾರೆ. ಉಚಿತ ವಿದ್ಯುತ್ ನೀತಿ, ಕೆಳಜಾತಿ-ವರ್ಗದವರ ತೀರಾ ಬಡರೈತರ ಹಿತವನ್ನು ಸಲ್ಪಮಟ್ಟಿಗಾದರೂ ಕಾಪಾಡಲಾಗುತ್ತಿತ್ತು. ಆದರೆ ಖಾಸಗಿ ಕ್ಷೇತ್ರಗಳು ಈ ರಂಗಕ್ಕೆ ಬರುವುದೇ ಲಾಭ ಲೂಟಿ ಹೊಡೆಯಲು. ಅವರಿಗೆ ಜನರ ಬಗ್ಗೆಯಾಗಲೀ, ಸಮಾಜದ ಬಗ್ಗೆಯಾಗಲೀ ಕಾಳಜಿಯೇ ಇಲ್ಲ. ಈ ಖಾಸಗೀಕರಣದಿಂದ ಕೃಷಿ ಕೃಷಿಕರು ನಾಶಹೊಂದುವುದು, ಕೃಷಿಕೂಲಿಕಾರರಂತೂ ಎಂದೂ ಬೆಳಕನ್ನು ಕಾಣದೇ ಕತ್ತಲಲ್ಲೇ ಬದುಕು ಕಳೆದುಕೊಳ್ಳುವರು. ಖಾಸಗಿ ಧಣಿಗಳು ನಿರಂಕುಶವಾಗಿ ಸುಲಿಯುತ್ತಿರುವಾಗ ಜನಪ್ರತಿನಿಧಿಯಾಗಿರುವ ಸರ್ಕಾರದ ಪಾತ್ರವೇ ಇರದು. ಅದೇ ರೀತಿ ನಗರದ ಕುಡಿಯುವ ನೀರು ಪೂರೈಕೆ ನಗರಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರವಿದೆ. ಬಹಳಷ್ಟು ಜನತೆ ದುಡಿಯುವ ಜನರು-ಅತ್ಯಂತ ಬಡತನದಲ್ಲಿ ವಾಸಕ್ಕೂ ಯೋಗ್ಯ ಮನೆಯಿಲ್ಲದಿರುವ ಸ್ಲಂ ವಾಸಿಗಳು, ಸ್ವಂತ ಕೊಳಾಯಿ ಹೊಂದಿರುವುದು ಅಸಾಧ್ಯದ ಮಾತೇ ಆಗಿದೆ. ಖಾಸಗೀಯವರ ಲಾಭಕೋರತನದಿಂದ ಹೆಚ್ಚಳವಾಗುವ ಬೆಲೆಯನ್ನು ತೆರುವುದು ಅಸಾಧ್ಯದ ಮಾತು. ನೀರು ಪೂರೈಕೆಯಲ್ಲಿಯೂ ಶುದ್ಧತೆಯನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ. ಬಹುತೇಕ ರೋಗಗಳಿಗೆ ಅಶುದ್ಧವಾದ ಕುಡಿಯುವ ನೀರೇ ಕಾರಣವಿರುತ್ತದೆ. ಲಾಭಕೋರ ಖಾಸಗೀ ಸಂಸ್ಥೆಗಳು ಕುಡಿಯುವ ನೀರನ್ನೂ, ಶುದ್ಧೀಕರಿಸಿ ನೀಡುತ್ತಾರೆಂದು ಭಾವಿಸಲು ಸಾಧ್ಯವಿಲ್ಲ. ಈಗಾಗಲೇ ಅತೀ ಶುದ್ಧ-ರಕ್ಷಿತ ಎಂದೆಲ್ಲಾ ಹಣೆಪಟ್ಟಿ ಅಂಟಿಸಿಕೊಂಡು ಬರುತ್ತಿರುವ ಸುಪ್ರಸಿದ್ಧ ಕಂಪನಿಗಳು 'ಮಿನರಲ್ ವಾಟರ್' ಬಾಟಲ್‌ಗಳಲ್ಲಿ ಶುದ್ಧೀಕರಿಸದ ಸಾಮಾನ್ಯ ನೀರು ತುಂಬಿ ಮಾರುತ್ತಿರುವ ದಾರುಣವರದಿಗಳು ಹಲವಾರು ಪ್ರಕಟಗೊಂಡಿವೆ. ಹೀಗೆ ಜನತೆಗೆ ದುಬಾರಿ, ಅಶುದ್ಧ ನೀರಿನ ಪೂರೈಕೆ, ತರುವ ರೋಗಗಳಿಗೆ ವೈದ್ಯಕೀಯ ಚಿಕಿತ್ಸೆ ಪಡೆಯುವ ಖಾತ್ರಿ ಇಲ್ಲದಿರುವಾಗ, ಆಸ್ಪತ್ರೆ-ಔಷದಿ ಸೇವೆ-ಸೌಲಭ್ಯಗಳು ದುಬಾರಿಯಾಗಿರುವಾಗ ಸಾಮಾನ್ಯರ ಪಾಲಿಗೆ ಗಂಡಾಂತರಕಾರಿಯಾಗಲಿದೆ. ಕುಡಿಯುವ ನೀರಿನಂತಹ ಜೀವರಕ್ಷಕ ಅತ್ಯಗತ್ಯ ಕ್ಷೇತ್ರವನ್ನು ಖಾಸಗೀ ಕಂಪನಿಗಳ ಲೂಟಿಗೆ ಒಪ್ಪಿಸಿರುವ ಕೃಷ್ಣರವರ ಸರ್ಕಾರ ಅಕ್ಷಮ್ಯ ಅಪರಾಧವೆಸಗಿದೆ. ಹಾಗೇ ಸ್ವಚ್ಛತೆ ಕ್ಷೇತ್ರವನ್ನೂ ಧಾರೆಯೆರೆದಿರುವುದು ಆಸ್ಫೋಟಕಾರಿಯಾಗಲಿದೆ.

ಈ ಖಾಸಗಿ ಕಂಪನಿಗಳು ಆ ಕ್ಷೇತ್ರದಲ್ಲಿ ದುಡಿಯುವ ಜನರನ್ನು ಕಿತ್ತು, ಕಂಟ್ರಾಕ್ಟ್ ಪದ್ಧತಿಯನ್ನು ಜಾರಿಗೊಳಿಸಲು ಸರ್ಕಾರದ ಮೇಲೆ ಒತ್ತಡಹೇರಿದೆ. ಹೀಗಾಗಿ ಕೆಲಸದ ಭದ್ರತೆಯೂ ಇಲ್ಲವಾಗಿ ದುಡಿಯುವ ಜನರಲ್ಲೇ ಕೆಲಸಕ್ಕಾಗಿ ಕಿತ್ತಾಟವನ್ನು ಹುಟ್ಟುಹಾಕಲಾಗುತ್ತಿದೆ.

ಕೃಷ್ಣರ ಸರ್ಕಾರದ ಈ ನಿರ್ಧಾರ ಅತ್ಯಂತ ಪ್ರಮಾದಕರ. ಇದನ್ನು ಅವರು ಕೈಬಿಡಲೇಬೇಕು. ಇದರ ವಿರುದ್ಧ ನಾಡಿನ ಎಲ್ಲಾ ಜನತೆ ಪ್ರತಿಭಟಿಸಬೇಕು. ವಿಶೇಷವಾಗಿ ಆ ಕ್ಷೇತ್ರದ ದುಡಿಯುವ ವರ್ಗ ಖಾಸಗೀಕರಣ ವಿರುದ್ಧ ಹೋರಾಟ ಮತ್ತು ಪ್ರತಿರೋಧ ಒಡ್ಡಬೇಕು. ಉತ್ತರ ಪ್ರದೇಶದ ವಿದ್ಯುತ್ ಕೆಲಸಗಾರರ ಹೋರಾಟ ಈ ದೆಸೆಯಲ್ಲಿ ಅಭಿನಂದನಾರ್ಹ. ಈಗ ರಾಜ್ಯದಲ್ಲಿಯೂ ಎಚ್ಚೆತ್ತುಕೊಳ್ಳದಿದ್ದರೆ ಅಗತ್ಯ ಸೌಲಭ್ಯಗಳೂ ಒಳಗೊಂಡು ಎಲ್ಲವೂ ಖಾಸಗೀ ಮಾಲೀಕರ ಅಂಕುಶಕ್ಕೆ ಸಿಕ್ಕು ತತ್ತರಿಸಬೇಕಾಗುವುದು.



ಜನಸಾಮಾನ್ಯರ ಸಣ್ಣ ಉಳಿತಾಯಗಳ ಮೇಲೆ ಬಡ್ಡಿ ಕಡಿತ

ವಾಜಪೇಯಿ ಸರಕಾರದ ಮತ್ತೊಂದು 'ಜಾಗತೀಕರಣ' ಧಾಳಿ

ಜನವರಿ 14 ರಂದು ವಾಜಪೇಯಿ ಸರಕಾರ ಜನಗಳಿಗೆ ಹೊಸ ವರ್ಷದ ಸಂಕ್ರಾಂತಿಯ ಉಡುಗೊರೆ ನೀಡಿದೆ - ಮತ್ತೊಂದು 'ಕಠಿಣ ಕ್ರಮ' ಪ್ರಕಟಿಸುವ ಮೂಲಕ! ಸಾರ್ವಜನಿಕ ಭವಿಷ್ಯನಿಧಿ, ರಾಷ್ಟ್ರೀಯ ಉಳಿತಾಯ ಪತ್ರಗಳು, ಕಿಸಾನ್ ವಿಕಾಸ ಪತ್ರಗಳು, ಅಂಚೆಕಚೇರಿ ನಿಗದಿತ ಠೇವಣಿಗಳು ಹಾಗೂ ಅಂಚೆ ಕಛೇರಿ ಆವರ್ತ ಠೇವಣಿಗಳ ಮೇಲೆ ಕೊಡುವ ಬಡ್ಡಿ ದರಗಳಲ್ಲಿ 1% ಕಡಿತ ಮಾಡಲಾಗಿದೆ. ಹೊಟ್ಟೆ-ಬಟ್ಟೆ ಕಟ್ಟಿ ಉಳಿಸಿ ಕಷ್ಟಕಾಲದಲ್ಲಿ ಆಸರೆಯಾಗಬಹುದು ಎಂದು ಜನಸಾಮಾನ್ಯರು ತಾವು ಮಾಡಿರುವ ಉಳಿತಾಯದ ಮೇಲೆ ಹೀಗೆ ಕಮ್ಮಿ ಪ್ರತಿಫಲ ಕೊಡುವ ಸರಕಾರದ ಕ್ರಮದಿಂದ ಹೌಹಾರಿದ್ದರೆ, ತಮ್ಮ ಭವಿಷ್ಯ ನಿಧಿಯ ಮೇಲೂ ಈ ಪ್ರಹಾರ ಬರುತ್ತದೆ ಎಂದು ಲಕ್ಷಾಂತರ ಕಾರ್ಮಿಕರು ಆತಂಕಗೊಂಡಿದ್ದರೆ, ಬಂಡವಾಳಗಾರರಿಗೆ ಮಾತ್ರ ಸಂತೋಷವಾಗಿದೆ. ವಿಶ್ವದ ಬೇರೆಡೆಗೆ ಹೋಲಿಸಿದರೆ ನಮ್ಮಲ್ಲಿ ಬಡ್ಡಿದರ ಬಹಳ ಜಾಸ್ತಿ, ಇದನ್ನು ಕಮ್ಮಿ ಮಾಡುವುದು ಸರಿಯಾದ ದಿಕ್ಕಿನಲ್ಲಿ ಇರುವ ಕ್ರಮ, ಇದನ್ನು ಇನ್ನಷ್ಟು ಕಡಿಮೆ ಮಾಡಬೇಕಾಗಿದೆ ಎಂಬುದು ಅವರ ಪ್ರತಿಕ್ರಿಯೆ. ಬ್ಯಾಂಕು ಠೇವಣಿಗಳ ಮೇಲೂ ಬಡ್ಡಿದರ ಇಳಿಯುತ್ತದೆ. ಬ್ಯಾಂಕ್‌ನಿಂದ ತಾವು ಪಡೆಯುವ ಸಾಲಗಳ ಮೇಲೂ ಬಡ್ಡಿದರ ಇಳಿಯುತ್ತದೆ, ತಮಗೆ ಅಗ್ಗ ದರದಲ್ಲಿ ಬಂಡವಾಳ ದೊರೆಯುತ್ತದೆ ಎಂಬುದು ಅವರ ನಿರೀಕ್ಷೆ. ವಾಜಪೇಯಿ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ಬೆದರಿಸುತ್ತಿರುವ 'ಕಠಿಣ ಕ್ರಮ'ಗಳು ವಾಸ್ತವವಾಗಿ ಜನಸಾಮಾನ್ಯರ ವಿರುದ್ಧ, ದುಡಿಮೆಗಾರರ ವಿರುದ್ಧ ಮಾತ್ರ, ವಾಸ್ತವವಾಗಿ ಅವು ಬಂಡವಾಳಗಾರರಿಗೆ ಮುದ ನೀಡುವ ಕ್ರಮಗಳು ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ. 'ಸ್ವದೇಶಿ' ಮುಖವಾಡ ತೊರೆದು ಜಾಗತೀಕರಣಕ್ಕೆ ಬದ್ಧವಾದ ಸರಕಾರದಿಂದ ಬೇರೇನನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಈಗ ಹೆಚ್ಚೆಚ್ಚು ಜನಗಳಿಗೆ ಅರಿವಾಗಲಾರಂಭಿಸಿದೆ.

ವಾಜಪೇಯಿ ಸರಕಾರ ಅಧಿಕಾರಕ್ಕೆ ಬಂದ ಕೂಡಲೇ ಮೊದಲ 100 ದಿನಗಳಲ್ಲಿ ಜಾರಿಗೆ ತರುವುದಾಗಿ ಹೇಳಿದ ಅಜೆಂಡಾದಲ್ಲಿ ಈ ಬಡ್ಡಿ ಕಡಿತದ ಕ್ರಮವೂ ಒಂದು. ಉಳಿದ ಕ್ರಮಗಳೆಂದರೆ ತ್ವರಿತವಾಗಿ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ವಿಕ್ರಯ, ಸಬ್ಸಿಡಿಗಳ ಕಡಿತ ಇತ್ಯಾದಿ, ಇವೆಲ್ಲಾ ಜನಗಳಿಗೆ ದೇಶಕ್ಕೆ 'ಕಠಿಣ'ವಾದ ಆದರೆ ಬಂಡವಾಳಿಗರಿಗೆ ಸಂತಸ ನೀಡುವ ಕ್ರಮಗಳು ಎಂದು ಬೇರೆ ಹೇಳಬೇಕಾಗಿಲ್ಲ. ವಾಸ್ತವವಾಗಿ ಈ ನೂರು ದಿನಗಳ ಅಜೆಂಡಾ ವಾಜಪೇಯಿ ಸರಕಾರ ಅಂಗೀಕರಿಸಿದ ಬಂಡವಾಳಗಾರರ ಅಜೆಂಡಾವಲ್ಲದೆ ಬೇರೇನೂ ಅಲ್ಲ.

ಐ.ಎಂ.ಎಫ್.-ವಿಶ್ವಬ್ಯಾಂಕ್ ಬಯಕೆಯಂತೆ ತನ್ನ ಹಣಕಾಸು ಕೊರತೆಯನ್ನು ತುಂಬಲು ವಾಜಪೇಯಿ ಸರಕಾರ ಕೈಗೊಂಡಿರುವ ಕ್ರಮಗಳಿವು. ಒಂದೆಡೆ ಐವತ್ತು ವರ್ಷಗಳಲ್ಲಿ ದೇಶದ ಕಾರ್ಮಿಕರು ಬೆವರು ಸುರಿಸಿ ಕಟ್ಟಿದ ಆಸ್ತಿಗಳಾದ ಸಾರ್ವಜನಿಕ ವಲಯವನ್ನು ಮಾರಿ ತನ್ನ ಕೊರತೆಯನ್ನು ತುಂಬಿಸುವ ಮೂರ್ಖಹಾದಿಯನ್ನು ಹಿಡಿದಿರುವ ಸರಕಾರ ಇನ್ನೊಂದು ಕಡೆ ಜನಸಾಮಾನ್ಯರ ಹೊಟ್ಟೆಗೆ ಬಡಿದು ತನ್ನ ಕೊರತೆಯನ್ನು ತುಂಬಿಸಲು ಮುಂದಾಗಿದೆ. ಈ ಸಣ್ಣ ಉಳಿತಾಯಗಳ ಮೇಲೆ ನೀಡಬೇಕಾದ ಬಡ್ಡಿಯ ಮೊತ್ತವನ್ನು ಹೀಗೆ ಒಂದೇ ಏಟಿನಲ್ಲಿ ಗಮನಾರ್ಹವಾಗಿ ಇಳಿಸಿ ತನ್ನ ಹಣಕಾಸು ಕೊರತೆಯನ್ನು ತುಂಬಿಸಲು ಯಾವುದೇ ನಾಚಿಕೆಯಿಲ್ಲದೆ ಮುಂದಾಗಿರುವ ಸರಕಾರ ಹಣವಂತರಿಂದ ತೆರಿಗೆ ವಸೂಲು ಮಾಡಲು ಅಷ್ಟೇ ನಾಚಿಕೆಗೇಡಿ ಹಿಂಜರಿಕೆ ತೋರುತ್ತಿದೆ.

ಸರಕಾರದ ಈ ಕ್ರಮಗಳು ಸಣ್ಣ ಉಳಿತಾಯಗಳನ್ನು ಹೆಚ್ಚೆಚ್ಚು ಅನಾಕರ್ಷಕಗೊಳಿಸಿ ಜನಗಳ ಸಣ್ಣ ಉಳಿತಾಯ ಶೇರು ಮಾರುಕಟ್ಟೆ ಮತ್ತು ಬ್ಯಾಂಕ್ ಠೇವಣಿಗಳತ್ತ ಹೋಗುವಂತೆ ಮಾಡುತ್ತವೆ. ಇದರಿಂದ ಒಂದೆಡೆ ರಾಜ್ಯ ಸರಕಾರಗಳ ಆದಾಯದಲ್ಲಿ ತೀವ್ರ ಕಡಿತ ಬರಲಿದೆ. ಏಕೆಂದರೆ ಈ ಸಣ್ಣ ಉಳಿತಾಯಗಳ 75% ರಾಜ್ಯ ಸರ್ಕಾರಗಳಿಗೆ ಹೋಗುತ್ತದೆ. ಇದರಿಂದ ಈಗಾಗಲೇ ಸಂಪನ್ಮೂಲಗಳ ಕೊರತೆಯಿಂದ ನರಳುತ್ತಿರುವ ರಾಜ್ಯ ಸರಕಾರಗಳು ಜನಗಳ ಅಗತ್ಯಗಳನ್ನು ಪೂರೈಸಲು ಇನ್ನಷ್ಟು ಹೆಣಗಬೇಕಾದ ಪರಿಸ್ಥಿತಿ ಬಂದಿದೆ. ಹೀಗೆ ಈ ಸರಕಾರ ನಮ್ಮ ಸಂವಿಧಾನದ ಒಕ್ಕೂಟ ನೀತಿಯ ಮೇಲೆ ನೇರ ಧಾಳಿಮಾಡಿದೆ. ರಾಜ್ಯಗಳಿಗೆ ಇದರಿಂದ ತೊಂದರೆಯಾದರೆ ಅವುಗಳ ಪಾಲನ್ನು 80% ಕ್ಕೆ ಹೆಚ್ಚಿಸಬಹುದು ಎಂಬುದು ಕೇವಲ ಕಣ್ಣೊರೆಸುವ ಮಾತು. ಹೀಗೆ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ತನ್ನ ಹಣಕಾಸು ಕೊರತೆ ತುಂಬಲು ಒಂದೆಡೆ ಜನಗಳ ಮೇಲೆ, ಇನ್ನೊಂದೆಡೆ ರಾಜ್ಯ ಸರಕಾರಗಳ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹೇರುತ್ತಿದೆ ಎಂಬುದೀಗ ಸ್ಪಷ್ಟ.

ಈ ಕ್ರಮಗಳನ್ನು ಸರಕಾರ ಪ್ರಕಟಿಸುವ ಕೆಲವು ದಿನಗಳ ಹಿಂದೆ ಶೇರು ಮಾರುಕಟ್ಟೆಯಲ್ಲಿ ಬೆಲೆಗಳು ಭಾರೀ ಏರಿದವಂತೆ. ಸರಕಾರದ ಈ ಕ್ರಮದ ನಿರೀಕ್ಷೆಯಿದ್ದುದರಿಂದಲೇ ಹೀಗಾಗಿರಬಹುದು ಎಂಬುದು ಕೆಲವು ಆರ್ಥಿಕ ತಜ್ಞರ ವಿಶ್ಲೇಷಣೆ. ಸಣ್ಣ ಉಳಿತಾಯಗಳಿಂದ ತಮ್ಮ ಉಳಿತಾಯಕ್ಕೆ ಪ್ರತಿಫಲ ದೊರೆಯದೆಂಬ ಬೇಸರದಿಂದ ಜನ ಹೆಚ್ಚು ಪ್ರತಿಫಲ ಬರಬಹುದಾದ ಶೇರುಗಳಲ್ಲಿ ಹಣ ತೊಡಗಿಸುತ್ತಾರೆ ಎಂಬುದು ಬಂಡವಾಳಿಗರ ನಿರೀಕ್ಷೆ. 1994-95, 1995-96 ರ ಅವಧಿಯಲ್ಲಿ ಹೀಗಾಗಿತ್ತು. ಜನ ಸಣ್ಣ ಉಳಿತಾಯಗಳ ಬದಲು ಶೇರು ಮಾರುಕಟ್ಟೆಗಳಲ್ಲಿ ಹಣ ತೊಡಗಿಸಲು ಹೋಗಿ ಕೈಸುಟ್ಟುಕೊಂಡಿದ್ದರು. ಇತ್ತೀಚೆಗೆ ರಿಝರ್ವ್ ಬ್ಯಾಂಕ್ ಪ್ರಕಟಿಸಿದ ಗೃಹ ವಲಯದಲ್ಲಿ ಉಳಿತಾಯಗಳ ಕುರಿತಾದ ಅಂಕಿ-ಅಂಶಗಳಿಂದ ಇದು ಕಂಡುಬಂದಿದೆ. (ಕೋಷ್ಟಕ ನೋಡಿ) ವಾಜಪೇಯಿ ಸರಕಾರ ಜನಗಳನ್ನು ಮತ್ತೆ ಅದೇ ಹಳ್ಳಗಳತ್ತ ನೂಕಲು ಮುಂದಾಗಿದೆಯೇ?

ದೇಶದ ಜನಗಳೆಲ್ಲಾ ಬಿಜೆಪಿ ನೇತೃತ್ವದ ಈ ಕ್ರಮವನ್ನು ಬಲವಾಗಿ ಪ್ರತಿರೋಧಿಸಬೇಕು ಎಂದು ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ. ಏಕೆಂದರೆ ಇದು ಸರಕಾರ ಜನಗಳ ಮೇಲೆ ಹೇರಿರುವ ಕಠಿಣ ಕ್ರಮಗಳ ಸರಣಿಯ ಆರಂಭವಷ್ಟೆ. ಮುಂಬರುವ ಬಜೆಟ್ಟಿನಲ್ಲಿ ಸರಕಾರ ಯೋಚಿಸಿರುವ ಕ್ರಮಗಳು ಬಹುಪಾಲು ಭಾರತೀಯರ ಬದುಕಿನ ಮೇಲೆ ಪ್ರತಿಕೂಲ ಪರಿಣಾಮ ಬೀರಲಿರುವುದರ ಮುನ್ಸೂಚನೆ ಇದು.

90 ರ ದಶಕದಲ್ಲಿ ಗೃಹವಲಯದಲ್ಲಿ ಉಳಿತಾಯ
(ಒಟ್ಟು ಮೊತ್ತದಲ್ಲಿ ....% ಭಾಗ)

ವರ್ಷ	90-91	92-93	94-95	95-96	97-98	98-99
1: ಕರೆನ್ಸಿ	10.6	8.2	10.9	13.2	7.2	10.6
2. ಬ್ಯಾಂಕ್ ಠೇವಣಿ	31.9	36.8	38.4	32.0	44.5	36.9
3. ಚಿಟ್ ಫಂಡ್ ಇತ್ಯಾದಿ	2.2	7.5	7.9	10.6	4.4	7.4
4. ಜೀವವಿಮೆ	9.5	8.8	7.8	11.1	10.9	11.00
5. ಭವಿಷ್ಯ ನಿಧಿ ಪೆನ್ಷನ್ ನಿಧಿ	18.9	18.4	14.6	17.8	18.4	18.6
6. ಸರಕಾರದ ಸಣ್ಣ ಉಳಿತಾಯಗಳು	13.4	14.8	9.1	7.7	12.4	13.0
7. ಶೇರುಗಳು ಇತ್ಯಾದಿ	8.4	10.2	9.3	7.1	2.1	2.4
8. ಯುನಿಟ್	5.8	7.0	2.7	0.2	0.3	0.3

(ಮೂಲ: ರಿಝರ್ವ್ ಬ್ಯಾಂಕ್ ವರದಿಗಳಿಂದ)

ಚಿಕ್ಕಮಗಳೂರು ಗಲಭೆಯ ಹಿಂದಿನ ರಾಜಕೀಯ

ಎಸ್.ವೈ.ಗುರುಶಾಂತ್

ಮುಷ್ಟಿಯಲ್ಲಿ ಜೀವ ಬಿಗಿಹಿಡಿದುಕೊಂಡಿದ್ದ ಚಿಕ್ಕಮಗಳೂರು ಜನ ನಿಧಾನವಾಗಿ ಉಸಿರಾಡತೊಡಗಿದ್ದಾರೆ. ಹಾಲು ಮಾರುವ 'ಹಾಲಪ್ಪ', ಪೇಪರ್ ಹಂಚುವ ನಯೀಂ, ತರಕಾರಿ ಮಾರುವ ತಾರಾದೇವಿ, ಹಬೀದುಲ್ಲಾಗಳು ಬೀದಿಗಿಳಿದು ಧೈರ್ಯ ತುಂಬತೊಡಗಿದ್ದಾರೆ. 'ಕರ್ಫ್ಯೂ' ಎಂಬ ಕರಾಳ ಕರ್ಕಶ 'ಹುಕುಂ' ಕೇಳುತ್ತಿಲ್ಲವಾದರೂ 'ಸೆಕ್ಷನ್' ಜಾರಿಯ ಆಜ್ಞೆ ಸಿದ್ಧವಾಗಿ ಸಾಹೇಬರ ಟೇಬಲ್‌ನಿಂದ ಅಂಗಳದೊಳಗೆ ಜಿಗಿಯಲು ಕಾಯುತ್ತಿದೆ. ಅದರಲ್ಲಿ ದಿನಾಂಕ, ಸಮಯ ತುಂಬಬೇಕಷ್ಟೆ. ವಾರದ ದುಡಿಮೆಗೆ ಸಿದ್ಧರಾಗಬೇಕಾಗಿರುವ ಸುತ್ತಲಿನ ಪ್ಲಾಂಟೇಷನ್ ಕಾರ್ಮಿಕರು ಸಂತೆಯಲ್ಲಿ ಹರಡಿಕೊಂಡು ಮೌನದ ಮುಸುಕು ಹರಿದು ಚೌಕಾಶಿ ನಡೆಸಿದ್ದಾರೆ. ಶಾಲೆಗಳು, ಕಛೇರಿಗಳು ತೆರೆದಿವೆ. ಕಾರು-ಬಸ್ಸುಗಳು ಓಡಾಡಿ, ಜನಜೀವನ ಹೊರ ಲೋಕದೊಂದಿಗೆ ತೆರೆದುಕೊಳ್ಳುವಂತೆ ಮಾಡುತ್ತಿವೆ. ಆದರೆ ಗನ್ನು ಹಿಡಿದ ಪೇದೆಗಳು ಊರಲ್ಲಿ ಓಡಾಡುತ್ತಿದ್ದಾರೆ. ಲಾರಿ, ಬೂಟುಗಳು ಸ್ಟ್ರೈಕ್ ಮಾಡಲು ಆಯಕಟ್ಟಿನ ಜಾಗಗಳಲ್ಲಿ ಕಾಯುತ್ತಿವೆ.

'ಕರ್ಫ್ಯೂ' 'ಛೀ' ಕೇಳಬಾರದ ಶಬ್ದ. "ಇದೆಲ್ಲಾ ಯಾಕೆ ಬೇಕಿತ್ತು? ನಾವು ಬಯಸಿರಲಿಲ್ಲ, ಅಂತಹದೊಂದು ದಿನವನ್ನು ನಿರೀಕ್ಷಿಸಿಯೇ ಇರಲಿಲ್ಲ. ನಡೆಯಬಾರದು ನಡೆದುಹೋಯಿತು" ಎಂದು ಮುಖ ಕೆಳಗೆ ಹಾಕುವ ವಿಜಯಪುರದ ಬಡಾವಣೆಯ ಕೃಷ್ಣ 'ಮುಂದೆ ಹೇಗೋ?' ಎಂದು ಆತಂಕಪಡುತ್ತಿದ್ದಾನೆ. 'ಮುಂದೇನು?' ಇದು ಅಲ್ಪಸಂಖ್ಯಾತರ ಪ್ರಶ್ನೆ ಕೂಡ. ಹಗೆತನವಿಲ್ಲದ ಗೆಳತನದ ಎಳೆಗಳಲ್ಲಿ ಬದುಕಿನ ಚಿತ್ತಾರ ನೇಯುತ್ತಿದ್ದ ಜನರ ಮನಗಳಲ್ಲಿ 'ಸಂಶಯ'ದ ವಿಷ ಬೀಜವನ್ನು ಕಿರಾತಕರು ಬಿತ್ತಿಬಿಟ್ಟಿದ್ದಾರೆ. ಮತೀಯವಾದಿಗಳ ಕುಹಕಕ್ಕೆ 'ನಮ್ಮವರು, ತಮ್ಮವರು' ಎಂಬ ಸಣ್ಣ ಮಾತನ್ನಾದರೂ ಕೇಳುವುದು ಮುಂಬರುವ ದುರಂತದ ಆರಂಭ. ಕೈಹಿಡಿದು ನಡೆದಾಡಿದ ಅಂಗಳದಲ್ಲಿ ಕುಂಟ ಬಿಲ್ಲೆ ಆಡಿದ ಎಳೆಯ ಕಂಗಳು ಗರಬಡಿದು ಕಂಪಿಸತೊಡಗಿವೆ. ಮತ್ತೇ ಆತ್ಮವಿಶ್ವಾಸ ಕುದುರಲು ಇನ್ನೆಷ್ಟು ದಿನಗಳು ಬೇಕಾದವು? ಅಷ್ಟರವರೆಗೆ ಮತನ್ಮೋತ್ತರು ಬಿಡಬೇಕಲ್ಲ!

ಚಿಕ್ಕಮಗಳೂರು ಜಿಲ್ಲಾ ಕೇಂದ್ರವಾದರೂ ಹೇಳಿಕೊಳ್ಳುವಂತಹ ಬಹುದೊಡ್ಡ ಪಟ್ಟಣವೇನು ಅಲ್ಲ. ಬಾಬಾಬುಡನ್‌ಗಿರಿಯ ತಂಗಾಳಿ ಹೆಗಲೇರಿಸಿ ಹಿಂತಿರುಗುವಾಗ ಹಗಲು ರಾತ್ರಿಗಳ ಕಣ್ಣು ರೆಪ್ಪೆಗಳು ಕಲೆತಕಾಲದಲ್ಲಿ, ಕವಿಕಲುಗುಂಡಿಯ ಇಳಿಜಾರಿನಿಂದ ಕಾಣುವ ವಿದ್ಯುತ್ ಬೆಳಕಿನ ದೊಡ್ಡ ಸಮೂಹವೇ ಚಿಕ್ಕಮಗಳೂರು. ಕಾಫಿ, ಟೀ, ಏಲಕ್ಕಿ, ಅಡಿಕೆಯಂತಹ ಪ್ಲಾಂಟೇಶನ್‌ಗಳಲ್ಲಿನ ದುಡಿತ, ಅವುಗಳ ವಹಿವಾಟೇ ಪ್ರಧಾನ ಜೀವನಾಡಿ. ಈ ಮಲೆನಾಡಿನ ಜನರ ಬದುಕಿನ ವೈವಿಧ್ಯತೆಯೇ ಒಂದು ತೆರನಾದ್ದು. ಈ ಹಿಂದೆ ಬಹಳ ಹಿಂದೆ ಚಿಕ್ಕಮಗಳೂರು ಖ್ಯಾತಿಯಾದ ಪ್ರಸಂಗ ಒಂದಿದೆ. ತುರ್ತುಪರಿಸ್ಥಿತಿಯ ಕರಾಳ ರಾಣಿಗೆ ರಾಜಕೀಯ ಮರುಹುಟ್ಟು ನೀಡಿದ್ದು ಇದೇ ಚಿಕ್ಕಮಗಳೂರು. ತದನಂತರ ಅಷ್ಟಾಗಿ ಫೇಮಸ್ ಆಗಿರಲಿಲ್ಲ. ಆದರೀಗ ಚಿಕ್ಕಮಗಳೂರು ಮತ್ತೇ ಕುಖ್ಯಾತಿಗೆ ಬರುತ್ತಿದೆ. ಕೋಮುಸೌಹಾರ್ದತೆಯ ಪರಂಪರೆಯ ಪ್ರತೀಕವಾದ ಬಾಬಾಬುಡನ್‌ಗಿರಿಯನ್ನು ಈಗ ಕಲಹದ ಕಣವನ್ನಾಗಿಸಲಾಗುತ್ತಿದೆ. ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ ಸಂಘ ಪರಿವಾರದ ಪಾತಕಿಗಳು ಹಿಂಸೆಯನ್ನೇ ಬಿತ್ತಿಬೆಳೆಯಲು ನಿರತರಾಗಿದ್ದಾರೆ. ಈ ಪಿಸುಮಾತಿನ ವಿಷಕೋರರು ಮನೆ-ಮನಗಳ ಹೊಕ್ಕುವ ಹವಣಿಕೆಯಲ್ಲಿದ್ದಾರೆ.

ಚಿಕ್ಕಮಗಳೂರು ಕೋಮುಸೌಹಾರ್ದತೆಗೆ ಹೆಸರಾದ ಪ್ರದೇಶ. ಇಂತಹ ದುರ್ಘಟನೆಗಳು ನಡೆದ ನೆನಪುಗಳಲ್ಲಿ ಮಿಂದು ನೆನಪುಗಳನ್ನು ತಡಕಾಡಿದ ಹಿರಿಯರನೇಕರು ಹೇಳುತ್ತಾರೆ 'ಸ್ವಾಮಿ ನಮ್ಮೂರಲ್ಲಿ ಇಂತಹದು ನಡೆದಿರಲಿಲ್ಲ. ಈಗ್ಯಾಕೆ' ಎಂದು ಪ್ರಶ್ನಿಸುತ್ತಾರೆ. ಇದೇನೋ ತಮಗೆ ಕಳಂಕವೆಂಬಂತೆ ನಿಟ್ಟುಸಿರಿಡುತ್ತಾರೆ. ಇದು ಆದಷ್ಟು ಬೇಗ ಮರೆಯಾಗಿ ಹೋಗಲಿ' ಎಂದು ನಂಬಿದವನಲ್ಲಿ ಮೊರೆ ಇಡುತ್ತಾರೆ.

ಹೌದು ಈಗ್ಯಾಕೆ ಇಂತಹ ಘಟನೆ?

ಚಿಕ್ಕಮಗಳೂರಿನ ವಿಜಯಪುರದ ವೀರಾಂಜನೇಯನ ದೇವಸ್ಥಾನ ಸಾಧಾರಣವಾದುದು. ದೇವಾಲಯದ ಮಾಳಿಗೆಯ ಮೇಲೆ ರಾಮಲಕ್ಷ್ಮಣ ಸೀತೆಯರ ಮೂರ್ತಿಗಳನ್ನು ನಿಲ್ಲಿಸಲಾಗಿದೆ. ಜನವರಿ 5 ರ ಬುಧುವಾರದಂದು ಬೆಳಿಗ್ಗೆ ಈ ಮೂರ್ತಿಗೆ ಚಪ್ಪಲಿಹಾರ ಹಾಕಲಾಗಿತ್ತೆಂದು, ಆಗಬಹುದಾದ ಅನಾಹುತ ನೆನೆದ ಪೂಜಾರಿ ತಾನೇ ಅದನ್ನು ತೆಗೆದರೆಂದೂ ಅಲ್ಲಿಯ ಜನ ಮಾತನಾಡುತ್ತಾರೆ. ಅಂತಹ 'ಚಪ್ಪಲಿಯ ಹಾರ ಇದೀಗ ಸರ್ಕಲ್ ಇನ್ಸ್‌ಪೆಕ್ಟರ್‌ರವರ ವಶದಲ್ಲಿದೆ' ಎಂದು ದೇವಸ್ಥಾನ ಸಮಿತಿಯ ಅಧ್ಯಕ್ಷ ಕೃಷ್ಣರವರು ಹೇಳುತ್ತಾರೆ. ಇದು ಎರಡನೇ ಬಾರಿ. ಹಿಂದೆ 1992 ರಲ್ಲಿ ಬಾಬ್ರಿ ಮಸೀದಿ ಕೆಡವಿದಾಗ ಯಾರೋ ಕಿಡಿಗೇಡಿಗಳು ಇಂತಹದ್ದೇ ಕೃತ್ಯ ನಡೆಸಿದ್ದರು. ಆದರೆ ಜನ ಉದ್ರೇಕಗೊಳ್ಳಲಿಲ್ಲ. ಈ ಬಾರಿ ಸಹ ಯಾರೆಂದು ಖಚಿತವಾಗಿ ಹೇಳಲಾಗದು" ಮಾತು ನಿಲ್ಲುತ್ತದೆ. ನಮ್ಮಲ್ಲಿ ಒಡನೇ ಏಳುವ ಪ್ರಶ್ನೆ 'ಮತ್ತೆ ಮತ್ತೆ ಇದೇ ದೇವಸ್ಥಾನದ, ಅದೇ ಮೂರ್ತಿಗೆ ಯಾಕೆ ಹಾರ ಹಾಕಲಾಗುತ್ತಿದೆ? ಅಂದು ಬಾಬ್ರಿ ಮಸೀದಿ ಧ್ವಂಸದ ಘಟನೆ, ಇಂದು ಬಾಬಾ ಬುಡನ್‌ಗಿರಿ ದತ್ತಾತ್ರೇಯ ಪೀಠದ ವಿಷಪೂರಿತ ವಿವಾದ. ದತ್ತಾತ್ರೇಯ ಜಯಂತಿ ನಂತರದಲ್ಲಿ ನಡೆದ ಬಜರಂಗದಳ, ವಿಶ್ವಹಿಂದೂ ಪರಿಷತ್, ಬಿಜೆಪಿಯಿಂದ ನಡೆದ ಕೋಮುವಾದಿ ಕೃತ್ಯಗಳು ಇನ್ನೂ ಹಸಿರಾಗಿರುವಾಗಲೇ.... "ನೋಡಿ ಯಾವುದೇ ಹಿಂದೂ ಅಥವಾ ಮುಸ್ಲಿಂ ಧರ್ಮಾನುಯಾಯಿ, ಮೂರ್ತಿಗೆ ಚಪ್ಪಲಿ ಹಾರ ಹಾಕುವ ಅಥವಾ ಮಸೀದಿಯೊಳಗೆ ಹಂದಿ ಮಾಂಸ ಎಸೆಯುವಂತಹ ನೀಚತನ ನಡತೆಯನ್ನು, ಅಂತಹ ಧೈರ್ಯವನ್ನಾಗಲೀ ತೋರಲಾರ. ಇದು ಪರಿಸ್ಥಿತಿಯ ದುರ್ಲಾಭ ಪಡೆಯಲು ಹೊಂಚು ಹಾಕಿದ ದುಷ್ಕರ್ಮಿಗಳ ಸಂಚು ಅಷ್ಟೇ........" ಎನ್ನುತ್ತಾರೆ ಸಾರಿಗೆ ಸಚಿವ ಸಗೀರ್ ಅಹ್ಮದ್. ಚಿಕ್ಕಮಗಳೂರು ಲೋಕಸಭಾ ಕ್ಷೇತ್ರವನ್ನು ಗೆದ್ದಿರುವ ಬಿಜೆಪಿಯು ವಿಧಾನಸಭಾ ಸ್ಥಾನದಲ್ಲಿಯೂ ಕಾಂಗ್ರೆಸ್‌ನ ಕುತ್ತಿಗೆಯವರೆಗೂ ಸ್ಪರ್ಧೆ ನೀಡಿದೆ. ಕೆಲವೇ ನೂರು ಮತಗಳ ಅಂತರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಈ ದುರ್ಘಟನೆ ಹಿಂದೆ ಮತ ಪರಿವರ್ತನೆಯ ಪ್ರಯತ್ನಗಳೂ ಯಾಕಿರಬಾರದು ಎಂದು ಪ್ರಶ್ನಿಸಲಾಗುತ್ತಿದೆ. ಈ ದುರ್ಘಟನೆ ಹಿಂದೆ ಹಿಂದಿದ್ದ ಪೂಜಾರಿಯ ಕೈವಾಡವೂ ಇರಬಹುದು ಎಂಬ ಗುಮಾನಿ ಮಾತುಗಳೂ ಕೇಳುತ್ತವೆ. ಇದು ಒಂದು ಕಡೆಗೆ ಇರಲಿ.

ಜನವರಿ 5 ರಂದು ನಡೆಯಿತೆನ್ನಲಾದ ಘಟನೆಯಲ್ಲಿ ಭಾಗಿಯಾದ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಶಿಕ್ಷೆ ವಿಧಿಸುವಂತೆ ಪೋಲೀಸ್ ಆಡಳಿತಕ್ಕೆ ದೂರು ನೀಡಿ ಸುಮ್ಮನಿರಬಹುದಾಗಿತ್ತು. ಆದರೆ ಹಾಗಾಗಲಿಲ್ಲ. 'ಯಾರಿಗೂ ತಿಳಿಯದಿರಲಿ ಎಂದು ಹಾರ ತೆಗೆಯಲಾಯಿತು" ಎಂದೇನೋ ಹೇಳಲಾಗುತ್ತಿದೆ. ಆದರೆ ಈ ಸುದ್ದಿ ಪಕ್ಕದ ಮನೆಗಳವರಿಗೆ, ಸ್ವತಃ ಸಮಿತಿಯ ಅಧ್ಯಕ್ಷರಿಗೆ ತಿಳಿಯುವ ಮೊದಲು ಸುದ್ದಿ ನಗರದ ದೂರದೂರದ ಬಡಾವಣೆಗಳಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿದ್ದಾದರೂ ಹೇಗೆ? ಈ 'ಖಾಸಗೀ ವಾರ್ತೆ'ಗಳನ್ನು ಬಿತ್ತರಿಸುವ ಸಂಘಟನಾ ಬಲ ಯಾರಿಗಿದೆ? ಜನ ಅದೇನು... ಇದೇನು ನಿಜವಾ...? ಎಂದು ಮಾತನಾಡಿಕೊಳ್ಳುತ್ತಿರುವಾಗಲೇ ಸಂಜೆಯೊಳಗೆ ಬಜರಂಗದಳ-ಸಂಘ ಪರಿವಾರದ ಬೈಠಕ್ ಸೇರಿ ಈ ದುರ್ಘಟನೆಯನ್ನು ಖಂಡಿಸುವ, ಮರುದಿನವೇ ಪ್ರತಿಭಟಿಸುವ ಕಾರ್ಯಕ್ರಮ ರೂಪುಗೊಂಡುಬಿಟ್ಟಿತು. ಈ ನೆಲದ ಕಾನೂನು-ಶಾಸನ- ಆಡಳಿತಗಳಿಗೆ ಕಿಂಚಿತ್ತೂ ಗೌರವ ನೀಡದ ಈ ಮತಾಂಧರು, 'ನೇರ ಕಾರ್ಯಾಚರಣೆ'ಯ ಮೂಲಕ 'ಬುದ್ಧಿ ಕಲಿಸುವ' ಕೆಲಸಕ್ಕೆ ಇಳಿದೇ ಬಿಟ್ಟಿದ್ದರು. ಬೀದರ್‌ನಲ್ಲಿ ಮಾಡಿದಂತೆಯೇ ನಗರದ ಬಂದ್‌ಗೆ ಕರೆ ನೀಡಿದ್ದರು.

ಊರೊಳಗೆ ಗಲಭೆ-ಹಿಂಸೆಗಳು ಭುಗಿಲೇಳುವ ಸಾಧ್ಯತೆಗಳು ನಡೆಯುತ್ತಿರುವಾಗಲೇ ಆರನೇ ತಾರೀಖಿನ ಬೆಳಗ್ಗ ಬಜರಂಗದಳ, ಬಿಜೆಪಿ ನಾಯಕಮಣಿಗಳೂ ಇದ್ದ, ವಿವಿಧ ಕೋಮುಗಳ ಮುಖಂಡರುಗಳಿದ್ದ ಸೌಹಾರ್ದತಾ ಮೆರವಣಿಗೆಯು ದುಷ್ಕರ್ಮಿಗಳ ಪತ್ತೆಗಾಗಿ ಆಗ್ರಹಿಸಿ ತಹಶೀಲ್ದಾರ್ ಕಛೇರಿಯ, ಜಿಲ್ಲಾಧಿಕಾರಿಯ ಕಛೇರಿಯತ್ತ ಹೊರಟಿತು. ಜನರೂ ಈ ಯತ್ನವನ್ನು ಮೆಚ್ಚಿಕೊಂಡರು.



ಆದರೆ......

ಇನ್ನೊಂದು ಕತೆ ನಡೆದದ್ದೇ ಬೇರೆ..... ಜನವರಿ 6 ರಂದು ತಾವು ನಿರ್ಧರಿಸಿದಂತೆ 'ಬಂದ್ ಆಚರಿಸಲು' ಐದಾರು ತಂಡಗಳಲ್ಲಿ ಬಂದ ಬಜರಂಗದಳ -ಆರ್‌ಎಸ್‌ಎಸ್ ಕಾರ್ಯಕರ್ತರು ಬಲವಂತದಿಂದ ಅಂಗಡಿಗಳನ್ನು ಮುಚ್ಚಿಸತೊಡಗಿದರು. ಅಲ್ಪಸಂಖ್ಯಾತರ ವಿರುದ್ಧ ಅತ್ಯಂತ ಕೀಳುಮಟ್ಟದ ಉದ್ರೇಕಕಾರಿ ಘೋಷಣೆ ಕೂಗಿದರು. ಈ ಅತಿರೇಕದ ವರ್ತನೆಗಳನ್ನು ನಿಲ್ಲಿಸಲು ಪೋಲೀಸ್ ಅಧಿಕಾರಿಗಳು ಸೂಚಿಸಿದರೂ, ಲೆಕ್ಕಿಸದೇ ಇನ್ನೂ ಹೆಚ್ಚಿಸಿದರು. ಇವುಗಳಿಂದ ಕೆರಳಿದ ಅಲ್ಪಸಂಖ್ಯಾತರ ಗುಂಪು ಅದನ್ನು ಪ್ರತಿಭಟಿಸಿ - ಪ್ರತಿರೋಧಕ್ಕೆ ಮುಂದಾದಾಗ ಘರ್ಷಣೆ ನಡೆಯಿತು. ಲಾಠಿಚಾರ್ಜ್, ಗೋಲಿಬಾರ್ ನಡೆದವು. ಇರಿತಗಳೂ ಆದವು. ಇದು ಇಷ್ಟಕ್ಕೇ ನಿಲ್ಲದೇ ನಗರದೆಲ್ಲೆಡೇ ಹಬ್ಬಿದವು. ಮಾತ್ರವಲ್ಲ, ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಕೋಟ, ಷರೀಫ್‌ಗಳಲ್ಲಿ, ಅಂಡೆಛತ್ರ, ಬಸವನಹಳ್ಳಿಗಳಲ್ಲಿ ಆಕ್ರಮಣ, ಮನೆಗಳು, ಪ್ರಾರ್ಥನಾ ಸ್ಥಳಗಳ ಮೇಲೆ ಧಾಳಿ, ಚಾಕು ಪ್ರಯೋಗಗಳು ನಡೆದಿವೆ. ಇದಕ್ಕೆ ಅಮಾಯಕರೇ ಬಲಿಗಳಾಗಿದ್ದಾರೆ.

ಕೋಟೆಯಲ್ಲಿನ ದರ್ಗಾಗಳನ್ನು ನಾಶಪಡಿಸಲಾಗಿದೆ ಎಂದು ನಮಗೆ ಕೆಲವರು ಹೇಳಿದರು. ನಮ್ಮ ನಿಯೋಗ ಅಲ್ಲಿಗೆ ತೆರಳಿತು. ವಿಶಾಲಬಯಲಿನಲ್ಲಿ ನಾಲ್ಕಾರು ಹಳೆಯ ಕಾಲದ ದರ್ಗಾಗಳಿವೆ. ಅಲ್ಲಿ ಪೋಲೀಸ್ ಬಂದೋಬಸ್ ಏರ್ಪಟ್ಟಿತ್ತು. ಅಂತಹ ಧ್ವಂಸಕಾರ್ಯ ನಡೆದ ಕುರುಹು ಏನೂ ಇರಲಿಲ್ಲ. ಕೆಲವು ಕಿಡಿಗೇಡಿಗಳು ಬಂದು ಗಲಾಟೆ ಮಾಡಿದರು... ನಾವು ಅವರನ್ನು ಓಡಿಸಿದೆವು' ಎಂದರು ಪೋಲೀಸರು. ಅಲ್ಲಿಯೇ ಇರುವ ಇಮಾಂಸಾಬ್ ಸಹ 'ಅಂತಹದೇನೂ ಹಾನಿ ಆಗಿಲ್ಲ ಸಾರ್' ಎಂದು ಧ್ವನಿಗೂಡಿಸಿದರು.

ಆದರೆ..... ಬಸವನಹಳ್ಳಿಯ ಪ್ರದೇಶಗಳಲ್ಲಿನ ದುರಂತವೇ ಬೇರೆ...

ಬಸವನಹಳ್ಳಿಯಲ್ಲಿ ನಡೆದ ಗಲಭೆ ಬಹಳ ವ್ಯಾಪಕ ಸ್ವರೂಪದ್ದು. ಆ ಪ್ರದೇಶದ ...... ಸಾಹೇಬರು ಮನೆಕಟ್ಟಿಸಬೇಕೆಂದಿರುವ ಜಾಗದಲ್ಲಿ ರಂಜಾನ್‌ನ ಪ್ರಾರ್ಥನೆಗೆಂದು ತಾತ್ಕಾಲಿಕವಾದ ತಗಡಿನ ಟೆಂಟ್ ನಿರ್ಮಿಸಲಾಗಿತ್ತು. ಗಲಭೆ ಹೊತ್ತಿಕೊಂಡ ಕೆಲವೇ ನಿಮಿಷಗಳಲ್ಲಿ ಆರ್.ಎಸ್.ಎಸ್.ನ ಹುಡುಗರ ಗುಂಪು (ಆ ಪ್ರದೇಶದ ಹುಡುಗರೂ ಸೇರಿ) ಈ ಓಣಿಯಲ್ಲಿ ನುಗ್ಗಿ, ಪ್ರಾರ್ಥನೆಯ ಟೆಂಟ್‌ನ ಮೇಲೆ ಧಾಳಿ ನಡೆಸಿದರು. ಫೋಟೋ, ಗಡಿಯಾರ ಧ್ವಂಸವಾದವು. ತಗಡುಗಳು ಕಿತ್ತುಹೋದದ್ದು ಮತ್ತು ಚೂಪಾದ ರಾಡುಗಳಿಂದ ಅಲ್ಲಲ್ಲಿ ತಿವಿದ್ದದ್ದು ಕಂಡು ಬರುತ್ತಿವೆ. ಈ ಜಾಗವನ್ನು ನಾನು ಗಣೇಶನ ಹಬ್ಬಕ್ಕೆ ನೀಡಿದ್ದೇನೆ ಸಾಬ್... ನೋಡಿ ಈಗ ಹೇಗೆ ಮಾಡಿಬಿಟ್ಟಿದ್ದಾರೆ. ನನ್ನಲ್ಲಿ ಭೇದ-ಭಾವ ಇಲ್ಲ' ಎಂದು ಗದ್ಗತರಾಗುತ್ತಾರೆ....."ಸಾಹೇಬರು ಮನೆ ಕಟ್ಟಿಸುವ ಪ್ಲಾನ್ ತೆರೆದಿಟ್ಟು, ಮುನ್ಸಿಪಾಲಿಟಿ ಅಂಗೀಕಾರವನ್ನು ತೋರಿಸುತ್ತಾರೆ. ಈ ಗಲಭೆಕೋರರ ಗುಂಪು ಅಲ್ಲಿನ ಮುಸ್ಲಿಂ ಕುಟುಂಬಗಳ ಮನೆ ಮೇಲೆ ಧಾಳಿ ನಡೆಸಿದೆ. ಹೆಂಚುಗಳನ್ನು - ಕದಗಳನ್ನು ಮನೆಯೊಳಗಿನ ಸಾಮಾನುಗಳನ್ನು ಪುಡಿ ಮಾಡಿದೆ. ರುಕ್ಸಾನಾರ ಹದಿನಾಲ್ಕು ವರ್ಷದ ಮಗಳ ಕೈನ್ನೆಯನ್ನು ಬ್ಲೇಡಿನಿಂದ ಕುಯ್ಯಲಾಗಿದೆ..... "ನಮ್ಮ ಓಣಿಯ ಹುಡುಗರೇ ಸಾ ರ್...... ಇಲ್ಲಿ ರಘು, ಮಾಸ್ತ್ರ ಮತ್ತು ಶೇಷಾದ್ರಿ ಮೇಸ್ಟ್ರಗಳೇ ತಮ್ಮ ಟ್ಯೂಷನ್ ಹುಡುಗರನ್ನು ಪ್ರಚೋದಿಸಿ ಈ ಕೆಲಸಕ್ಕೆ ಕಳಿಸಿದ್ದಾರೆ.... ನಮ್ಮ ಮಗಳು ಮಾಡಿದ್ದಾದರೂ ಏನು?..... ಇವೆಲ್ಲವನ್ನು ಪೋಲೀಸರು ನೋಡುತ್ತಲೇ ನಿಂತಿದ್ದರು ಸಾರ್..... ನಾವು ಇರಬೇಕಾ...ಬೇಡವಾ...." ಎಂದು ಅಳುತ್ತಾಳೆ ರುಕ್ಸಾನಾ. ಆರ್.ಎಸ್.ಎಸ್. ಹುಡುಗರು, ಧಾಳಿ ಮಾಡುವಾಗಲೆಲ್ಲಾ ಅವಾಚ್ಯವಾಗಿ ಬೈಯುತ್ತಿದ್ದರಂತೆ. 'ನಮ್ಮ ವಿಮಾನ ಹಾರಿಸಿಕೊಂಡು ಹೋಗುತಿರಾ ಸೂ....." ಯಾರೋ ಯಾವುದಕ್ಕೋ ವಿಮಾನ ಹಾರಿಸಿಕೊಂಡು ಹೋದರೆ ನಾವೇನು ಮಾಡಬೇಕು?.... ಅದಕ್ಕೂ ನಾವೇ ಬೈಸಿಕೊಳ್ಳಬೇಕಾ?" ಇದು ಹಲವರ ಪ್ರಶ್ನೆ.

ಇಂತಹ ಸಂದರ್ಭದಲ್ಲಿ ಪೋಲೀಸರು ರಕ್ಷಣೆ ನೀಡಲು [illegible] ಹೆಂಗಸರನ್ನು, ಮಕ್ಕಳನ್ನು ಮುದುಕರು-ಹೆಂಗಸರನ್ನು ಬೇಕಾಬಿಟ್ಟಿ ಹೊಡೆದಿದ್ದಾರೆ. ಬಂಗಾರದ ಸಾಮಾನು ಎತ್ತಿದ್ದಾರೆ. ಹಬೀಬುನ್ನಿಸಾ, ರುಕ್ಸಾನಾ, ತರಕಾರಿ ಮಾರುವ ಹಾಶಿಂ.... ತಿಂದ ಏಟುಗಳು ಕಪ್ಪಾಗಿ ಹೆಪ್ಪುಗಟ್ಟಿವೆ. ಧಾಳಿಯಿಂದ ರಕ್ಷಿಸಬೇಕಾದವರೇ ಹೀಗೆ ರಾಕ್ಷಸರಂತೆ ವರ್ತಿಸಿದ್ದಾರೆ. ಗಲಭೆಗೆ ಪ್ರಚೋದಿಸಿದ ರಘು, ಶೇಷಾದ್ರಿ ಮಾಸ್ತರ ಮೇಲೆ ಕ್ರಮ ಯಾಕಿಲ್ಲ? ಎಂದು ನೊಂದ ನಾಗರೀಕರು ಪ್ರಶ್ನಿಸುತ್ತಾರೆ. ಪೋಲೀಸರು ಇಲ್ಲಿ ಮಾತ್ರ ಅಲ್ಲ ಬೇರೆ ಕಡೆಗಳಲ್ಲಿ ವಿವೇಚನಾಶೂನ್ಯರಾಗಿ ಚಚ್ಚಿದ್ದಾರೆ ಎಂಬ ದೂರುಗಳಿವೆ. ಗಲಭೆಗೆ ನಿಜವಾಗಿ ಕಾರಣರಾದವರನ್ನು ಅದರ ನಾಯಕರನ್ನು ಬಂಧಿಸದೇ, ತಪ್ಪಿಸಿಕೊಳ್ಳಲು ಬಿಟ್ಟು ಈಗ ಆರ್ಭಟಿಸುವುದರಲ್ಲಿ ಅರ್ಥವೇನಿದೆ? ಎಷ್ಟೋ ನಿರಪರಾಧಿಗಳು ಪೋಲೀಸರ ವಶದಲ್ಲಿದ್ದಾರೆ ಎಂಬ ಮಾತುಗಳು ಹಲವು. ಆದರೆ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಡಾ. ಪರಮಶಿವಮೂರ್ತಿ ಇವನ್ನೆಲ್ಲಾ ನಿರಾಕರಿಸುತ್ತಾರೆ" ನಾವು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಂಡಿದ್ದೇವೆ. ನಾವು ವಿವೇಚನೆಯಿಲ್ಲದೆ ವರ್ತಿಸಿದ್ದರೆ ಹೆಣಗಳು ಉರುಳುತ್ತಿದ್ದವು. ಟೀಕೆಗಳನ್ನು ಬೇಕಾದವರು ಮಾಡಿಕೊಳ್ಳಬಹುದು. ನಾವೇನು ಮಾಡಲು ಸಾಧ್ಯ....". ಕೋಮು ಗಲಭೆಗಳಾದಾಗ ಪೋಲೀಸರ ಪಾತ್ರವೂ ಬಹಳ ಮುಖ್ಯವಾಗಿರುತ್ತದೆ. ಚಿಕ್ಕಮಗಳೂರು ಘಟನೆಯಲ್ಲಿ ಉಳಿದ ವಿಷಯಗಳ ಜೊತೆಗೆ ಪೋಲೀಸರು ಕೈಗೊಂಡ ಕ್ರಮಗಳು, ತಪ್ಪು ನಿರ್ಧಾರಗಳ ಬಗ್ಗೆ ಪೂರ್ಣವಾದ ತನಿಖೆ ಆಗಬೇಕು, ಇಂತಹ ಘಟನೆಗಳನ್ನು ತಮ್ಮ ವರ್ಚಸ್ಸು ಬೆಳೆಸಿಕೊಳ್ಳಲು ಬಯಸಿದವರು, ಬಳಸಿಕೊಳ್ಳಲು ಮುಂದಾಗಿದ್ದಾರೆ ಎನ್ನುವ ಎಸ್.ಪಿ.ಯವರು ಅವರ್ಯ್ಯಾರು, ಅವರ ಮೇಲೆ ಕ್ರಮ ಏಕಿಲ್ಲ? ಮುಂಜಾಗರೂಕತಾ ಕ್ರಮ ಏನಿತ್ತು? ಗುಪ್ತ ವರದಿ ಇರಲಿಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ಒಟ್ಟಾರೆ ಇಡೀ ಘಟನೆ ಆದಿ-ಅಂತ್ಯಗಳ ಒಳಹೊರಗು ಬಯಲಿಗೆಳೆಯುವ ಸಮಗ್ರ ತನಿಖೆ ಅಗತ್ಯವಿದೆ.

ಅಯೋಧ್ಯಾ ವಿವಾದದ ಸಮಯದಲ್ಲಿಯೂ ಈಗ ಬಾಬಾ ಬುಡನ್‌ಸ್ವಾಮಿ ಪೀಠದ ಸುತ್ತ ನಡೆದಿರುವ ಆಟಾಟೋಪ ಸನ್ನಿವೇಶದಲ್ಲಿಯೂ ಬಜರಂಗ ದಳ-ವಿಶ್ವಹಿಂದು ಪರಿಷತ್ ಎಷ್ಟೆಲ್ಲಾ ಪ್ರಚೋದನಾತ್ಮಕವಾಗಿ ವರ್ತಿಸಿದರೂ, ಸ್ಥಳೀಯವಾದ ಜನತೆಯ ಬೆಂಬಲ ಅವರಿಗಿಲ್ಲ ಎಂಬುದು ಗಮನಾರ್ಹವಾದ ಅಂಶ. ಪ್ರತಿಬಾರಿ ಗಲಾಟೆಯೆಬ್ಬಿಸಲು ಮಂಗಳೂರು, ಶಿವಮೊಗ್ಗಗಳಿಂದ ಹಾರ್ಡ್‌ಕೋರ್ ಆರ್.ಎಸ್.ಎಸ್. ಗಳು ಬರುತ್ತಾರೆ. ಗಲಾಟೆ ವಿವಾದದ ರಾಡಿ ಎರಚಿ, ಶಾಂತಿ ಕದಡಿ ಮರೆಯಾಗುತ್ತಾರೆ. ಆದ್ದರಿಂದಲೇ ಬಾಬ್ರಿ ಮಸೀದಿಯನ್ನು ನಾಶ ಮಾಡಿದಂತೆ ಮುಂದೊಂದು ದಿನ ಬುಡನ್ ಸ್ವಾಮಿ ಪೀಠವನ್ನು ಧ್ವಂಸಗೊಳಿಸಿ, ಆಸ್ತಿಪಾಸ್ತಿಗಳ ಅಧಿಕಾರ ಹೊಡೆಯಬೇಕಾದರೆ ಸ್ಥಳೀಯ ಜನರು ಬೇಕೇಬೇಕು. ಈ ಲೆಕ್ಕಾಚಾರದಿಂದಲೇ ಹಾರ, ಚಾಕು-ಚಾಕು, ಗುರಾಣಿ... ದೊಂಬಿ ಆಟ ನಡೆಸಿರುವದು. ಈ ಅಭಿಪ್ರಾಯ ಹಿರಿಯ ವಕೀಲರಾದ ಹಾಲಪ್ಪನವರಂತೆ ಬಹಳಷ್ಟು ಗಣ್ಯ ನಾಗರೀಕರಲ್ಲಿದೆ. ಚಿಕ್ಕಮಗಳೂರು ಕೋಮುಸೌಹಾರ್ದತೆಯಿಂದ ಮಾತ್ರವೇ ಶಾಂತಿಯಿಂದ ಇರಲು ಸಾಧ್ಯ ಎಂಬ ಅರಿವೂ ಎಲ್ಲಾ ವಿಭಾಗಗಳ ಜನಸಾಮಾನ್ಯರಲ್ಲಿಯೂ ಇದೆ. ಈ ಭಾವನೆಗಳ ಬಲವನ್ನೇ ಕ್ರೋಡೀಕರಿಸಿ ಕೋಮುವಾದಿಗಳ ಹೂಂಕಾರ ಅಡಗಿಸಲು ಸಾಧ್ಯವಿದೆ. ಇದು ಹೆಚ್ಚು ವಿಳಂಭಿಸಕೂಡದು. ತಡವಾದರೆ ಸಂಘಪರಿವಾರ ನಿಧಾನವಾಗಿ ನೆಲೆ ಕಂಡುಕೊಳ್ಳಬಹುದು. ಆದರೆ ಈ ದಿಕ್ಕಿನಲ್ಲಿ ಅಗತ್ಯವಿರುವಷ್ಟು ತೀವ್ರತೆ ಇತರೆ ಸೆಕ್ಯುಲರ್ ಪಕ್ಷಗಳಲ್ಲಿ ಕಂಡುಬರುತ್ತಿಲ್ಲ. ಅಂದರೆ ನಿರಾಶಾದಾಯಕ ಸನ್ನಿವೇಶವೂ ಇಲ್ಲ, ಬಹಳ ಮುಖ್ಯವಾಗಿ ಎಡಪಕ್ಷಗಳು - ಸೆಕ್ಯುಲರ್ ಶಕ್ತಿಗಳು ಮುತುವರ್ಜಿ ವಹಿಸಿದಲ್ಲಿ ಪ್ರತಿಗಾಮಿಗಳ ಆಟವನ್ನು ಸಮರ್ಥವಾಗಿ ಎದುರಿಸಬಹುದು. ಇನ್ನೊಂದೆಡೆ ಧರ್ಮನಿರಪೇಕ್ಷಿತ ಶಕ್ತಿಗಳ ಬೆಂಬಲ ಪಡೆದು ಅಧಿಕಾರಕ್ಕೆ ಏರಿರುವ ಕಾಂಗ್ರೆಸ್ ಸರ್ಕಾರದ ಆಡಳಿತಾತ್ಮಕ ರಾಜಕೀಯ ಕ್ರಮಗಳೂ ಕೂಡ ಮಹತ್ವವನ್ನು ಪಡೆಯುತ್ತವೆ.



ಹಾರ ಹಾಕಲಾಯಿತೆನ್ನಲಾದ [illegible]

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 22

ಹಿಂದಿನ ಸಂಚಿಕೆಯಲ್ಲಿ "......... ವಿಧಾನಸಭೆ ಚುನಾವಣೆಯಲ್ಲಿಯೂ ಕೂಡ ಒಂದು ಗಣನೀಯ ಸ್ಥಾನಗಳು ಗೆಲ್ಲಲು ಕಮ್ಯುನಿಸ್ಟ್ ಪಕ್ಷಕ್ಕೆ ಸಾಧ್ಯಆಯಿತು. ಪ್ರಥಮ ಸಾರ್ವತ್ರಿಕ ಚುನಾವಣೆಯ ನಂತರ ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ರಾಷ್ಟ್ರೀಯ ಪಕ್ಷವಾಗಿ ಮಾನ್ಯತೆ ಪಡೆಯಿತು. ಪಶ್ಚಿಮ ಬಂಗಾಳದಲ್ಲಿ ನನ್ನನ್ನು ಶಾಸಕ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿದರು. ವೃತ್ತಿಪರರೂ ಕೈಗಾರಿಕೋದ್ಯಮಿಗಳು ಹೆಚ್ಚಾಗಿದ್ದ ಕಾಂಗ್ರೆಸ್ ಪಕ್ಷದ ಅನೇಕರನ್ನು ಸೋಲಿಸಿದ ನಾವು ಜನರ ಆಶೋತ್ತರಗಳನ್ನು ಪ್ರತಿನಿಧಿಸುತ್ತಿದ್ದೆವು......."
ಮುಂದೆ ಓದಿ...

ಪಕ್ಷಕ್ಕೆ ಮಾನ್ಯತೆ : ಕಮ್ಯುನಿಸ್ಟ್ ಆಂದೋಲನದ ಮಹತ್ವದ ವಿದ್ಯಮಾನ

ಆಯ್ಕೆಯಾದ ನಾವು ಜನತೆಯ ಆಶೋತ್ತರಗಳನ್ನು ಪ್ರತಿನಿಧಿಸುತ್ತಿದ್ದೆವು. ನಾವೆಲ್ಲರೂ ಬ್ರಿಟಿಷ್ ರಾಜ್ ಅಥವಾ ಸ್ವಾತಂತ್ರ್ಯಾ ನಂತರ ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಜೈಲುವಾಸ ಅನುಭವಿಸಿದವರೇ ಆಗಿದ್ದೆವು. ನಮ್ಮಲ್ಲಿ ಬಹಳಷ್ಟು ಜನರು ದೀರ್ಘಕಾಲ ಭೂಗತ ಜೀವನ ನಡೆಸಿ ಜನತೆಗಾಗಿ ದಣಿವರಿಯದೆ ದುಡಿದವರು. ರಣೇನ್ ಸೇನ್, ಮಣಿಕುಂತಲ ಸೇನ್, ಬೀರೆನ್ ಬ್ಯಾನರ್ಜಿ, ಅಂಬಿಕಾ ಚಕ್ರವರ್ತಿ, ನಾರಾಯಣ ರಾಯ್, ಬಂಕಿಮ್ ಮುಖರ್ಜಿ ಮೊದಲಾದ ಕೆಲ ಹೆಸರುಗಳು ತಕ್ಷಣವೇ ನೆನಪಿಗೆ ಬರುತ್ತವೆ. ಹಳ್ಳಿಗಾಡಿನಿಂದ ಆಯ್ಕೆಯಾದ ನಮ್ಮಲ್ಲಿ ಸಂಗಾತಿಗಳು ರೈತರ ಹೋರಾಟ ಮತ್ತು ಚಳುವಳಿಗಳಲ್ಲಿ ಪಾಲ್ಗೊಂಡು ಬ್ರಿಟಿಷ್ ಹಾಗೂ ಕಾಂಗ್ರೆಸ್ ಆಡಳಿತದಲ್ಲಿ ದಬ್ಬಾಳಿಕೆ, ಶಿಕ್ಷೆ ಅನುಭವಿಸಿದವರೇ.

ಹೇಮಂತ ಬೋಸ್, ಡಾ.ಕನ್ನಯ್ಯಲಾಲ್ ಭಟ್ಟಾಚಾರ್ಯ,. ಜ್ಯೋತಿಶ್ಚಂದ್ರ ಘೋಷ್, ಜ್ಯೋತಿಶ್ ಜೊವರ್ ದಾಸ್ ಮತ್ತು ಅಮರ್ ಬೋಸ್ ಮೊದಲಾದವರು ಫಾರ್ವರ್ಡ್‌ಬ್ಲಾಕ್ ಪಕ್ಷವನ್ನು ಪ್ರತಿನಿಧಿಸಿದ್ದರು.. ಚಾರುಚಂದ್ರ ಭಾಗುರಿ ಮತ್ತು ಹರಿಪಾದ ಚಟರ್ಜಿ ಕೆಎಂಪಿಪಿ ಟಿಕೆಟ್ ಮೇಲೆ ಗೆದ್ದಿದ್ದರು.

ಹಿಂದಿನ ವಿಧಾನಸಭೆಯಲ್ಲಿ ಪ್ರಬಲವಾದ ಪ್ರತಿಪಕ್ಷ ಇರಲಿಲ್ಲ. ಕಮ್ಯುನಿಸ್ಟ್ ಸದಸ್ಯರಾದ ರತನ್ ಲಾಲ್ ಬ್ರಹ್ಮನ್ ಮತ್ತು ನಾನು ಇಬ್ಬರೇ ಪ್ರತಿಪಕ್ಷವನ್ನು ಪ್ರತಿನಿಧಿಸುತ್ತಿದ್ದೆವು. ಆದರೆ 1952 ರ ಚಟುವಟಿಕೆಗಳ ನಂತರ ಪ್ರತಿಪಕ್ಷದ ಬಲ 76 ಕ್ಕೆ ಏರಿತು. ಜನಸಂಘ ಮತ್ತು ಹಿಂದೂ ಮಹಾಸಭಾದ ಏಳು ಸದಸ್ಯರನ್ನು ಬಿಟ್ಟರೆ ನಮ್ಮ ಒಟ್ಟು ಬಲ 69 ಆಗಿತ್ತು. ಅದು ಗಮನಾರ್ಹ ಬಲವಾಗಿತ್ತು.

ಕಮ್ಯುನಿಸ್ಟ್ ಪಕ್ಷ ಆಗಲೇ ವಿಧಾನಸಭೆಯಲ್ಲಿ ಏಕೈಕ ದೊಡ್ಡ ಪ್ರತಿಪಕ್ಷವಾಗಿ ಹೊರಹೊಮ್ಮಿತ್ತು. ಕಮ್ಯುನಿಸ್ಟ್ ಪಕ್ಷವನ್ನು ಪ್ರತಿಪಕ್ಷವನ್ನಾಗಿ ಹಾಗೂ ನನ್ನನ್ನು ಪ್ರತಿಪಕ್ಷದ ನಾಯಕನನ್ನಾಗಿ ಪರಿಗಣಿಸುವಂತೆ ಒತ್ತಾಯಿಸಿ ಸ್ಪೀಕರ್‌ಗೆ ನಾನು ಪತ್ರ ಬರೆದೆ. ಶಾಸಕ ಪಕ್ಷದ ನಾಯಕನಾಗಿ ನಾನು ಈ ಕೆಲಸ ಮಾಡಿದೆ. ನಮ್ಮ ಪಕ್ಷದ ಸದಸ್ಯರ ಪಟ್ಟಿಯನ್ನು ಕೂಡಾ ಸ್ಪೀಕರ್‌ಗೆ ಕಳಿಸಿದೆ. ಆದರೆ ಆಶ್ಚರ್ಯವೆನ್ನುವ ರೀತಿಯಲ್ಲಿ ಸ್ಪೀಕರ್ ಈ ವಿಚಾರವನ್ನು ನಿರ್ಲಕ್ಷಿಸಿದರು. ಹಾಗೂ ಅಂತಿಮವಾಗಿ ನಾಲ್ಕು ಸದಸ್ಯರ ಒಂದು ಸಮಿತಿಯನ್ನು ಜೂನ್ 21 ರಂದು ರಚಿಸಿದರು. ನಮಗೆ ಪ್ರಾತಿನಿಧ್ಯವೇ ಇರಲಿಲ್ಲ. ಬಂಕಿಮ್ ಮುಖರ್ಜಿ ಅವರಂಥ ಹಿರಿಯ ಧುರೀಣರನ್ನು ಕಡೆಗಣಿಸಲಾಯಿತು.

ವಿಚಿತ್ರ ರೂಲಿಂಗ್

ಪ್ರತಿಪಕ್ಷಕ್ಕೆ ಮಾನ್ಯತೆಗೆ ಸಂಬಂಧಿಸಿದಂತೆ ಸ್ಪೀಕರ್‌ಗೆ ತುಂಬಾ ವಿಳಂಬವಾಗಿ ಅಭೂತಪೂರ್ವ ರೂಲಿಂಗ್ ನೀಡಿದರು. ಅವರು ಮುಖ್ಯಮಂತ್ರಿ ಜತೆ ಒಪ್ಪಂದ ಮಾಡಿಕೊಂಡಂತೆ ಕಾಣಿಸುತ್ತಿತ್ತು. ಕಮ್ಯುನಿಸ್ಟ್ ಪಕ್ಷವನ್ನು ಪ್ರತಿಪಕ್ಷವನ್ನಾಗಿ ಮಾನ್ಯ ಮಾಡಲು ಆಗುವುದಿಲ್ಲ ಎಂದು ಸ್ಪೀಕರ್ ತಮ್ಮ ರೂಲಿಂಗ್‌ನಲ್ಲಿ ಹೇಳಿದರು! ಏನಿದ್ದರೂ ನಮಗೆ 'ಮುಖ್ಯ' ಪ್ರತಿಪಕ್ಷದ ಸ್ಥಾನಮಾನ ನೀಡಲಾಯಿತು ಹಾಗೂ ನನ್ನನ್ನು ಅದರ ನಾಯಕನಾಗಿ ನಿಯೋಜಿಸಲಾಯಿತು.

ರೂಲಿಂಗ್ ವಿರುದ್ಧ ನಾನು ಸ್ಪೀಕರ್‌ಗೆ ಪತ್ರ ಬರೆದೆ. ವಾಸ್ತವವಾಗಿ ಪ್ರತಿಪಕ್ಷ ಸಾಲಿನಲ್ಲಿ ನಮ್ಮ ತಂಡ ಮಾತ್ರವೇ ಒಂದು ಪಕ್ಷವನ್ನು ಪ್ರತಿನಿಧಿಸುತ್ತಿತ್ತು. ಉಳಿದ ಎಲ್ಲವೂ ಗುಂಪುಗಳಾಗಿದ್ದವು. ಆದ್ದರಿಂದ 'ಮುಖ್ಯ ಪ್ರತಿಪಕ್ಷ' ಸ್ಥಾನಮಾನ ಅರ್ಥಹೀನವಾಗಿತ್ತು. ಏನಿದ್ದರೂ ಸ್ಪೀಕರ್ ರೂಲಿಂಗ್ ಅನ್ನು ನಾವು ಮನ್ನಿಸಬೇಕಾಗಿತ್ತು. ಎಲ್ಲದರ ನಡುವೆಯೂ ನಮಗೊಂದು ಅನುಕೂಲವಿತ್ತು. ಮುಖ್ಯ ಪ್ರತಿಪಕ್ಷದ ಪ್ರತಿನಿಧಿಗಳಾಗಿ ಚರ್ಚೆಯನ್ನು ಆರಂಭಿಸುವ ಅಧಿಕಾರ ನಮಗಿತ್ತು.

ಅದೂ ಅಲ್ಲದೆ ಕೇವಲ ಕೆಲವು ವರ್ಷಗಳ ಹಿಂದೆ ನಿಷೇಧಿಸಿದ್ದ ಹಾಗೂ ಕಾನೂನುಬಾಹಿರ ಎಂದು ಪರಿಗಣಿಸಲಾಗಿದ್ದ ಅದೇ ಪಕ್ಷಕ್ಕೆ ಅಧಿಕೃತ ಮಾನ್ಯತೆ ಸಿಕ್ಕಿತು. ಇದು ಕಮ್ಯುನಿಸ್ಟ್ ಆಂದೋಲನದಲ್ಲಿ ಒಂದು ಮಹತ್ವದ ಘಟನೆಯಾಗಿದೆ.

ತಂದೆಗೆಷ್ಟು ಖುಷಿ!

ನನ್ನ ಹೊಸ ಸ್ಥಾನಮಾನದಿಂದ ತಂದೆಗೆ ಸ್ವಲ್ಪ ಖುಷಿಯಾಯಿತು. ತಮ್ಮ ಮಗ ಕೊನೆಗೂ ಜೀವನದಲ್ಲಿ ಮೇಲೆ ಬಂದ ಎಂದು ತೃಪ್ತಿಪಟ್ಟರು.

ಆಹಾರ ಬಿಕ್ಕಟ್ಟಿಗೆ ಸಂಬಂಧಿಸಿ ಜೂನ್ 21 ರಂದು ನಾನು ನಿಲುವಳಿ ಗೊತ್ತುವಳಿ ಮಂಡಿಸಿದೆ. ರಾಜಕೀಯ ಕೈದಿಗಳ ಬಿಡುಗಡೆ ವಿಚಾರವಾಗಿ ಗಣೇಶ್ ಘೋಷ್ ಇನ್ನೊಂದು ನಿಲುವಳಿಗೆ ಗೊತ್ತವಳಿ ಮಂಡಿಸಿದರು. ಆದರೆ ಸ್ಪೀಕರ್ ಅವೆರಡನ್ನು ತಿರಸ್ಕರಿಸಿದ್ದರು. ಪ್ರಥಮ ಬಜೆಟ್ ಅಧಿವೇಶನದಲ್ಲಿ ನಮ್ಮ ಬಹುತೇಕ ಎಲ್ಲ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಮತ ನೀಡಿದರು.

ನಾವು ಸರಕಾರಕ್ಕೆ ಅಡ್ಡಿ ಮಾತ್ರ ಉಂಟು ಮಾಡಿದೆವು ಎಂಬುದು ಇದರ ಅರ್ಥವಲ್ಲ. ಹಲವು ಸಂದರ್ಭಗಳಲ್ಲಿ ವಿಧಾನಸಭೆಯಲ್ಲಿ ಅಂಗೀಕರಿಸಿದ ಮೇಲೆ ಕೇಂದ್ರಕ್ಕೆ ಒಮ್ಮತದ ನೋಟಿಸ್‌ಗಳನ್ನು ಕಳಿಸಿದ್ದು ಇದೆ.

ಈ ಅವಧಿಯಲ್ಲಿ ಸಾಮೂಹಿಕ ಸಂಘಟನೆಗಳು ಮತ್ತು ಪ್ರಾಂತೀಯ ಸಮಿತಿಯನ್ನು ಬಲಪಡಿಸಲು ಪ್ರಜ್ಞಾಪೂರ್ವಕ ಪ್ರಯತ್ನ ಮಾಡಿದೆವು. ವಿವಿಧ ಜಿಲ್ಲೆಗಳಲ್ಲಿ ವ್ಯಾಪಕ ಪ್ರವಾಸ ಮಾಡಿದೆವು. ದೊಡ್ಡ ಹಾಗೂ ಸಣ್ಣ ಸಭೆಗಳಲ್ಲಿ ಭಾಗವಹಿಸಿದೆವು.

ಪಕ್ಷದ ಮಹಾಧಿವೇಶನ 1953 ರಲ್ಲಿ ಮಧುರೆಯಲ್ಲಿ ನಡೆಯುವ ಮುನ್ನ ಭಾರತ ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳ ಪ್ರಾಂತೀಯ ಸಮಿತಿ ಕರಡು ರಾಜಕೀಯ ನಿರ್ಣಯವನ್ನು ಚರ್ಚಿಸಿತು. ರಾಜಕೀಯ ಮತ್ತು ಸಂಘಟನಾತ್ಮಕ ವರದಿಗಳ ಮೇಲೆ ದೀರ್ಘ ಚರ್ಚೆಗಳು ನಡೆದವು.

ಪಕ್ಷದ ಮುಂದಿನ ಕಾರ್ಯಕ್ರಮಗಳ ಕುರಿತು ನಿರ್ಣಯಗಳನ್ನು ಅಂಗೀಕರಿಸಿದೆವು. ಹೊಸ ಪ್ರಾಂತೀಯ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸರೋಜ್ ಮುಖರ್ಜಿ, ನಿರಂಜನ್ ಸೇನ್, ಪ್ರಮೋದ್ ದಾಸ್ ಗುಪ್ತ ಮತ್ತು ಮುಝಫರ್ ಅಹಮದ್ ಕೂಡ ಸಮಿತಿಯಲ್ಲಿದ್ದರು. ನನ್ನನ್ನು ಸರ್ವಾನುಮತದಿಂದ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.

ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆ 1954 ರ ಜನವರಿ ಮೊದಲ ವಾರದೊಳಗೆ ಮುಗಿಯಿತು. ಮಧುರೆ ಮಹಾಧಿವೇಶನ ಹೊಸ ಕೇಂದ್ರ ಸಮಿತಿಗೆ 39 ಸದಸ್ಯರನ್ನು ಆಯ್ಕೆ ಮಾಡಿತು. ನಾನೂ ಅದರಲ್ಲಿದ್ದೆ. ಭೂಪೇಶ್ ಗುಪ್ತ ಮತ್ತು ರಣೇನ್ ಸೇನ್‌ರನ್ನು ಸೇರಿಸಿಕೊಳ್ಳಲಾಯಿತು. ಹೊಸ ಕೇಂದ್ರ ಸಮಿತಿಯಲ್ಲಿ ಬಹುತೇಕ ಎಲ್ಲಾ ರಾಜ್ಯಗಳಿಗೆ ಪ್ರಾತಿನಿಧ್ಯವಿತ್ತು.

ಹರಿಕಿಷನ್ ಸಿಂಗ್ ಸುರ್ಜಿತ್, ಅಜಯ್ ಘೋಷ್, ಇ.ಎಂ.ಎಸ್. ನಂಬೂದರಿಪಾಡ್, ಎಸ್.ಎ.ಡಾಂಗೆ, ಪಿ.ರಾಮಮೂರ್ತಿ, ಪಿ.ಸುಂದರಯ್ಯ, ರಣೇನ್, ಝಡ್.ಎ.ಅಹಮದ್ ಮತ್ತು ಸಿ.ರಾಜೇಶ್ವರ ರಾವ್ ಉಳ್ಳ ಒಂಬತ್ತು ಸದಸ್ಯರ ಪಾಲಿಟ್‌ಬ್ಯೂರೋವನ್ನು ರಚಿಸಲಾಯಿತು. 'ಸ್ವಾಧೀನತಾ' ಸಂಪಾದಕೀಯ ಮಂಡಳಿಯ ಮುಖ್ಯಸ್ಥನಾಗಿ ನನ್ನ ಹೆಸರಿದ್ದರೂ ವಾಸ್ತವವಾಗಿ ಭೂಪೇಶ ಗುಪ್ತ ಅದರ ಎಲ್ಲ ಕೆಲಸವನ್ನು ಮಾಡುತ್ತಿದ್ದರು. ಚುನಾವಣೆಗಳ ನಂತರ ಅವರು ಸಂಪಾದಕರಾಗಿ ಕಾರ್ಯಭಾರ ವಹಿಸಿಕೊಂಡರು.

ಈ ನಡುವೆ, ಭೂಪೇಶ್ ಗುಪ್ತ ಲೋಕಸಭೆಯ ಸದಸ್ಯರಾಗಿಯೂ ಆಯ್ಕೆಯಾದರು. ನನಗೆ ನೆನಪಿರುವಂತೆ 1956 ರಲ್ಲಿ ನಡೆದ ಪಾಲ್ಘಾಟ್ ಮಹಾಧಿವೇಶನದ ನಂತರ ಸರೋಜ್ ಮುಖರ್ಜಿ ಅವರನ್ನು ಸಂಪಾದಕರನ್ನಾಗಿ ಮಾಡಲಾಯಿತು.

ಟ್ರಾಮ್ ಟಿಕೆಟ್ ದರ ಏರಿಕೆಗೆ ಪ್ರತಿರೋಧ

1953 ರ ಜುಲೈನಲ್ಲಿ ಅಂದಿನ ಬ್ರಿಟಿಷ್ ಟ್ರಾಮ್ ಕಂಪನಿ ಕಾಂಗ್ರೆಸ್ ಸರಕಾರದ ಅನುಮೋದನೆ ಪಡೆದು ಟ್ರಾಮ್ ಟಿಕೆಟ್‌ದರವನ್ನು ಒಂದು ಪೈಸೆಯನ್ನು ಹೆಚ್ಚಿಸಲು ನಿರ್ಧರಿಸಿತು. ಇದರ ವಿರುದ್ಧ ಎಡಪಕ್ಷಗಳು ಕಲ್ಕತ್ತ ಮತ್ತು ಹೌರಾದಲ್ಲಿ ಭಾರಿ ಬಲಿಷ್ಠವಾದ ಅನಿರ್ದಿಷ್ಟಾವಧಿಯ ಹೋರಾಟವನ್ನು ಸಂಘಟಿಸಿದವು. ಚಳುವಳಿ ಒಂದು ತಿಂಗಳು ಮುಂದುವರಿಯಿತು. ಹೋರಾಟವನ್ನು ದಮನಿಸಲು ಕಾಂಗ್ರೆಸ್ ಸರಕಾರ ಅನುಸರಿಸಿದ ತಂತ್ರಗಳನ್ನು ವಿವರಿಸಲೇ ಅಸಾಧ್ಯ. ಡಾ. ಬಿ.ಸಿ.ರಾಯ್ ಆಗ ವಿದೇಶದಲ್ಲಿದ್ದರು. ಆಹಾರ ಮಂತ್ರಿ ಪ್ರಫುಲ್ಲ ಚಂದ್ರ ಸೇನ್ ಮುಖ್ಯಮಂತ್ರಿಯ ಕಾರ್ಯಭಾರ ನಿಭಾಯಿಸುತ್ತಿದ್ದರು.

ಬ್ರಿಟಿಷ್ ಟ್ರಾಮ್ ಕಂಪನಿ ಅಪಾರ ಲಾಭ ಮಾಡಿಕೊಂಡಿತ್ತು. ಆದರೆ ಪ್ರಯಾಣಿಕರ ಅನುಕೂಲಕ್ಕಾಗಿ ಯಾವುದೇ ಸೌಲಭ್ಯವನ್ನು ಸುಧಾರಿಸಿರಲಿಲ್ಲ. ಪ್ರಯಾಣದರವನ್ನು ಏರಿಸಲು ಕಂಪನಿ ನಿರ್ಧರಿಸಿದಾಗ ನಮ್ಮ ಪಕ್ಷ ಶಾಸನಸಭೆಯ ಒಳಗೂ ಹೊರಗೂ ವ್ಯಾಪಕ ಹೋರಾಟಕ್ಕೆ ಮುಂದಾಯಿತು. ಇತರ ಪ್ರತಿಪಕ್ಷಗಳ ಜತೆ ಸೇರಿ ಪ್ರಯಾಣದರ ಏರಿಕೆ ವಿರೋಧಿ ಸಮಿತಿಯನ್ನು ರಚಿಸಿದೆವು.

ಪ್ರಯಾಣಿಕರಿಗೆ ಕರೆ..

'ಹೊಸದರ ನೀಡಬೇಡಿ... ಆದರೆ ಟ್ರಾಮ್‌ಗಳಲ್ಲಿ ಪ್ರಯಾಣ ಮಾಡಿ" ಇದು 'ಜನರಿಗೆ ನಮ್ಮ ಕರೆಯಾಗಿತ್ತು. ಟ್ರಾಮ್ ಕಂಪನಿಯ ನೌಕರರು ಕೂಡಾ ನಮ್ಮ ಕಡೆಗೆ ಇದ್ದುದರಿಂದ ಈ ಕರೆ ಜಾದೂವಂತೆ ಕೆಲಸ ಮಾಡಿತು. ಪ್ರಯಾಣಿಕರು ಹೊಸದರ ನೀಡಲು ನಿರಾಕರಿಸಿದಾಗ ಕಂಡಕ್ಟರುಗಳು ಅವರಿಗೆ ಟಿಕೆಟ್‌ಗಳನ್ನೇ ನೀಡಲಿಲ್ಲ! ಹೇಗಿದೆ ನೋಡಿ ಹೋರಾಟದ ತಂತ್ರ!

ಎಲ್ಲಾ ಟ್ರಾಮ್ ಕಾರ್‌ಗಳಲ್ಲಿ ಮತ್ತು ಪ್ರತಿ ಡಿಪೋದಲ್ಲಿ ಪೋಲೀಸರು ಹಾಗೂ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿತ್ತು.

ಟ್ರಾಮ್‌ಗಳನ್ನು ಬಹಿಷ್ಕರಿಸಲು ನಾವು ನೀಡಿದ ಕರೆಗೆ ಪ್ರಯಾಣಿಕರು ಅಪೂರ್ವ ರೀತಿಯಲ್ಲಿ ಸ್ಪಂದಿಸಿದರು. ಕಲ್ಕತ್ತದಲ್ಲಿ ಟ್ರಾಮ್‌ಗಳು ಪ್ರಯಾಣಿಕರಿಲ್ಲದೆ ಹಳಿಗಳ ಮೇಲೆ ಓಡಾಡಿದವು. ಅನಂತರ ಟ್ರಾಮ್ ಕಂಪನಿ ಟ್ರಾಮ್‌ಗಳ ಓಡಾಟವನ್ನೇ ನಿಲ್ಲಿಸಿತು. ಆದಾದ ಮೇಲೆ ಅದರ ನೌಕರರು ಮುಷ್ಕರ ಹೂಡಿದರು.

ಚಳುವಳಿ ಕಾಳ್ಗಿಚ್ಚಿನಂತೆ ಹಬ್ಬಿತು. ಕಲ್ಕತ್ತದಾದ್ಯಂತ ಸಭೆಗಳು, ರ್‍ಯಾಲಿಗಳು ನಡೆದವು. ಸರಕಾರ 144ನೇ ಸೆಕ್ಷನ್ ವಿಧಿಸಿತು, ಸಭೆಗಳನ್ನು ನಿಷೇಧಿಸಿತು. ಆದರೆ ಅಶ್ರುವಾಯು ಲಾಠಿ ಪ್ರಹಾರ ಮತ್ತು ಬಂಧನಗಳು ನಡೆದರೂ ನಮ್ಮ ಚಳುವಳಿ ಮುಂದುವರಿಯಿತು

ಹುತಾತ್ಮರಾದರು

ಈ ಆಂದೋಲನದಲ್ಲಿ ಅನೇಕ ಜನರು ಹುತಾತ್ಮರಾದರು. ಹಲವರು ಗಾಯಗೊಂಡರು. ನೂರಾರು ಜನರು ಬಂಧಿತರಾದರು. ಸುಬೋಧ್ ಮಲ್ಲಿಕ್ ಚೌಕದಲ್ಲಿ ಸಭೆಯೊಂದು ನಡೆದ ನಂತರ ಕಮಲಾಯ ಸ್ಟೋರ್ಸ್ ಒಳಗಡೆ ನಾನು ಚಹಾ ಕುಡಿಯುತ್ತಿದ್ದುದು ನೆನಪಿದೆ. ಫಾರ್ವರ್ಡ್ ಬ್ಲಾಕ್(ಮಾರ್ಕ್ಸ್‌ವಾದಿ) ನಾಯಕ ಸತ್ಯಪ್ರಿಯ ಬ್ಯಾನರ್ಜಿ ಕೂಡ ನನ್ನ ಜತೆಗಿದ್ದರು. ಅಂಗಡಿಯಲ್ಲೇ ನಮ್ಮನ್ನು ಬಂಧಿಸಿ ನೇರವಾಗಿ ಸೆರಮನೆಗೆ ಕಳಿಸಲಾಯಿತು.

ನಿಷೇದಾಜ್ಞೆಯಿದ್ದರೂ 1953 ಜುಲೈ 22 ರಂದು ಮೈದಾನದಲ್ಲಿ ಬೃಹತ್ ರ್‍ಯಾಲಿಯನ್ನು ನಡೆಸಲಾಯಿತು. ಸಿಟ್ಟಿಗೆದ್ದ ಪೋಲೀಸರು ಕಾರ್ಯಕರ್ತರ [illegible]

ಬಂದಿದ್ದ ಪತ್ರಕರ್ತರ ಮೇಲೆಯೂ ಹಲ್ಲೆ ಮಾಡಿದರು. ಡೆಪ್ಯುಟಿ ಕಮಿಷನರ್ ಒಬ್ಬರ ನೇತೃತ್ವದಲ್ಲಿ ಪೋಲೀಸರು ಒಬ್ಬ ಛಾಯಾಗ್ರಾಹಕನ ಕ್ಯಾಮರಾವನ್ನು ಕಸಿದುಕೊಂಡರು.

ಪತ್ರಕರ್ತರ ಮೇಲೆ ಹಲ್ಲೆ ನಡೆಸಿದ್ದರಿಂದ ಜನರಿಂದ ಸರಕಾರ ಸಂಪೂರ್ಣವಾಗಿ ಏಕಾಂಗಿಯಾಯಿತು. ಮರುದಿನ ಪತ್ರಿಕೆಗಳಲ್ಲಿ ಪೋಲೀಸ್ ದೌರ್ಜನ್ಯವನ್ನು ದಪ್ಪಕ್ಷರಗಳಲ್ಲಿ ಮುದ್ರಿಸಿ ಖಂಡಿಸಲಾಯಿತು. ಒಂದು ಪತ್ರಿಕೆ ಸಂಪಾದಕೀಯವನ್ನು ಬರೆದು ಸರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳದಿದ್ದರೆ ಪತ್ರಕರ್ತರು ಪ್ರತಿಕ್ರಮ ತೆಗೆದುಕೊಳ್ಳಬೇಕಾದೀತೆಂದು ಎಚ್ಚರಿಸಿತು.

ನಾಚಿಕೆಯಿಲ್ಲದವರು

ಖ್ಯಾತ ಪತ್ರಕರ್ತ ಸತ್ಯನ್ ಮಜುಂದಾರ್, 'ಸತ್ಯಯುಗ್' ಪತ್ರಿಕೆಯ ಸಂಪಾದಕೀಯದಲ್ಲಿ ಪೋಲೀಸರನ್ನು 'ನಾಚಿಕೆಯಿಲ್ಲದವರು' ಎಂದು ಜರಿದರು.

ಕೊನೆಗೂ ಸರಕಾರ ಸೋಲನ್ನೊಪ್ಪಿತು.ಟ್ರಾಮ್ ಪ್ರಯಾಣದರ ಏರಿಸಿದ ಆದೇಶವನ್ನು ಹಿಂತೆಗೆದುಕೊಂಡಿತು. ಪತ್ರಕರ್ತರ ಮೇಲಿನ ಹಲ್ಲೆ ಹಾಗೂ ಪ್ರಯಾಣದರ ಏರಿಕೆಯ ಪ್ರಶ್ನೆಯ ಪರಿಶೀಲನೆಗೆ ಒಂದು ತನಿಖಾ ಆಯೋಗವನ್ನು ಸರಕಾರ ರಚಿಸಿತು.

ಚಳುವಳಿಯಲ್ಲಿ ಬಂಧಿತರಾದವರನ್ನು ಬಿಡುಗಡೆಗೊಳಿಸಲಾಯಿತು. ನಾವು ಆಂದೋಲನವನ್ನು ನಿಲ್ಲಿಸಿದೆವು.

ತನಿಖೆ ಆಯೋಗದ ತೀರ್ಪು ಏಕಪಕ್ಷೀಯವಾಗಿತ್ತು. ತಪ್ಪು ಪತ್ರಕರ್ತರದ್ದೇ ಆಗಿತ್ತು. ಪೋಲೀಸರು ಮುಗ್ಧರಾಗಿದ್ದರು ಎಂದು ಅದು ಹೇಳಿತು. ಈ ತೀರ್ಪಿನ ಸಾರಾಂಶವನ್ನು ಸರಕಾರ 1952 ನವೆಂಬರ್ 4 ರಂದು ಪ್ರಸಾರ ಮಾಡಿತು. ಆದರೆ ಟ್ರಾಮ್ ಪ್ರಯಾಣದರ ಏರಿಕೆ ಕುರಿತ ಆಯೋಗದ ಅಭಿಪ್ರಾಯವನ್ನು ಸರಕಾರ ಬಹಿರಂಗಗೊಳಿಸಲಿಲ್ಲ. ನಾವು ಅಸೆಂಬ್ಲಿಯಲ್ಲಿ ಈ ವಿಷಯವನ್ನು ಎತ್ತಿದರೂ ಡಾ. ರಾಯ್ ಅದಕ್ಕೆ ಸ್ಪಂದಿಸಲೇ ಇಲ್ಲ. ಆಯೋಗದ ವರದಿ ಸರಕಾರ ಅಥವಾ ಟ್ರಾಮ್ ಕಂಪನಿಯ ಪರವಾಗಿ ಇರಲಿಲ್ಲ ಎನ್ನುವುದು ನಂತರ ನಮಗೆ ಗೊತ್ತಾಯಿತು.


1967 ರಲ್ಲಿ, ಬಂಗಾಳದ ಪ್ರಥಮ ಸಂಯುಕ್ತರಂಗ ಸರಕಾರದ ಆಡಳಿತಾವಧಿಯಲ್ಲಿ ಟ್ರಾಮ್ ಕಂಪನಿಯನ್ನು ರಾಷ್ಟ್ರೀಕರಣಗೊಳಿಸಲಾಯಿತು. ನಾನು ಆಗ ರಾಜ್ಯದ ಹಣಕಾಸು ಹಾಗೂ ಸಾರಿಗೆ ಸಚಿವನಾಗಿದ್ದೆ. ಕಲ್ಕತ್ತ ಟ್ರಾಮ್ ವೇಸ್ ಕಂಪನಿ ಈಗ ಒಂದು ರಾಷ್ಟ್ರೀಯ ಸ್ವತ್ತು.

ಸಾಮೂಹಿಕ ಚಳುವಳಿಯ ಸುವರ್ಣ ಅಧ್ಯಾಯ

ಟ್ರಾಮ್ ಪ್ರಯಾಣದರ ಏರಿಕೆ ವಿರುದ್ಧ ನಡೆದ ಆಂದೋಲನವನ್ನು ಭಾರತದ ಸಾಮೂಹಿಕ ಚಳುವಳಿಗಳ ಇತಿಹಾಸದಲ್ಲಿ ಸುವರ್ಣ ಅಕ್ಷರದಿಂದ ಬರೆದಿಡಬೇಕಾದದ್ದು. ಈ ಚಳುವಳಿ ಸಾಮ್ರಾಜ್ಯಶಾಹಿ ವಿರೋಧಿ ನಿಲುವನ್ನು ಕೂಡ ಹೊಂದಿತ್ತು ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಅದೇ ಹೊತ್ತಿಗೆ ಈ ಹೋರಾಟ ಎಡಶಕ್ತಿಗಳ ಒಗ್ಗಟ್ಟಿಗೆ ಹೆಚ್ಚಿನ ಒತ್ತು ನೀಡಿತು ಹಾಗೂ ಅವುಗಳನ್ನು ಹೆಚ್ಚು ಬಲಪಡಿಸಿತು ಕೂಡಾ.

ಕೋಮುವಾದ ಮತ್ತು ಸರ್ವಾಧಿಕಾರಶಾಹಿಯ ಮಾರಕ ಮಿಶ್ರಣ ಈ ವಾಜಪೇಯಿ ನೇತೃತ್ವದ ಸರಕಾರ

ಮೂರನೇ ವಾಜಪೇಯಿ ಸರಕಾರದ ನೂರು ದಿನಗಳು ಪೂರ್ಣಗೊಳ್ಳುತ್ತಿರುವಂತೆ ಅದರ ನಿಜ ಬಣ್ಣ ಸಂಪೂರ್ಣ ಬಯಲಿಗೆ ಬರುತ್ತಿದೆ. ಉತ್ತರ ಪ್ರದೇಶದ ವಿದ್ಯುತ್ ಕಾರ್ಮಿಕರ ಮುಷ್ಕರ, ಬಂದರು ಕಾರ್ಮಿಕರ ಅಖಿಲ ಭಾರತ ಮುಷ್ಕರ ಮತ್ತು ಅದನ್ನು ದಮನ ಮಾಡಲು ಕೈಗೊಂಡಿರುವ ಕ್ರಮಗಳು ಈ ಸರಕಾರದ ಕಾರ್ಮಿಕ-ವಿರೋಧಿ ವರ್ಗಸ್ವಭಾವದತ್ತ ಎಲ್ಲರಗಮನ ಸೆಳೆದಿದೆ. ಸರಕಾರ ಕಾರ್ಮಿಕರ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸುವ ಬದಲು ಸೇನಾಪಡೆಗಳು, ಕೈಗಾರಿಕಾ ಭದ್ರತಾ ಪಡೆಗಳು, ನಾವಿಕ ಪಡೆ, ಕಡಲು ರಕ್ಷಣೆ ಪಡೆ, ಹೋಂಗಾರ್ಡ್ ಮತ್ತಿತರ ಅರೆಸೈನಿಕ ಪಡೆಗಳನ್ನು ಬಳಸಿ ಮುಷ್ಕರ ಮುರಿಯಲು ಮುಂದಾಗಿದೆ. ಅವಶ್ಯಕ ಸೇವಾ ಕಾಯಿದೆ (ಎಸ್ಮಾ),ರಾಷ್ಟ್ರೀಯ ಭದ್ರತಾ ಕಾಯ್ದೆ(ಎನ್.ಎಸ್.ಎ) ಇತ್ಯಾದಿಗಳ ದುರುಪಯೋಗ ಪಡೆಯಲು ಮುಂದಾಗಿದೆ. 35 ವರ್ಷಗಳ ಹಿಂದೆ ತುರ್ತುಪರಿಸ್ಥಿತಿ ಹೇರಿಕೆಯ ಮೊದಲು ನಡೆದ ಐತಿಹಾಸಿಕ ರೈಲ್ವೇ ಮುಷ್ಕರದ ವೇಳೆಗೆ ಆಗಿನ ಇಂದಿರಾಗಾಂಧಿ ಸರ್ಕಾರ ಪ್ರದರ್ಶಿಸಿದ ಸರ್ವಾಧಿಕಾರಶಾಹಿತ್ವ ದೇಶದ ದುಡಿಯುವ ಜನ ಮತ್ತೆ ಕಾಣುತ್ತಿದ್ದಾರೆ.



ಮುಂಬೈನಲ್ಲಿ ಮುಷ್ಕರ ನಿರತ ಬಂದರು ಕಾರ್ಮಿಕರು.

ಆದರೆ ದುಡಿಯುವ ಜನಗಳೂ ಈ 'ಸ್ವದೇಶಿ'ಯ ಹೆಸರಲ್ಲಿ ಮತ ಬಾಚಿಕೊಂಡು ನಾಚಿಕೆಯಿಲ್ಲದೆ ವಿದೇಶಿ ಉದಾರೀಕರಣಕ್ಕೆ ಕೈಹಾಕಿರುವ ಈ ಸರ್ಕಾರದ ವಿರುದ್ಧ ಪ್ರತಿಕ್ರಿಯಿಸಲಾರಂಭಿಸಿದ್ದಾರೆ. ದೃಢ ಪ್ರತಿರೋಧ ತೋರಲಾರಂಭಿಸಿದ್ದಾರೆ. ಕಠಿಣ ಕ್ರಮಗಳನ್ನು ಕೈಗೊಳ್ಳುವುದಾಗಿ ಬೆದರಿಸಿದರೂ ಉತ್ತರ ಪ್ರದೇಶದ ವಿದ್ಯುತ್ ನೌಕರರು ಲೆಕ್ಕಿಸಿಲ್ಲ ಮಾತ್ರವಲ್ಲ, ಉತ್ತರದ ಇತರ ರಾಜ್ಯಗಳ ವಿದ್ಯುತ್ ಕಾರ್ಮಿಕರು, ಇಂಜಿನಿಯರುಗಳು ಅವರ ಬೆಂಬಲಕ್ಕೆ ಧಾವಿಸಿದ್ದಾರೆ. ಸಾರ್ವಜನಿಕ ವಲಯವನ್ನು ಆ ಮೂಲಕ ದೇಶದ ಸಂಪತ್ತನ್ನು ಖಾಸಗಿಯವರಿಗೆ, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಿತಿನ್ನುವ ನೀತಿಗಳಿವು ಎಂಬುದು ಹೆಚ್ಚೆಚ್ಚು ಜನರಿಗೆ ಸ್ಪಷ್ಟವಾಗಲಾರಂಭಿಸಿದೆ. (ವಿದ್ಯುತ್ ಮುಷ್ಕರದ ಬಗ್ಗೆ ಪ್ರತ್ಯೇಕ ವರದಿ ನೋಡಿ)

ಬಂದರು ಕಾರ್ಮಿಕರ ಮುಷ್ಕರ

ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರು ಇಂತಹ ನೀತಿಗಳ ವಿರುದ್ಧ ಒಂದೆಡೆ ದೇಶವ್ಯಾಪಿ ಸಮರದ ರಣಕಹಳೆ ಮೊಳಗಿಸಿದ್ದರೆ ಇನ್ನೊಂದೆಡೆ ಒಂದು ಲಕ್ಷ ಬಂದರು ಕಾರ್ಮಿಕರು ಆಗಲೇ ಅಖಿಲ ಭಾರತ ಅನಿರ್ದಿಷ್ಟ ಮುಷ್ಕರಕ್ಕೆ ಇಳಿದಿದ್ದಾರೆ. (ಈ ಟಿಪ್ಪಣಿ ಬರೆಯುವ ವೇಳೆಗೆ ಮುಷ್ಕರ ಯಶಸ್ವಿಯಾಗಿ ನಾಲ್ಕನೇ ದಿನಕ್ಕೆ ಕಾಲಿಟ್ಟಿದೆ) ದೇಶಿ-ವಿದೇಶಿ ಬಂಡವಾಳಶಾಹಿಗಳು ಕೇಳುವ, ನಿರೀಕ್ಷಿಸುವ ಎಲ್ಲಾ ಬೇಡಿಕೆಗಳನ್ನು ಪೂರೈಸಲು ತುದಿಗಾಲ ಮೇಲೆ ನಿಂತಿರುವ, ಅದಕ್ಕಾಗಿ ದೇಶದ ಆರ್ಥಿಕ ಸಾರ್ವಭೌಮತೆಯನ್ನು ಬಲಿಕೊಡಲು ಹೇಸದ ಸರಕಾರ ಕಾರ್ಮಿಕರ ವೇತನ ಪರಿಷ್ಕರಣಕ್ಕೆ ಎರಡು ವರ್ಷಗಳಾದರೂ ಅಡ್ಡಿ ತರುತ್ತಿದೆ, ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಮೂಲಕ ಅಡ್ಡಗಾಲು ಹಾಕುತ್ತಿದೆ, ಐದು ವರ್ಷಗಳ ಬದಲು ಹತ್ತು ವರ್ಷಗಳವರೆಗೆ ಯಾವ ವೇತನ ಹೆಚ್ಚಳವನ್ನು ಕೇಳಬೇಡಿ ಎನ್ನುತ್ತಿದೆ. ಈ ಹಠಮಾರಿ ನಿಲುವಿನಿಂದಾಗಿ ಡಿಸೆಂಬರ್ 15 ರಂದು ದ್ವಿಪಕ್ಷೀಯ ಮಾತುಕತೆಗಳು ವಿಫಲವಾದ ಹಿನ್ನೆಲೆಯಲ್ಲಿ ದೇಶದ ಹನ್ನೊಂದು ಪ್ರಮುಖ ಬಂದರುಗಳ ಒಂದು ಲಕ್ಷ ಕಾರ್ಮಿಕರನ್ನು ಪ್ರತಿನಿಧಿಸುವ ಹಾಗೂ ಮಾನ್ಯತೆ ಪಡೆದ ಐದು ಒಕ್ಕೂಟಗಳು ಡಿಸೆಂಬರ್ 29 ರಂದು ಅಖಿಲ ಭಾರತ ಪ್ರತಿಭಟನಾ ದಿನವನ್ನು ಆಚರಿಸಿ ಜನವರಿ 18 ರಿಂದ ಒಂದು ಲಕ್ಷ ಕಾರ್ಮಿಕರು ಮುಷ್ಕರ ಆರಂಭಿಸಿ ಮಂಗಳೂರು ಸೇರಿದಂತೆ ಎಲ್ಲಾ ಹನ್ನೊಂದು ಪ್ರಮುಖ ಬಂದರುಗಳಲ್ಲಿ ಚಟುವಟಿಕೆಗಳು ಸಂಪೂರ್ಣ ಸ್ತಬ್ಧಗೊಂಡಾಗ ಹೌಹಾರಿತು. ನಾವಿಕ ಪಡೆಗಳನ್ನು ಬಳಸುತ್ತೇವೆ. ಕಡಲು ಭದ್ರತಾ ಪಡೆಗಳನ್ನು ಬಳಸುತ್ತೇವೆ ಎಂದು ಬೆದರಿಸಿತು; ಕಲ್ಕತ್ತೆಯಲ್ಲಿ ಕೈಗಾರಿಕಾ ಭದ್ರತಾ ಪಡೆಗಳನ್ನು ಛೂ ಬಿಟ್ಟಿತು. ಆದರೂ ಕಾರ್ಮಿಕರು ಜಗ್ಗದೇ ಮುಷ್ಕರವನ್ನು ಮುಂದುವರೆಸಿದ್ದಾರೆ; ವೇತನ ಪರಿಷ್ಕರಣ ಮತ್ರವಲ್ಲ, ಪ್ರಧಾನ ಬಂದರುಗಳ ಮಂಡಳಿಗಳ ಕಾನೂನಿಗೆ ತಿದ್ದುಪಡಿ ತಂದು ಅದನ್ನು ಖಾಸಗೀಕರಿಸುವ ಪ್ರಯತ್ನವನ್ನು ಸರಕಾರ ಕೈಬಿಡಬೇಕೆಂದೂ ಒತ್ತಾಯಿಸುತ್ತಿದ್ದಾರೆ. ಪ್ರಧಾನ ಬಂದರುಗಳಿಗೆ ಕೆಲಸ ಕಾರ್ಯಗಳಲ್ಲಿ ಸಂಪೂರ್ಣ ಸ್ವಾಯತ್ತತೆ ನೀಡಬೇಕು, ಬಂದರುಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ತಪ್ಪಿಸಲು ಸೂಕ್ತ ಪ್ರಾಧಿಕಾರ ರಚಿಸಬೇಕು ಎಂಬುದೂ ಕಾರ್ಮಿಕರ ಬೇಡಿಕೆಗಳಲ್ಲಿ ಸೇರಿವೆ. ವಿದ್ಯುತ್ ಖಾಸಗೀಕರಣಕ್ಕೆ ಮೊದಲ ಬಲವಾದ ಸವಾಲು ಹಾಕಿರುವ ಅದೇ ಉತ್ತರ ಪ್ರದೇಶದಿಂದ ಬಂದಿರುವ ಜಲಸಾರಿಗೆ ಮಂತ್ರಿಗಳು ಈಗ (ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ) ನಿರ್ವಾಹವಿಲ್ಲದೆ ಕಾರ್ಮಿಕ ಒಕ್ಕೂಟಗಳನ್ನು ಮತ್ತೆ ಮಾತುಕತೆಗೆ ಕರೆದಿದ್ದಾರೆ. ಮುಷ್ಕರ ನಿಲ್ಲಿಸಲು ನೆರವಾಗಿ ಎಂದು ಜ್ಯೋತಿಬಸುರವರನ್ನು ಕೇಳಿದ್ದಾರೆ.


ದುಡಿಮೆಗಾರರು ಬೆಲೆತೆರಬೇಕೆ?

ಆದರೆ ದುಡಿಯುವ ವರ್ಗದ ಈ ವಿಭಾಗಗಳು ತೋರಿಸುತ್ತಿರುವ ಈ ದೃಢ ಪ್ರತಿರೋಧ ತಮ್ಮ ನೀತಿಗಳಿಗೆ ತೋರಿಸುತ್ತಿರುವ ನೇರ ವಿರೋಧ ಎಂಬುದು ಈಗಲಾದರೂ ವಾಜಪೇಯಿ ಸರಕಾರದ ಅರಿವಿಗೆ ಬಂದಿದೆಯೇ? ಭಾರತದ ಆರ್ಥಿಕ ಸ್ವಾವಲಂಬನೆಯನ್ನು ಈ ರೀತಿ ಸಂಪೂರ್ಣ ಧ್ವಂಸ ಮಾಡುವ ಹಾದಿಯನ್ನು ದೇಶದ ಕಾರ್ಮಿಕವರ್ಗ ಒಪ್ಪುವುದಿಲ್ಲ ಎಂಬುದನ್ನು ವಾಜಪೇಯಿ ಮತ್ತು ಅವರ ಮಂತ್ರಿಗಳು ಅರಿಯುತ್ತಾರೆಯೇ?

ಸಾಮ್ರಾಜ್ಯಶಾಹಿಗಳಿಗೆ ಜೀ ಹುಜೂರ್ ಎಂದು ತಲೆಬಾಗಿ ಭಾರತದ ಆರ್ಥಿಕವನ್ನು ಒತ್ತೆಯಿಡುವ ತಮ್ಮ ದುಷ್ಟ ಕ್ರಮಗಳಿಗೆ ಬಹುಪಾಲು ದುಡಿಯುವ ಜನ ಬೆಲೆ ತೆರಬೇಕು ಎಂದು ಈ ಸರಕಾರ ನಿರೀಕ್ಷಿಸುತ್ತಿದೆ. 40% ರಷ್ಟು ಅಭೂತಪೂರ್ವ ಡೀಸೆಲ್ ಬೆಲೆಯೇರಿಕೆಮಾಡಿದಂದಿನಿಂದ ಕಠಿಣ ಕ್ರಮಗಳಿಗೆ ಸಿದ್ಧರಾಗಬೇಕು ಎಂದು ಮತ್ತೆ-ಮತ್ತೆ ಹೇಳುತ್ತಿರುವ ಈ ಸರಕಾರ ಪ್ರತಿದಿನ ಎಂಬಂತೆ ಜನಗಳ ಬದುಕಿನ ಮೇಲೆ ನೇರ ಧಾಳಿ ಆರಂಭಿಸಿದೆ. ಮುಂಬರುವ ಬಜೆಟ್ ಕೂಡಾ ಬಹುಪಾಲು ಭಾರತೀಯರ ಮೇಲೆ ಹೊರೆಗಳನ್ನು ಇನ್ನಷ್ಟು ಹೆಚ್ಚಿಸಿ ಶ್ರೀಮಂತರಿಗೆ ಮತ್ತಷ್ಟು ತೆರಿಗೆ ರಿಯಾಯ್ತಿಗಳನ್ನು ಒದಗಿಸುವ ಸಾಧನವಾಗುವ ಲಕ್ಷಣಗಳು ಈಗಾಗಲೇ ಕಾಣಿಸುತ್ತಿದೆ. ಸಂಘಟಿತ ದುಡಿಯುವ ಜನ ವಿಭಾಗ ಇದನ್ನರಿತು ಪ್ರತಿಭಟನೆ ಆರಂಭಿಸಿದ್ದಾರೆ. ಪ್ರತಿರೋಧ ಒಡ್ಡಲಾರಂಭಿಸಿದ್ದಾರೆ. ಈ ನೈಜ ಹಾಗೂ ನ್ಯಾಯಬದ್ಧ ಪ್ರತಿಭಟನೆಗಳನ್ನು ದಮನ ಮಾಡಲು ಸರಕಾರ ಸರ್ವಾಧಿಕಾರಶಾಹಿ ಕ್ರಮಗಳನ್ನು ಅನುಸರಿಸುತ್ತಿದೆ. ಆದ್ದರಿಂದ ಈಗ ಬಹುಪಾಲು ಭಾರತೀಯರು ಪ್ರತಿಭಟನೆಯ ತಮ್ಮ ಪ್ರಜಾಪ್ರಭುತ್ವ ಹಕ್ಕಿನ ಮೇಲೆ ತೀವ್ರ ದಾಳಿಯನ್ನು ಎದುರಿಸಲು ಸನ್ನದ್ಧರಾಗಬೇಕಾಗಿದೆ.

ಈ ವಾಜಪೇಯಿ ಸರಕಾರ ತನ್ನಕೋಮುವಾದಿ ಅಜೆಂಡಾವನ್ನು ನಿರಂತರವಾಗಿ ಅನುಸರಿಸುವ ಮೂಲಕ ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಬೆದರಿಕೆಯೊಡ್ಡಿದೆ ಮಾತ್ರವೇ ಅಲ್ಲ, ದೇಶದ ಆರ್ಥಿಕ ಸಾರ್ವಭೌಮತೆಗೂ ಅಷ್ಟೇ ಗಂಭೀರವಾದ ಬೆದರಿಕೆ ತಂದಿದೆ. ಸಂಬಂಧಪಟ್ಟ ದೇಶಪ್ರೇಮಿಗಳ ನೈಜ ಪ್ರತಿಭಟನೆಗಳನ್ನೆಲ್ಲಾ ಸರ್ವಾಧಿಕಾರಶಾಹಿ ದಮನಕ್ರಮಗಳಿಂದ ಮುಚ್ಚಿ ಹಾಕಲು ಪ್ರಯತ್ನಿಸಲಾಗುತ್ತಿದೆ. ಇಂದು ಆರ್.ಎಸ್.ಎಸ್. - ಬಿಜೆಪಿ ಪ್ರತಿನಿಧಿಸುತ್ತಿರುವುದು ಕೋಮುವಾದ ಮತ್ತು ಸರ್ವಾದಿಕಾರಶಾಹಿಯ ಈ ಅತ್ಯಂತ ಮಾರಕ ಮಿಶ್ರಣವನ್ನು ದೇಶದ ಹಾಗೂ ದೇಶದ ಬಹುಪಾಲು ಜನರ ಹಿತಾಸಕ್ತಿಗಳ ರಕ್ಷಣೆಗಾಗಿ ಈ ಸವಾಲನ್ನು ನೇರವಾಗಿ ಎದುರಿಸಬೇಕಾಗಿದೆ. ○

ಬೆಂಕಿ ಅಪಘಾತದಲಿ ಸಂಗಾತಿ ಬೈಯಪ್ಪರೆಡ್ಡಿ ನಿಧನ



ಸಂಗಾತಿ ಬೈಯಪ್ಪರೆಡ್ಡಿ ತನ್ನ ಇಡೀ ಜೀವನವನ್ನು ಶೋಷಣಾರಹಿತ ಸಮಾಜದ ನಿರ್ಮಾಣಕ್ಕಾಗಿ ಮುಡುಪಾಗಿಟ್ಟು ಹೋರಾಟದ ಮುಂಚೂಣಿಯಲ್ಲಿದ್ದರು. ತಾಲ್ಲೂಕಿನ ಅತಿ ದೊಡ್ಡ ಗ್ರಾಮಪಂಚಾಯ್ತಿಯಾದ ತಿಮ್ಮಂಪಲ್ಲಿ ಮತ್ತು ಗೊರ್ತಪಲ್ಲಿ ಪಂಚಾಯ್ತಿಗಳ ಪಕ್ಷದ ಜವಾಬ್ದಾರಿಯನ್ನು ಹೊತ್ತ ಬೈಯಪ್ಪರೆಡ್ಡಿ ತಾಲ್ಲೂಕಿನ ಪ್ರಾಮಾಣಿಕ ಮುಂದಾಳಾಗಿ ಹೆಸರಾದ ವ್ಯಕ್ತಿಯಾಗಿದ್ದರು. ಬಾಗೇಪಲ್ಲಿಯಲ್ಲಿ ಸಿಪಿಐ(ಎಂ) ಪಕ್ಷದ ನೇತಾರರಾಗಿದ್ದರು ಅಂತಹ ಮುಂದಾಳು 8-1-2000ರಂದು ಸಂಭವಿಸಿದ ಆಕಸ್ಮಿಕ ಬೆಂಕಿ ಅಪಘಾತದಲ್ಲಿ ತನ್ನ ಹೆಂಡತಿಯನ್ನು ಕಾಪಾಡಲು ಹೋಗಿ ಹೆಂಡತಿಯನ್ನು ಕಳೆದುಕೊಂಡು ತಾನು ಕೂಡಾ 13-1-2000ರಂದು ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಮತ್ತು ಅಸಂಖ್ಯ ಸಂಗಾತಿಗಳನ್ನು ಅಗಲಿದ್ದಾರೆ.

8-1-2000ನ ಬೆಳಗ್ಗೆ 5-30ಕ್ಕೆ ಎದ್ದ ಬೈಯಪ್ಪರೆಡ್ಡಿಯವರ ಹೆಂಡತಿ ಸರಸ್ವತಿಯವರು ಹಾಲು ಕರೆದು ಡೈರಿಗೆ ಸಾಗಿಸಿ ತನ್ನ ಹೆಣ್ಣು ಮಕ್ಕಳಿಬ್ಬರನ್ನು ಬಾಗೇಪಲ್ಲಿಗೆ ಶಾಲೆಗೆ ಕಳುಹಿಸಲು ತಿಂಡಿ ರೆಡಿ ಮಾಡಬೇಕಾಗಿತ್ತು. ಸೀಮೆಎಣ್ಣೆಯ ಸ್ಟೌವ್ ಉರಿಸಿದರು. ಸರಸ್ವತಿಯವರಿಗೆ 6 ತಿಂಗಳಿಂದೀಚೆಗೆ ಆಗಾಗ ಮೂರ್ಛೆ ಬರುತ್ತಿತ್ತು, ಅಂದು ಬೆಳಗ್ಗೆ ಎಣ್ಣೆ ಮುಗಿದಿದೆಯೆಂದು

ಬಿದ್ದು ಎಣ್ಣೆ ಸಂಪೂರ್ಣ ಚೆಲ್ಲಿತ್ತು. ಇಡೀ ದೇಹಕ್ಕೆ ಸುತ್ತಿಕೊಂಡ ಎಣ್ಣೆಯಿಂದ ಬೆಂಕಿ ಸುತ್ತಿಕೊಂಡಿತು. ಸಂಪೂರ್ಣ ಬೆಂಕಿ ಸುತ್ತಿಕೊಂಡ ಮೇಲೆ ಪ್ರಜ್ಞೆ ಬಂದ ಸರಸ್ವತಿಯವರು ತಟಕ್ಕನೆ ಚೀರತೊಡಗಿದರು. ಹಿಂದಿನ ರಾತ್ರಿ ಕನಂಪಲ್ಲಿಯಲ್ಲಿ ರೈತ ಸಂಘದ ಸ್ಥಳೀಯ ಘಟಕ ರಚಿಸಿ ತುಂಬಾ ಲೇಟಾಗಿ ಮನೆ ಸೇರಿದ ಇವರ ಪತಿ ಬೈಯ್ಯಪ್ಪರೆಡ್ಡಿ ನಿದ್ದೆ ಮಾಡುತ್ತಿದ್ದರು. ಹೆಂಡತಿಯ ಚೀರಾಟ ತಟಕ್ಕನೆ ಎಬ್ಬಿಸಿತು. ಅಡಿಗೆ ಮನೆಗೆ ಅಂಟಿಕೊಂಡೇ ಇದ್ದ ಕೊಠಡಿ ಅತ್ಯಂತ ಚಿಕ್ಕ ಮನೆ ಅದು. ಎದ್ದಿದ್ದೇ ಅಡಿಗೆ ಮನೆಯ ಬಾಗಿಲು ಹೊಕ್ಕರು. ಅಡಿಗೆ ಮನೆಯಲ್ಲಿನ ದೃಶ್ಯ ಕಂಡು ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಕಂಬಳಿ ಸುತ್ತಬೇಕಾ? ಅಥವಾ ತಣ್ಣೀರೆರಚಬೇಕಾ? ಎನ್ನುವಷ್ಟರಲ್ಲಿ ಸರಸ್ವತಿಯವರು ಬಯಪ್ಪರೆಡ್ಡಿಯವರನ್ನು ನೋಡಿದಾಕ್ಷಣ ಮೃತ್ಯುಕೂಪದಲ್ಲಿ ತೊಳಲಾಡುತ್ತಿದ್ದವರು ತಬ್ಬಿಕೊಂಡರು. ಬೆಂಕಿಯಿಂದ ಬಿಡಿಸಿ ಕೊಳ್ಳುವಷ್ಟರಲ್ಲಿ ಊರಿನ ಜನ ಮನೆಯೊಳಕ್ಕೆ ನುಗ್ಗಿದರು. ನುಗ್ಗಿ ಬಂದ ಜನ ಮೊದಲು ಬೇಯಪ್ಪರೆಡ್ಡಿಯವರನ್ನು ಆಚೆ ಎಳೆದು ತಣ್ಣೀರೆರಚಿ ತಣ್ಣಗೆ ಮಾಡಿದರು. ಆದರೆ ಸರಸ್ವತಿಯವರು ಹೊತ್ತಿಕೊಂಡಿದ್ದ ಬೆಂಕಿಯನ್ನು ಬತ್ತಿಸಲಾಗಲಿಲ್ಲ. ಉರಿದು ಉರಿದು ಕಡೆಗೆ ನೆಲಕ್ಕುರುಳಿದರು. ಸಾವು ಕಟ್ಟಿಟ್ಟ ಬುತ್ತಿಯಾಯಿತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶೇಕಡಾ 80ರಷ್ಟು ಸುಟ್ಟುಹೋಗಿದ್ದ ಸರಸ್ವತಿಯವರು ಅಂದೇ ಕೊನೆಯುಸಿರೆಳೆದರು.

ಆದರೆ ಸಂಗಾತಿ ಬೈಯಪ್ಪರೆಡ್ಡಿಯವರಿಗೆ ಸಾಯುವಂತೆ ಗಾಯಗಳಾಗಿಲ್ಲ ಎಂದು ವೈದ್ಯರು ಹೇಳಿದರಲ್ಲದೇ ಅವರು ಅಪಾಯದಿಂದ ಪಾರಾಗಿದ್ದಾರೆ ಎಂದು ಹೇಳಿದ್ದರು ಆದರೆ ಸೋಂಕು ಹರಡಿ ರಕ್ತ ಪರಿಚಲನೆ ನಿಂತು ಬಿಟ್ಟಿತು, ವೈದ್ಯರು ಕೊಟ್ಟ ಔಷಧಿಗಳು ಕೆಲಸ ಮಾಡಲಿಲ್ಲ, ಅವರನ್ನು ಉಳಿಸಿಕೊಳ್ಳಲಾಗಲಿಲ್ಲ. ಬಾಗೇಪಲ್ಲಿಗೆ ತಲುಪಿದ ಬಯಪ್ಪರೆಡ್ಡಿಯ ಕಳೇಬರ ಒಂದು ಗಂಟೆಯ ಕಾಲ ಸುಂದರಯ್ಯ ಭವನದ ಮುಂದೆ ಸಾರ್ವಜನಿಕರಿಗಾಗಿ

ಅವರ ಹುಟ್ಟೂರಾದ ತಿಮ್ಮಂಪಲ್ಲಿ ಹತ್ತಿರವಿರುವ ಗಂಗಿರೆಡ್ಡಿಪಲ್ಲಿಗೆ ರವಾನಿಸಲಾಯಿತು. ಬಯ್ಯಪ್ಪರೆಡ್ಡಿಯ ಶವ ನೋಡಿದ ದುಡಿಯುವ ಜನರ ಆಕ್ರಂದನ ಆಕಾಶಕ್ಕೆ ಅಂಟಿತು. 14-1-2000ರಂದು ಬೆಳಗ್ಗೆ ಜನರ ಅಶ್ರುತರ್ಪಣೆಯೊಂದಿಗೆ ಶವ ಸಂಸ್ಕಾರ ಮಾಡಲಾಯಿತು.

ಜ. 14 ರಂದು ಸುಂದರಯ್ಯ ಭವನದಲ್ಲಿ ಸೇರಿದ್ದ ಸಿಪಿಐ(ಎಂ) ತಾಲ್ಲೂಕು ಸಮಿತಿ ಅವರ ಪ್ರಾಮಾಣಿಕತೆ, ನಿಷ್ಠೆ, ಶಿಸ್ತನ್ನು ಗುರ್ತಿಸಿತು. ತನ್ನ ಕಟ್ಟಕಡೆಯ ಉಸಿರಿರುವರೆಗೂ ಪಕ್ಷದ ಬಗ್ಗೆ ಚಿಂತಿಸುತ್ತಿದ್ದರೆಂದು ಜಿ.ವಿ.ಎಸ್.ರವರು ತಿಳಿಸಿದರು. ಜ 8 ರ ಹಿಂದಿನ ದಿನ ರಾತ್ರಿ ಕನಾಪಲ್ಲಿಯಲ್ಲಿ ತನ್ನ ಕಟ್ಟಕಡೆಯ ರೈತಸಂಘದ (ಎಐಕೆಎಸ್) ಘಟಕವನ್ನು ಮಾಡಿದ್ದಾರು. ತನ್ನ ಇಡೀ ಜೀವನವನ್ನೇ ತ್ಯಾಗಮಾಡಿ ಪಕ್ಷಕ್ಕಾಗಿ ನಿರಂತರವಾಗಿ ದುಡಿದ ಬೈಯಪ್ಪರೆಡ್ಡಿಗೆ ತಾಲ್ಲೂಕು ಸಮಿತಿ ಶ್ರದ್ಧಾಂಜಲಿ ಅರ್ಪಿಸಿತು. ಸಂಗಾತಿಯವರು ಇಬ್ಬರ ಎಳೆಯ ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. 9 ಮತ್ತು 7 ವರ್ಷದ ಮಕ್ಕಳು ಅಪ್ಪ ಅಮ್ಮನನ್ನು ಕಳೆದುಕೊಂಡು ತಬ್ಬಲಿಗಳಾಗಿದ್ದಾರೆ. ಅವರ ಬದುಕು ಕತ್ತಲೆಯ ಕಡೆಗೆ ಹೋಗದಂತೆ ಅವರ ಬದುಕಿಗೊಂದು ಆಸರೆ ಕೊಡಲು ತಾಲ್ಲೂಕು ಸಮಿತಿ ಚರ್ಚೆ ಮಾಡಿ ಬೈಯಪ್ಪರೆಡ್ಡಿಯವರ ಹೆಸರಿನಲ್ಲಿ ಸಹಾಯಾರ್ಥ ನಿಧಿ ಸ್ಥಾಪಿಸಲು ನಿರ್ಧರಿಸಿದೆ.

ಬೈಯಪ್ಪರೆಡ್ಡಿಯವರು ಬಾಗೇಪಲ್ಲಿ ತಾಲ್ಲೂಕಿನ ತಿಮ್ಮಂಪಲ್ಲಿ ಗ್ರಾಮಪಂಚಾಯ್ತಿಯ ಗೆಂಗಿರೆಡ್ಡಿಪಲ್ಲಿಯ ನಿವಾಸಿಯಾದ ಸಾಮಾನ್ಯ ಸಣ್ಣ ರೈತ ವೆಂಕಟರೆಡ್ಡಿಯವರ ಮಗ. ರೆಡ್ಡಿ ಪ್ರಗತಿಪರ ಆಲೋಚನೆಯುಳ್ಳವರು. ತಾನು ವಿದ್ಯಾರ್ಥಿಯಾಗಿದ್ದಾಗಲೇ ಹೋರಾಟದ ಹಾದಿ ಹಿಡಿದವರು. ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ)ನಲ್ಲಿ ಸಕ್ರಿಯವಾಗಿ ಭಾಗವಹಿಸಿ 1990ರಲ್ಲಿ ಪಕ್ಷದ ಸದಸ್ಯತ್ವವನ್ನು ಪಡೆದು ಹಲವು ಹೋರಾಟಗಳಲ್ಲಿ ಭಾಗಿಯಾಗಿದ್ದಾರೆ. ಪಿ.ಯು.ಸಿ ವರೆಗೆ ಓದಿದ ಬೈಯಪ್ಪರೆಡ್ಡಿ ಬಡತನದ ಬೇಗೆಯಲ್ಲಿ ಬೆಂದು ಮುಂದಿನ ವಿದ್ಯಾಭ್ಯಾಸ

ಬಗ್ಗೆ ಚರ್ಚಿಸುತ್ತಿದ್ದರು. ಜಿ.ವಿ. ಶ್ರೀರಾಮರೆಡ್ಡಿಯವರ ಪರಿಚಯದೊಂದಿಗೆ ಅವರನ್ನು ಡಿ.ವೈ.ಎಫ್.ಐ. ಕಾರ್ಯಕ್ರಮ ಸೆಳೆಯಿತು. ಹೋರಾಟದ ಹಾದಿಯೊಂದೇ ನಮ್ಮನ್ನು ಸಮಸ್ಯೆಗಳ ಸುಳಿಯಿಂದ ಸಂಕೋಲೆಗಳಿಂದ ಬಿಡುಗಡೆಗೊಳಿಸುತ್ತೆಂದು ಅರಿತು ಡಿ.ವೈ.ಎಫ್.ಐನಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 1990ರಲ್ಲಿ ಪಕ್ಷದ ಸದಸ್ಯತ್ವ ಪಡೆದರು. ನಂತರ ರೈತ ಸಂಘದ ತಾಲ್ಲೂಕು ಸಮಿತಿ ಸಹಕಾರ್ಯದರ್ಶಿಯಾಗಿ ಕಾರ್ಯದರ್ಶಿಗಿಂತ ಹೆಚ್ಚಿನ ಹೊರೆಯನ್ನು ಹೊತ್ತರು. ಪ್ರತೀ ಪಂಚಾಯ್ತಿಯಿಂದ 1000 ಸದಸ್ಯತ್ವ ಮಾಡಿಸಬೇಕೆನ್ನುವ ತೀರ್ಮಾನ ರೈತಸಂಘದ ತಾಲ್ಲೂಕು ಸಮಿತಿಯದ್ದಾದರೆ, ತಿಮ್ಮಂಪಲ್ಲಿ ಮತ್ತು ಗೋರ್ತಪಲ್ಲಿ ಪಂಚಾಯ್ತಿಗಳೆರಡರಲ್ಲೇ 5000 ಸದಸ್ಯತ್ವ ಮಾಡಿಸುವನೆಂದು ಅದಕ್ಕಾಗಿ ಹಗಲಿರುಳು ದುಡಿದು ಗುರಿಯ ಹತ್ತಿರ ಬರುತ್ತಿದ್ದರು. ಅಷ್ಟೊತ್ತಿಗೆ ಅವರ ಜೀವವೇ ಇಲ್ಲವಾಯಿತು.1994ರಲ್ಲಿ ನಡೆದ ಪಕ್ಷದ ಸಮ್ಮೇಳನದಲ್ಲಿ ತಾಲ್ಲೂಕು ಸಮಿತಿ ಸದಸ್ಯರಾಗಿ ಆಯ್ಕೆಯಾದರು.

ಪಕ್ಷದ ಸದಸ್ಯರಾಗಿಯಲ್ಲದೇ ತಿಮ್ಮಂಪಲ್ಲಿ ಗ್ರಾಮಪಂಚಾಯ್ತಿ ಸದಸ್ಯರಾಗಿ 1994ರಲ್ಲಿ ಆಯ್ಕೆಯಾಗಿ ಗ್ರಾಮದ ಅಭಿವೃದ್ಧಿಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದ್ದರು. ಗ್ರಾಮ ಪಂಚಾಯ್ತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಗ್ರಾಮಪಂಚಾಯ್ತಿಗಳ ಸೌಲಭ್ಯಗಳು ಸಾಮಾನ್ಯ ಜನರಿಗೆ ಹೇಗೆ ಸಿಗಬೇಕು ಎಂದು ತೋರಿಸಿಕೊಟ್ಟವರು. ಹದಿನೆಂಟು ಜನ ಸದಸ್ಯರಿರುವ ಪಂಚಾಯ್ತಿಯಲ್ಲಿ ಅವರಿಗೆ ವಿಶೇಷವಾದ ಸ್ಥಾನವನ್ನು, ಗೌರವವನ್ನು ಕೊಟ್ಟಿದ್ದರು. ಅತ್ಯಂತ ಪ್ರಾಮಾಣಿಕವಾಗಿ ದುಡಿದರು. ಭ್ರಷ್ಟಾಚಾರ ತುಂಬಿ ತುಳುಕುತ್ತಿರುವ ಪಂಚಾಯ್ತಿಗಳಲ್ಲಿ ಅವರು ಅದಕ್ಕೆ ಅಪವಾದವಾಗಿದ್ದರು. ತಿಮ್ಮಂಪಲ್ಲಿಗೆ ಕುಡಿಯುವ ನೀರು ಒದಗಿಸಲು ಅತ್ಯಂತ ಹೆಚ್ಚು ಶ್ರಮವಹಿಸಿ ಪ್ರಯತ್ನಪಟ್ಟರು. ತಿಮ್ಮಂಪಲ್ಲಿ ಹತ್ತಿರ ವಿದ್ಯುತ್ ಸರಬರಾಜು ಉಪಕೇಂದ್ರವನ್ನು ಸ್ಥಾಪನೆಯಾದಾಗ ಸ್ಥಳ ಕೊಡಿಸಲು ಸಕಲಪ್ರಯತ್ನಗಳನ್ನು

ತೊಗರಿ ಬೇಳೆ ರಾಜಕೀಯ ಅಧ



ಮಾರುತಿ ಮಾನಪಡೆ

ಜಿಲ್ಲೆಯಲ್ಲಿ ತೊಗರಿ ಬೆಳೆಯು ಪ್ರಮುಖ ಬೆಳೆಯಾಗಿ ಬೆಳೆಯಲಾಗುತ್ತದೆ. ಅಂದರೆ 34 ಲಕ್ಷ ಎಕರೆ ಬಿತ್ತನೆ ಪ್ರದೇಶದಲ್ಲಿ 7 ಲಕ್ಷ ಎಕರೆ ಪ್ರದೇಶ ತೊಗರಿ ಬೆಳೆಯಲಾಗುತ್ತದೆ. ಒಟ್ಟು ಬಿತ್ತನೆಯಾಗುವ ಜಮೀನಿನ 25ಅ ತೊಗರಿ ಬೆಳೆಯಲಾಗುತ್ತದೆ. ತೊಗರಿ ಮಿಶ್ರಬೆಳೆಯಾಗಿ ಎರಡು ಸಾಲುಸಜ್ಜೆ ಅಥವಾ ಎಳ್ಳು, ಉದ್ದು, ಮುಂಗಾರು ಜೋಳ. ಒಂದು ಸಾಲು ತೊಗರಿ ಬೆಳೆಯಲಾಗುತ್ತಿದೆ. ಕಳೆದ 10-20 ವರ್ಷಗಳಿಂದ ಏಕ ಬೆಳೆಯಾಗಿ ಬೆಳೆಯಲಾಗುತ್ತಿದೆ. ಜೂನ್ 15 ರಿಂದ ಜುಲೈ 15 ರವರೆಗೆ ಬಿತ್ತಲ್ಪಟ್ಟು ಡಿಸೆಂಬರ್ - ಜನವರಿ ತಿಂಗಳಲ್ಲಿ ಕಟಾವು ಮಾಡಲ್ಪಡುತ್ತದೆ.

ತೊಗರಿ 6 ತಿಂಗಳ ಅವಧಿಯ ಬೆಳೆಯಾಗಿದೆ. ತೊಗರಿಯಲ್ಲಿ ಬಿಳಿ ತೊಗರಿ(ಜಪಾನ್ ತಳಿ), ಕೆಂಪು ತೊಗರಿ (ಮಾರುತಿ), ಕಪ್ಪುತೊಗರಿ ಹೀಗೆ ಮೂರು ಬಣ್ಣದ ತೊಗರಿ ಬೆಳೆಯಲಾಗುತ್ತದೆ. ತೊಗರಿ ಬೆಳೆದು ಸಸಿ ಒಣಗಿ ಹೋಗುವುದು ಒಂದು ಪ್ರಮುಖ ರೋಗ. ಕೆಂಪು ತೊಗರಿ ರಕ್ಷಿತಗೊಂಡಿದೆ. ಕರಿ ತೊಗರಿ ಕಾಯಿ ಕೊರೆಯುವ ಹುಳಗಳಿಂದ ರಕ್ಷಿತಗೊಂಡಿದೆ. ಕರಿತೊಗರಿ ಒಂದು ಎಕರೆಗೆ ಎರಡು ಕ್ವಿಂಟಾಲ್ ಮಾತ್ರ, ಬಿಳಿ ತೊಗರಿ 4 ರಿಂದ 5 ಕ್ವಿಂಟಾಲ್ ಇಳುವರಿ ಬರುತ್ತದೆ. ಕೆಂಪುತೊಗರಿ 3 ರಿಂದ 4 ಕ್ವಿಂಟಾಲ್ ಇಳುವರಿ ಬರುತ್ತದೆ. ಸಧ್ಯ ಒಣಬೇಸಾಯದಲ್ಲಿ ಮಾತ್ರ ತೊಗರಿ ಬೆಳೆಯಲಾಗುತ್ತದೆ. ತೊಗರಿ ಎಲೆಗಳಿಂದ ಭೂಮಿಗೆ ಪುನಃ ಫಲವತ್ತತೆ ಲಭ್ಯವಾಗುತ್ತದೆ. ಜಿಲ್ಲೆಯಲ್ಲಿ ಒಟ್ಟು 2 ಲಕ್ಷ ರೈತರು ತೊಗರಿ ಬೆಳೆಗಾರರಿದ್ದಾರೆ.

ತೊಗರಿ ಬೆಳೆಯುವಲ್ಲಿ ಬಡ-ಮಧ್ಯಮ ವರ್ಗದ ರೈತರು ಹೆಚ್ಚು. ಮಧ್ಯಮ ರೈತರು 10 ರಿಂದ 25 ಕ್ವಿಂಟಾಲ್‌ವರೆಗೆ ಬೆಳೆಯುತ್ತಾರೆ. ಶ್ರೀಮಂತ ರೈತರು 50 ಕ್ವಿಂಟಾಲ್‌ವರೆಗೆ ಬೆಳೆಯುತ್ತಾರೆ.

ಉತ್ಪಾದನಾ ವೆಚ್ಚ: ಒಂದು ತೊಗರಿ ಬಿತ್ತನೆಯಿಂದ ಕಟಾವು ಆಗುವ ವರೆಗಿನ ಖರ್ಚು ಉತ್ಪಾದನಾ ವೆಚ್ಚವೆಂದು ಪರಿಗಣಿಸಿ ಬೆಳೆದು ಒಟ್ಟು ತೊಗರಿಗೆ ವಿಂಗಡಿಸಿ ಪ್ರತಿ ಕ್ವಿಂಟಾಲ್‌ಗೆ ಉತ್ಪಾದನಾ ಖರ್ಚು ತೆಗೆಯುವುದು

ಬೀಜ 4 ಕೆ.ಜಿ. ತಲಾ ಕೆ.ಜಿ.ಗೆ 25 ರೂ.ಗಳಂತೆ	100
ತಿಪ್ಪೆಗೊಬ್ಬರ-20 ಬಂಡಿ ತಲಾಬಂಡಿಗೆ 120	600
ನಾಲ್ಕು ವರ್ಷಕ್ಕ ಬಾಳಿಕೆ	
ರಸಗೊಬ್ಬರ 50 ಕೆ.ಜಿ. ಡಿ.ಎ.ಪಿ.	540
ಕ್ರಿಮಿನಾಶಕ ಒಂದು ಸಲ ಸ್ಪ್ರೇ ಮಾಡಲು	1250
5 ಸಲ ಹರತಿ(ಬೇಸಾಯ) 3 ಸಲ ಎಡೆ	1500
ಮಾನವ ದಿನಗಳು	1500
ಲಾಗೋಡಿ	3600
	6090

ಒಂದು ಎಕರೆಗೆ ಸರಾಸರಿ ಇಳುವರಿ 3 ಕ್ವಿಂಟಾಲ್ ಅಂದರೆ ಒಂದು ಕ್ವಿಂಟಾಲ್ ತೊಗರಿ ಉತ್ಪಾದನಾ ವೆಚ್ಚ 20000 ರೂ. ಎಂದು ಪರಿಗಣಿಸಬಹುದಾಗಿದೆ.

ತೊಗರಿ ಬೆಲೆ ಮಾಡುವ ಖರ್ಚು: ಕಳೆದ ಮೂರು ವರ್ಷಗಳು 1500 ರೂ.ಗಳು ಒಂದು ಕ್ವಿಂಟಾಲ ತೊಗರಿ ಮಾರಾಟವಾಗಿದೆ.

ತೊಗರಿ ಬೆಲೆ(ಕ್ವಿಂಟಾಲ್‌ಗೆ)	ರೂ. 1500
ಬೇಳೆ ಮಾಡುವ ಖರ್ಚು ಕ್ವಿಂಟಾಲ್‌ಗೆ ರೂ.	50
ತೊಗರಿ ಬೇಳೆ ಮಾಡಿದಾಗ 7.4 ಕೆ.ಜಿ ಕಡಿಮೆಯಾಗುತ್ತದೆ	115
ತೂಕ, ಹಮಾಲಿ, ತೆರಿಗೆ ಕಮಿಷನ್	100
ಭೇಳೆ ಮಾಡಿ ಮಾಡಿದವರಿಗೆ ಲಾಭ	100
	1865

ಒಂದು ಕ್ವಿಂಟಾಲ್ ಬೇಳೆಯ ಬೆಲೆ 1865 ರೂ.ಬೇಳೆ (ಗ್ರಾಹಕರಿಗೆ -ಕೃಷಿ ಕೂಲಿಕಾರರು ಪಟ್ಟಣದ ಮಧ್ಯಮ ನೌಕರರು) ಮಾರಾಟ ಮಾಡಬೇಕು.

ಮಧ್ಯವರ್ತಿಗಳಿಂದ ಶೋಷಣೆ: ರೈತರ ಒಂದು ಕ್ವಿಂಟಾಲ್ ತೊಗರಿ ಉತ್ಪಾದನೆ ಮಾಡಲು ಸುಮಾರು 2000 ರೂ. ಗಳಷ್ಟು ಖರ್ಚು ಮತ್ತು ಶ್ರಮ ಹಾಕುತ್ತಾನೆ. ಸುಗ್ಗಿಯಲ್ಲಿ ಅವನಿಗೆ ಒಂದು ಕ್ವಿಂಟಾಲ್ ತೊಗರಿಗೆ ಲಭ್ಯವಾಗುವುದು. 1400 ರಿಂದ 1500 ರೂ.ಗಳು ಮಾತ್ರ ಅಂದರೆ ಒಂದು ಕ್ವಿಂಟಾಲ್ ತೊಗರಿಗೆ 500 ರಿಂದ 600 ರೂ.ಗಳು ತಡಿಮೆ ಬೆಲೆಗೆ ಖರೀದಿ ಮಾಡುವ ಮೂಲಕ ರೈತನನ್ನು ವ್ಯಾಪಾರಸ್ಥರು ಶೋಷಣೆ ಮಾಡುತ್ತಿದೆ. ಇದು ರೈತನ ಶ್ರಮದ ಫಲ ಕಸಿದುಕೊಳ್ಳುವುದಾಗಿದೆ. ಸಾವ-ಭಾವ ಯಾರ ಕೈಯಲ್ಲಿದೆ, ಸಾವ-ಭಾವ(ಬೆಲೆ) ನಿರ್ಧರಿಸುವುದು ಮೇಲಿನವರ ಕೈಯಲ್ಲಿದೆ. ನಾವೇನಿದ್ದರೂ ಆಟದ ಗೊಂಬೆಗಳು ಎಂದು ಅಡತಿ ಅಂಗಡಿ ಮಾಲಕರು ದಲ್ಲಾಳಿಗಳು ತೊಗರಿ ಖರೀದಿದಾರರು ರೈತಾಪಿ ಜನತೆಯ ಮೌಢ್ಯತೆ ಧಾರ್ಮಿಕ ನಂಬಿಕೆ ಉದ್ರೇಕಗೊಳಿಸಿ ಶೋಷಣೆ ಮಾಡಲಾಗುತ್ತಿದೆ.

ಮಾರುಕಟ್ಟೆಯು ಮೇಲೆ ಪಾಳೇಯಗಾರಿ ಹಿಡಿತ: ಗುಲಬರ್ಗ ನಗರದಲ್ಲಿ 72 ಬೇಳೆ ಕಾರ್ಖಾನೆಗಳು ಇವೆ. ಹಳ್ಳಿಯಲ್ಲಿ 100 ರಿಂದ 500 ಎಕರೆ ಜಮೀನುಳ್ಳವರು ಪಟ್ಟಣಕ್ಕೆ ಬಂದು ತೊಗರಿ ಮತ್ತು ಬೇಳೆ ವ್ಯಾಪಾರದಲ್ಲಿ ತೊಡಗಿದರು. ಎಸ್.ಬಿ.ಪಾಟೀಲ, ಜಿ.ಆರ್.ಪಾಟೀಲ, ಎಲ್.ಆರ್.ಪಾಟೀಲ, ಎಸ್.ಎಸ್.ಪಾಟೀಲ, ಬಸರಡ್ಡಿ ಇಟಗಿ ಮುಂತಾದ ಜಮೀನ್ದಾರರೇ ಮೊದಲು ಬೇಳೆ ಮಾಡಿ ಮಾರಾಟ ಮಾಡುವ ದಂಧೆಯಲ್ಲಿ ತೊಡಗಿದರು. ಶರಣ ಬಸವೇಶ್ವರದೇವಸ್ಥಾನ ದರ್ಮಾದಾದ ಪಂಡ ಸಂಗ್ರಹ ಮಾಡುವುದು ... ಧಾನ್ಯ ಸಂಗ್ರಹಿಸುವುದು ಶರಣ ಬಸವೇಶ್ವರ ಜಾತ್ರೆಯ ಸಂದರ್ಭದಲ್ಲಿ 15 ದಿವಸಗಳ ಕಾಲ ದವಸ ಧಾನ್ಯಗಳ ಮಾರುಕಟ್ಟೆಯನ್ನು ಜಾತ್ರೆಯಲ್ಲಿ ನಡೆಸುವುದು. ರೈತಾಪಿ ಜನತೆಯ ಧಾರ್ಮಿಕ ನಂಬಿಕೆಯನ್ನು ವ್ಯಾಪಾರದಲ್ಲಿ ಬಳಕೆ ಮಾಡಲಾಯಿತು. ಎಲ್ಲದಕ್ಕೂ ಶರಣದ ಕೃಪಾ ಎಂದು ರೈತರ ಶೋಷಣೆ ಶರಣ ಕೃಪಾ ಮುದ್ರೆಯೊತ್ತಲಾಯಿತು.

ಬಡ ರೈತರೇ ಹೆಚ್ಚು ಶೋಷಣೆಗೆ ಒಳಪಟ್ಟರು: ಬಿತ್ತು ಬೀಜ, ರಸಗೊಬ್ಬರ, ಕ್ರಿಮಿನಾಶಕ(ಉದ್ರಿ) ಸಾಲವಾಗಿ ಅಡತಿ ಅಂಗಡಿ ಮಾಲಿಕರಿಂದ ಶೇ 60ಬಡ್ಡಿಯಿಂದ ಸಾಲವಾಗಿ ಬಿತ್ತನೆ ಕಾಲದಲ್ಲಿ ಸಾಮಾನ್ಯವಾಗಿ ತೆಗೆದುಕೊಂಡು ಹೋಗುತ್ತಾರೆ. ತೊಗರಿ ಕಟಾವು ಆದಕೂಡಲೇ ಹಣದ ವಸೂಲಿಗೆ ಹಾಗೂ ತೊಗರಿ ಖರೀದಿಗೆ ಗ್ರಾಮ ಗ್ರಾಮಗಳಿಗೆ ಮನೆ ಮನೆಗೆ ಭಂಟರನ್ನು ಕಳುಹಿಸುವದು ವಾಡಿಕೆ. ಹಿಂದೆ ಕುದುರೆ ಮೇಲೆ ಬಾಕಿ ವಸೂಲಿಗೆ ಓಡಾಡಿದರೆ ಈಗ ಹೀರೋ ಹೊಂಡಾ ಗಾಡಿಗಳ (ಮೋಟಾರು ಸೈಕಲ್) ಮೇಲೆ ಮನೆ ಮನೆ ವಸೂಲಿಗಾಗಿ ಓಡಾಡುವುದು.

ಕುಸಿದ ಸಹಕಾರಿ ವ್ಯವಸ್ಥೆ: ಜಿಲ್ಲೆಯ ಸಹಕಾರಿ ವ್ಯವಸ್ಥೆ ಶ್ರೀಮಂತ ರೈತರ ಮತ್ತು ಜಮೀನ್ದಾರರು ದುರ್ಬಳಕೆ ಮಾಡಿದ್ದರಿಂದ ಇಡೀ ಸಹಕಾರ ಸಂಘಗಳ ಚಟುವಟಿಕೆ ಸ್ಥಗಿತಗೊಂಡಿದೆ. ಬಡ ರೈತರು ಅಡತಿ ಅಂಗಡಿಗಳ ಮಾಲಕರು, ಹಳ್ಳಿಯ ಶ್ರೀಮಂತರಿಂದ ಸಾಲಗಾರರಾಗಿದ್ದಾರೆ. ಬಡರೈತರ ಎತ್ತುಗಳು, ಮಾರಾಟ ಮಾಡಿ ಸಾಲ ವಸೂಲಾತಿ ಮಾಡುವುದು ಹೊಡೆದು ಬಡಿದು ಸಾಲ ವಸೂಲಾತಿ ಮಾಡುವುದು ಬಡ ರೈತರ ಮಕ್ಕಳನ್ನು ಸಾಲದಲ್ಲಿ ದುಡಿಯಲು ಇಟ್ಟುಕೊಳ್ಳುವುದು ಇದ್ದಬದ್ದ ಸ್ವಲ್ಪ ಜಮೀನನ್ನು ಮಾರಾಟ ಮಾಡಿಸುವುದು ಇತ್ಯಾದಿ ಸರ್ವೇಸಾಮಾನ್ಯವಾಗಿದೆ. ಸಾಲಕೊಡಿಸುವ ಪ್ರಭಾವಿ ಮಧ್ಯವರ್ತಿಗಳು ಸಾಲ ವಸೂಲಾತಿಗೆ ಓಡಾಡುವ ಬಾಡಿಗೆ ಬಂಟರು ಪ್ರತಿ ಹಳ್ಳಿಯಲ್ಲಿಯೂ ಸಿಗುತ್ತಾರೆ. ಸಾಲ ವಸೂಲಾತಿಗೆ ಕೃಷಿ ಕೂಲಿಕಾರರನ್ನು ನಿರುದ್ಯೋಗಿ ಕೂಲಿಕಾರರ ಮಕ್ಕಳನ್ನು ರೌಡಿಗಳಂತೆ ಬಳಸಿಕೊಳ್ಳುತ್ತಾರೆ. ಗುಲಬರ್ಗ ಜಿಲ್ಲೆಯ ತೊಗರಿ ಮಾರುಕಟ್ಟೆಯಲ್ಲಿ ಕೆಲಸ ಮಾಡುವ ಹಮಾಲಿಗೆ, ಕಸ ಗುಡಿಸುವವರಿಗೆ, ತೊಗರಿ ಸ್ವಚ್ಛ ಮಾಡುವವರಿಗೆ ತೊಗರಿ ಕೊಡಲಾಗುತ್ತದೆ. ಹಳ್ಳಿಗಳಲ್ಲಿ ಹಿಂದೆ ಕೂಲಿಕಾರರಿಗೆ ಕೂಲಿಯಾಗಿ ಧಾನ್ಯ ಕೊಡುವ ಪದ್ಧತಿ ಇತ್ತು. ಆದರೆ ಗುಲಬರ್ಗದಂತಹ ಪಟ್ಟಣದಲ್ಲಿಯೂ ತೊಗರಿ (ಧಾನ್ಯ) ಕೊಡುವ ಪದ್ಧತಿ ಮುಂದುವರೆದಿದೆ.

ಗ್ರಾಹಕರ ಶೋಷಣ: 1500 ಕ್ವಿಂಟಾಲ್ ರೈತರಿಂದ ಖರೀದಿ ಮಾಡಿದ ತೊಗರಿಯನ್ನು ಬೇಳೆ ಮಾಡಲು ತೆರಿಗೆ, ಹಮಾಲಿ ಟ್ರಾನ್ಸ್‌ಪೋರ್ಟ್, ಲಾಭ ಇತ್ಯಾದಿ ಜೊತೆಗೆ ಸೇರಿಸಿದರೂ 1865 ಕ್ವಿಂಟಾಲ್ ಬೇಳೆ ಮಾರಾಟ ಮಾಡಿದರೂ 100 ರೂ.ಗಳು ನಿವ್ವಳ ಲಾಭವಾಗುತ್ತದೆ. ಆದರೆ ಕಳೆದ ಮೂರು ವರ್ಷಗಳ ಬೆಳೆಯ ಬೆಲೆ ಗಮನಿಸಿದರೂ ಸುಗ್ಗಿ ಅಲ್ಲದ ಕಾಲದಲ್ಲಿ 3,000-3,500 ರೂಪಾಯಿಗಳಿಗೆ ಕ್ವಿಂಟಾಲ್ ಬೇಳೆ ಮಾರಾಟ ... ರೂಗಳು ಒಂದು ಕ್ವಿಂಟಾಲ್‌ನಿಂದ ಲಾಭ ಪಡೆಯಲಾಗಿದೆ.

ಗುಲಬರ್ಗ ಜಿಲ್ಲೆಯ ಸೇಡಂ ಚಿತ್ತಾಪೂರ, ನಾಲವಾರ, ಯಾದಗೀರ, ಗುಲಬರ್ಗ, ತೊಗರಿ ಖರೀದಿ ಮಾಡ್ತಿ ಬೇಳೆ ಮಾಡಿ ಮಾರಾಟ ಮಾಡುವ ಕೇಂದ್ರಗಳಾಗಿವೆ. ಮಹಾರಾಷ್ಟ್ರದ, ಬಾತೂರ, ಆಂಧ್ರದ ತಾಂಡೂರ ಕೂಡ ತೊಗರಿ ಮಾರಾಟ ಮಾಡುವ ಕೇಂದ್ರಗಳಾಗಿವೆ. ಗುಲಬರ್ಗ ಜಿಲ್ಲೆಯಲ್ಲಿಯೇ ಒಟ್ಟು ಉತ್ಪಾದನೆಯ ಅರ್ಧದಷ್ಟು ಅಂದರೆ 10 ಲಕ್ಷ ಕ್ವಿಂಟಾಲ್ ತೊಗರಿ ಮಾರಾಟವಾಗುತ್ತದೆ. ಇಲ್ಲಿಯ ಜಮೀನ್ದಾರರೇ ಈಗಿನ ತೊಗರಿ ಬೇಳೆ ಕಾರ್ಖಾನೆಯ ಮಾಲಿಕರಾಗಿ ಮಾರಾಟಗಾರರಾಗಿದ್ದಾರೆ. ತೊಗರಿ ಬೇಳೆ ಆಂಧ್ರ ಪ್ರದೇಶ, ತಮಿಳುನಾಡು, ಕೇರಳ, ಹಳೇ ಮೈಸೂರು ಪ್ರದೇಶದಲ್ಲಿ ಬೇಳೆ ಮಾರಾಟದ ಪ್ರದೇಶಗಳಾಗಿವೆ.

ಕೆಲವೇ ಜನ ಬೇಳೆ ಕಾರ್ಖಾನೆ ಮಾಲಿಕರು ರೈತರಿಂದಲೂ ಹಾಗೂ ಗ್ರಾಹಕರಿಂದಲೂ ಶೋಷಣೆ ಕಾರಣರಾಗಿದ್ದಾರೆ. ಲಾಭದ ಶೇಖರಣೆ ಅಪಾರವಾಗಿದೆ. ತೊಗರಿ ಬೆಳೆಗಾರರಿಂದ ಶೇಖರಿಸಿದ ಲಾಭವೇ ಹೈದ್ರಾಬಾದ್, ನಾಗಪೂರ, ಪುನೆ, ಮತ್ತಿತರ ಕಡೆಗಳಲ್ಲಿ ಗುಲಬರ್ಗದ ಬೇಳೆ ಕಾರ್ಖಾನೆ ಮಾಲಿಕರು ಬಂಡವಾಳ ತೊಡಗಿಸಿದ್ದಾರೆ. ಹೆಚ್ಚಿನ ಹಣ ಜೂಜು, ಬಾಂಬೆಯಂತಹ ಪಟ್ಟಣಗಳಲ್ಲಿ ಮೋಜುಗಾರಿಕೆ ವಿದೇಶಗಳಿಗೆ ಟ್ರಿಪ್ ಇತ್ಯಾದಿ ಇಲ್ಲಿಯ ಬಂಡವಾಳ (ಪಾಳೆಯಗಾರಿ ಪ್ರಭಾವದ)ಗಾರರ ಹವ್ಯಾಸವಾಗಿದೆ.

ಜಿಲ್ಲೆಯ ರಾಜಕೀಯದ ಮೇಲೆ ಬೇಳೆ ಕಾರ್ಖಾನೆ ಮಾಲಿಕರ ಹಿಡಿತ

ದಿ|| ವೀರೇಂದ್ರ ಪಾಟೀಲರ ಜೊತೆ ನಿಕಟ ಸಂಬಂಧ ಇಲ್ಲಿಯ ಬೇಳೆ ಕಾರ್ಖಾನೆ ಮಾಲಿಕರು ಹೊಂದಿದ್ದರು. ದೇವರಾಜ ಅರಸ್ ಕಾಲದಲ್ಲಿ ವಿರೇಂದ್ರ ಪಾಟೀಲ ವಿರುದ್ಧ ಅಂದರೆ ಇಲ್ಲಿಯ ಜಮೀನ್ದಾರರ ವಿರುದ್ಧ ಎದ್ದು ಬಂದ ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್ ಅವರ ಜೊತೆಯಾಗಿ ಅತ್ಯಂತ ಅನ್ಯೋನ್ಯ ಸಂಬಂಧ ಹೊಂದಿದ್ದಾರೆ. ವೀರೇಂದ್ರಪಾಟೀಲರು 1990 ರಲ್ಲಿ ಪದಚ್ಯುತಗೊಂಡ ನಂತರ ಇಲ್ಲಿಯ ಪ್ರಮುಖ ಬಂಡವಾಳಗಾರ ಎಸ್.ಎಸ್.ಪಾಟೀಲರ ಮಗಳು ಮದುವೆಗೆ ಖರ್ಗೆಯವರ ಮಧ್ಯಸ್ಥಿಕೆಯಿಂದ ಬಂಗಾರಪ್ಪ, ಧರ್ಮಸಿಂಗ್ ಜೊತೆ ರಾಜ್ಯದ ಅರ್ಧ ಕ್ಯಾಬಿನೆಟ್ ಹಾಜರಾಗಿದ್ದು 300 ರೂ.ಗಳಿಗೆ ಒಂದು ಊಟ ತಯಾರಿಸಿದ್ದುದ್ದು ಇಡೀ ಜಿಲ್ಲೆ ಮಾತಾಡುವಂತಾಗಿತ್ತು.

ಜನತಾಪಕ್ಷ - ಜನತಾದಳವು ತೊಗರಿಗೆ ಬೆಂಬಲ ಬೆಲೆ ತೊಗರಿ ಬೆಳೆಗಾರರ ಬೋರ್ಡು ಇತ್ಯಾದಿ ಘೋಷಣೆ ಎತ್ತಿತ್ತು. ಆದರೆ ಕೆಲವೇ ದಿನಗಳಲ್ಲಿ ಆ ಧ್ವನಿ ಅಡಗಿತು. ಜಮೀನ್ದಾರ ಬಂಡವಾಳಗಾರರ ಹಿಡಿತಕ್ಕೆ ಜನತಾಪಕ್ಷ-ಜನತಾದಳವು ಒಳಗಾಯಿತು. ಸಮಾಜವಾದಿ ಚಳುವಳಿಯಿಂದ ಪ್ರಭಾವಿತರಾದ ಕೆಲವರು ಬಂಡವಾಳಗಾರರ ಹಿಡಿತಕ್ಕೆ ಒಳಗಾದರು.

ಗುಲಬರ್ಗ ಜಿಲ್ಲೆಯ ಜಮೀನ್ದಾರರು-ಬಂಡವಾಳಗಾರರ ಪ್ರಚೋದನೆಗೆ ಒಳಗಾದ ...

ತು ... ಶಾಸ್ತ್ರ

ಮುಖಂಡತ್ವದ ಮೇಲೆ ತೀವ್ರ ದಾಳಿ ಮಾಡಿತು. ಸಿಪಿಐ(ಎಂ) ಪಕ್ಷದ ಮುಖಂಡತ್ವ ಹಿಮ್ಮೆಟ್ಟಿಸಿದರೆ, ಇನ್ನೊಂದು ಕಡೆ ಸಿಪಿಐನ ಇಬ್ಬರು ಪ್ರಮುಖರನ್ನು ಜನತಾಪಕ್ಷ - ದಳಕ್ಕೆ ಸೆಳೆದರು. ಬಿಜೆಪಿ ವಕ್ತಾರರಂತೆ ವರ್ತಿಸುವ ಇಲ್ಲಿಯ 'ಚೇಂಬರ್ ಆಫ್ ಕಾಮರ್ಸ್' ಬೀದರ್ ಗುಲಬರ್ಗ 1998 ರಲ್ಲಿ ಎಂ.ಪಿ. ಗೆಲ್ಲಲು ತುಂಬಾ ಸಹಾಯ ಮಾಡಿದ್ದಾರೆ.

ಕಾಂಗ್ರೆಸ್, ಜನತಾದಳ, ಬಿಜೆಪಿ ತಮ್ಮ ಪಕ್ಷಗಳೆಂದು ಅವುಗಳ ಎಲ್ಲಾ ಕಾರ್ಯಕ್ರಮಗಳಿಗೆ ಬೆಂಬಲ ಕೊಡುತ್ತಾ ಅಧಿಕಾರದಲ್ಲಿದ್ದಾಗ ಅವರಿಂದ ಸಹಾಯ ಪಡೆದು ಲಾಭ ಶೇಖರಣೆ ಗಟ್ಟಿಗೊಳಿಸುತ್ತಾ ಬಂದಿದ್ದಾರೆ.

ತೊಗರಿ ಬೇಳೆಯನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವುದನ್ನು ವಿರೋಧಿಸದ ತೊಗರಿ ಬೇಳೆ ಮಾರಾಟಗಾರರು

ನರಸಿಂಹರಾವ್ ನೇತೃತ್ವದ ಕೇಂದ್ರ ಸರಕಾರವೂ ವಿದೇಶಗಳಿಂದ ಅಂದರೆ ಇಂಡೋನೇಶಿಯಾ, ಆಸ್ಟ್ರೇಲಿಯಾ, ಬರ್ಮಾಗಳಿಂದ ಲಕ್ಷಾಂತರ ಟನ್ ತೊಗರಿ ಬೇಳೆ ಆಮದು ಮಾಡಿದರು. ಇಲ್ಲಿಯವರೆಗೂ ಪ್ರತಿವರ್ಷ ತೊಗರಿ ಬೆಳೆ ಆಮದು ಮಾಡಿಕೊಂಡರು. ಈ ಬಂಡವಾಳಗಾರರು/ ಮಾರಾಟಗಾರರು ಆಮದನ್ನು ವಿರೋಧಿಸಲಿಲ್ಲ. ತೊಗರಿ ಬೆಳೆ ಆಮದಾದಾಗ ತೊಗರಿ ಬೆಲೆ ಮಾತ್ರ ಕುಸಿಯಿತು. ಇಡೀ ರೈತರ ಮೇಲೆ ಕೆಟ್ಟ ಪರಿಣಾಮ ಬೀರಿತು. ರೈತರ ಉತ್ಪನ್ನ ಕುಸಿದು ಆತ್ಮಹತ್ಯೆಗಳಿಗೂ ಕಾರಣವಾಯಿತು. ರೈತರಿಂದ ಖರೀದಿಸುವ ತೊಗರಿ ಬೆಲೆ ಕುಸಿದರೂ ಬೇಲೆಯ ಬೆಲೆ ಕಡಿಮೆಯಾಗಲಿಲ್ಲ. ತೊಗರಿ ಬೆಳೆ ಆಮದು ತೊಗರಿ ಬೆಳೆಗಾರ ಮತ್ತು ರೈತರ ಹಿತಕ್ಕೆ ಹಾನಿಕಾರಕವಾಗಿದೆ.

ವಿಧ್ವಂಸಕಾರಿ ಶಕ್ತಿಗಳಿಗೆ ಹಣ ನೀಡುತ್ತಿರುವ ಬೇಳೆ ಕಾರ್ಖಾನೆಯ ಮಾಲೀಕರು

ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ಹೆಸರಿಡಬೇಕೆಂಬ ಚಳುವಳಿಗೆ, ಧರ್ಮಕಾರಣದ ವಿರುದ್ಧ ನಡೆದ ಚಳುವಳಿಗೆ ಮಹಾಚೈತ್ರದ ವಿರುದ್ಧ ಚಳುವಳಿಗೆ ಇದೇ ಬೇಳೆ ಕಾರ್ಖಾನೆ ಮಾಲೀಕರು ಲಕ್ಷಾಂತರ ಹಣ ಸಂಗ್ರಹ ಮಾಡಿ ಚಳುವಳಿಗಾರರಿಗೆ ನೀಡಿದ್ದಾರೆ. 'ಮಾತೆ ಮಹಾದೇವಿ' ಈ ಪ್ರದೇಶದ ಜಮೀನುದಾರರು ಮತ್ತು ಬೇಳೆ ಕಾರ್ಖಾನೆ ಮಾಲಿಕರು ಒಂದು ನೆಲೆಯಾಗಿದ್ದರು. ಬಸವದಳ ವ್ಯಾಪಕವಾಗಿ ಬೆಳೆಯಲು ಇವರ ಹಣಕಾಸಿನ ಬೆಂಬಲವು ಒಂದು ಪ್ರಮುಖ ಕಾರಣ. ಬೇಳೆ ಕಾರ್ಖಾನೆಯ ಮಾಲಿಕರಲ್ಲಿ ಪ್ರಮುಖರ ಒಂದು ಗುಂಪು ಬಸವದಳದ ಚಳುವಳಿಯಲ್ಲಿ ಇನ್ನೂ ಸಕ್ರಿಯವಾಗಿದೆ.

ಇತ್ತೀಚೆಗೆ ಸರ್ದಾರ ವಲ್ಲಬಾಯಿಪಟೇಲರ ಮೂರ್ತಿ ಸ್ಥಾಪನೆ ಪ್ರಮುಖ ನೆಲೆಯಾಗಿ ನಿಂತಿದ್ದು ಬೇಳೆ ಕಾರ್ಖಾನೆ ಮಾಲಿಕರ ಒಂದು ಗುಂಪು, ವಿಧಿದ್ರಕಾರಿ ಶಕ್ತಿಗಳಿಗೆ ಬೆಂಬಲ ಕೊಡುತ್ತಾ ತನ್ನ ನೆಲೆ ಭದ್ರ ಮಾಡಿಕೊಳ್ಳಲು ಹವಣಿಸುತ್ತಿದೆ. ಇದು ಹಲವಾರು ಸಂದರ್ಭಗಳಲ್ಲಿ ಯಶಸ್ವಿ ಕೂಡಾ ಆಗಿದೆ.

ಕಳಪೆ ಕ್ರಿಮಿನಾಶಕ ಮಾರಾಟಗಾರರಿಂದಲೂ ಶೋಷಣೆಗೆ ಒಳಗಾದ ತೊಗರಿ ಬೆಳೆಗಾರರು

ಪ್ರತಿ ಗ್ರಾಮದಲ್ಲಿಯೂ ಕ್ರಿಮಿನಾಶಕ ಮಾರಾಟಗಾರರ ಅಂಗಡಿ ತೆರೆಯಲ್ಪಟ್ಟಿದೆ. ಅಡತಿ ಮಾಲೀಕ, ಪ್ರಮುಖ ರಾಜಕಾರಣಿ, ಪ್ರಮುಖ ಡೀಲರ್ ಮುಖಾಂತರ ನೇರವಾಗಿ ಗ್ರಾಮಗಳಿಗೆ ಕ್ರಿಮಿನಾಶಕಗಳ ಮಾರಾಟ ಜಾಲವನ್ನು ಹೊಂದಿದ್ದಾರೆ. ಸೆಪ್ಟೆಂಬರ್ -ನವೆಂಬರ್‌ರವರೆಗೆ ಮೂರು ತಿಂಗಳ ಕಾಲ ಕ್ರಿಮಿನಾಶಕ ಮಾರಾಟ ಜಾಲವು ತೀವ್ರ ಸಕ್ರಿಯವಾಗಿರುತ್ತದೆ. ವಿಜಯವಾಡ, ಅಹಮದಾಬಾದ್, ಚಂಡೀಗಡ, ಬಾಂಬೆ ಮತ್ತಿತರ ದೂರದ ಪ್ರದೇಶಗಳಲ್ಲಿ ತಯಾರಿಸಿದ ಕಳಪೆ ಕ್ರಿಮಿನಾಶಕಗಳನ್ನು ತಂದು ಮಾರಾಟ ಮಾಡುವ ದೊಡ್ಡ ಜಾಲವೇ ಗುಲಬರ್ಗದಲ್ಲಿದೆ. ಕಡಿಮೆ ಬೆಲೆಯ ಕ್ರಿಮಿನಾಶಕ ಹೆಚ್ಚು ಬೆಲೆಗೆ ಸಾಲವಾಗಿ ಮಾರಾಟ ಮಾಡುವುದು ಕಳಪೆ ಕ್ರಿಮಿನಾಶಕಗಳನ್ನು ರಸೀದಿ ಇಲ್ಲದೆ ಗ್ರಾಮಗಳಲ್ಲಿ ಮಾರಾಟ ಮಾಡುವುದು, ಮಾರಟಗಾರರು ಗ್ರಾಮದ ಪ್ರಭಾವೀ ಜನರಾಗಿದ್ದು ಸುಗ್ಗಿ ಬಂದ ಕೂಡಲೇ ಶೇ 60 ಬಡ್ಡಿಯಿಂದ ಹಣವಸೂಲಿ ಮಾಡುವುದು ಶ್ರೀಮಂತ ರೈತರು ಜಮೀನ್ದಾರರ ಮಕ್ಕಳು ಕ್ರಿಮಿನಾಶಕಗಳ ವ್ಯಾಪಾರದಲ್ಲಿ ತೊಡಗಿದ್ದಾರೆ. ಕೃಷಿ ಇಲಾಖೆ ಕ್ರಿಮಿನಾಶಕಗಳ ಬಳಕೆಗೆ ಹೆಚ್ಚು ಕುಮ್ಮಕ್ಕು ನೀಡಿದ್ದು, ರೈತ ಸಮುದಾಯವೇ ಕ್ರಿಮಿನಾಶಕಗಳ ಮೇಲೆ ಅವಲಂಬಿಸುವಂತೆ ಮಾಡಿದೆ. ಜೈವಿಕ ಬೆಳೆ ಸಂರಕ್ಷಣೆ, ಕೀಟಗಳ ಹಾವಳಿಯಿಂದ ತಡೆಯುವ ಕಪ್ಪು ತೊಗರಿ ಮಾದರಿಯಲ್ಲಿ ತಳಿ ಸಂಶೋಧನೆ ಒಟ್ಟಾರೆ ಕಡೆಗಣಿಸಲ್ಪಟ್ಟಿದೆ. ಕಳಪೆ ಕ್ರಿಮಿನಾಶಕ ಬಳಕೆ ಹೆಚ್ಚು ಕ್ರಿಮಿನಾಶಕಗಳ ಬಳಕೆ ರೈತ ಸಮುದಾಯವನ್ನು ಕಷ್ಟಕ್ಕೀಡು ಮಾಡಿದೆ. ಕಳಪೆ ಕ್ರಿಮಿನಾಶಕಗಳ ಬಳಕೆಯಿಂದ ಬೆಳೆ ನಷ್ಟವಾಗಿ ಬೀದರ್-ಗುಲ್ಬರ್ಗ ಜಿಲ್ಲೆಯ ರೈತರು ಆತ್ಮಹತ್ಯೆಗೆ ಒಳಗಾದರು. ಕ್ರಿಮಿನಾಶಕ ಮಾರಾಟ ಅಂದಾಜು 70 ರಿಂದ 100 ಕೋಟಿ ರೂ.ಗಳಷ್ಟು ಆಗಬಹುದು. ಇಷ್ಟೊಂದು ಅಘಾದವಾದ ಕ್ರಿಮಿನಾಶಕಗಳ ಮಾರಾಟ ಜಿಲ್ಲೆಯಲ್ಲಿ ಇದೆ.

ತೊಗರಿ ಬೆಳೆಗಾರರ ಬೇಡಿಕೆಗೆ ಆಗ್ರಹ: 1989 ರಲ್ಲಿ ಮೊದಲ ಬಾರಿಗೆ ತೊಗರಿ ಬೆಳೆಗಾರರ ರಾಜ್ಯಮಟ್ಟದ ಸಮಾವೇಶ ಗುಲಬರ್ಗದಲ್ಲಿ ನಡೆಸುವ ಮೂಲಕ ತೊಗರಿ ಬೆಳೆಗಾರರ ಬೇಡಿಕೆ ಜನತೆಯ ಗಮನ ಸೆಳೆಯಲು ಸಾಧ್ಯವಾಯಿತು. ರಾಜ್ಯ ಸಮಾವೇಶದಲ್ಲಿ ತೊಗರಿ ಬೆಂಬಲ ಬೆಲೆ, ಬೆಳೆಸಾಲ, ಮಾರುಕಟ್ಟೆಯಲ್ಲಿ ಸರ್ಕಾರದ ಏಜೆನ್ಸಿಗಳ ಮೂಲಕ ತೊಗರಿ ಖರೀದಿಸಬೇಕೆಂಬ ಬೇಡಿಕೆ, ಸಂಶೋಧನೆಗೆ ಮಾರುಕಟ್ಟೆಗೆ, ಸಹಕಾರಿಯಾಗಲು ತೊಗರಿ ಬೆಳೆಗಾರರ ಬೋರ್ಡ್ ರಚಿಸಬೇಕೆಂದು ಒತ್ತಾಯ ಇತ್ಯಾದಿ ಬೇಡಿಕೆಗಳು ಸಮಾವೇಶದಲ್ಲಿ ರೂಪಿಸಲಾಯಿತು. ಬಂಗಾಳದಲ್ಲಿ ಸೆಣಬು ಬೆಳೆಗಾರರ ಹಿತರಕ್ಷಣೆ ಸರಕಾರವೇ ಮಾರುಕಟ್ಟೆಯಲ್ಲಿ ಮಧ್ಯ ಪ್ರವೇಶಿಸುವಂತೆ ಇಲ್ಲಿಯೂ ಕೂಡಾ ತೊಗರಿ ಖರೀದಿಸಲು ಸರಕಾರ ಮುಂದೆ ಬರಬೇಕೆಂಬ ಒತ್ತಾಯ ತೀವ್ರಗೊಂಡಿತು.

ರೈತರ ಚಳುವಳಿಯಿಂದ ಪರಿಹಾರ ಮಂಜೂರಾತಿ ಮಾಡಿಸಿದ್ದು

1992-93 ರಲ್ಲಿ ಸಹಸ್ರಾರು ಸಂಖ್ಯೆಯ ತೊಗರಿ ಬೆಳೆ ಪರಿಹಾರಕ್ಕೆ ಅರ್ಜಿ ಸಲ್ಲಿಸಲಾಯಿತು. ಚೀಲ-ಚೀಲಗಟ್ಟಲೆ ಪರಿಹಾರದ ಅರ್ಜಿಗಳು, ಮಂತ್ರಿಗಳ ಮುಂದೆ ಪ್ರದರ್ಶನ ಮಾಡಲಾಯಿತು. ಸಾವಿರಾರು ಜನರು ಜಿಲ್ಲಾ ಉಸ್ತುವಾರಿ ಸಚಿವರ ಮನೆ ಮುಂದೆ ಧರಣಿ ನಡೆಸಿದರು. ಆ ವರ್ಷ ತೊಗರಿ ಬೆಳೆ ಪರಿಹಾರಕ್ಕೆ 13 ಕೋಟಿ ರಾಜ್ಯ ಸರ್ಕಾರ ಬಿಡುಗಡೆ ಮಾಡುವ ಅನಿವಾರ್ಯತೆಗೆ ಒಳಗಾಯಿತು. ತೊಗರಿ ಬೆಳೆಗಾರರಿಗೆ ಬೆಳೆ ನಷ್ಟಕ್ಕೆ ಪರಿಹಾರ ಪಡೆದದ್ದು ರಾಜ್ಯ ರೈತರ ಗಮನ ಸೆಳೆಯುವಂತಾಯಿತು.

1992-93, 1994-95, 1996-97 ರಲ್ಲಿ ಮೂರು ವರ್ಷಗಳ ಕಾಲ ತೊಗರಿಗೆ ಬೆಂಬಲ ಬೆಲೆಗಾಗಿ ಮಾರುಕಟ್ಟೆಯಲ್ಲಿ ಮಧ್ಯೆ ಪ್ರವೇಶಕ್ಕಾಗಿ ತೊಗರಿಬೆಳೆ ನಷ್ಟಕ್ಕೆ ಪರಿಹಾರಕ್ಕಾಗಿ ಕರ್ನಾಟಕ ಪ್ರಾಂತ ರೈತ ಸಂಘ, ಸಿಪಿಐ(ಎಂ) ಬೆಂಬಲದೊಂದಿಗೆ 'ಗುಲ್ಬರ್ಗ ಬಂದ್' ಆಚರಿಸಲ್ಪಟ್ಟಿದೆ. ರೈತರ ಆತ್ಮಹತ್ಯೆಯ ವಿರುದ್ಧ ವ್ಯಾಪಕ ಪ್ರಚಾರ ನಡೆಸಲ್ಪಟ್ಟಿದೆ. 'ಬೀದರ್ ಬಂದ್' 97-98 ರ ವರ್ಷದಲ್ಲಿ ಆಚರಿಸಲ್ಪಟ್ಟಿತು. ಪರಿಹಾರ ವಿತರಣೆಯಲ್ಲಿ ಅನ್ಯಾಯದ ವಿರುದ್ಧ ಪ್ರತಿಭಟನೆ ನಡೆಸಲಾಯಿತು. ಈ ವರ್ಷ ಗುಲಬರ್ಗಾದಲ್ಲಿ ಒಂದು ವಾರ ಕಾಲ ಎಪಿಎಂಸಿ ಎದುರು ಧರಣಿ, ಬೀದರ್‌ನಲ್ಲಿ ಒಂದು ದಿನದ ಧರಣಿ ನಡೆಸುವ ಮೂಲಕ ಸರ್ಕಾರದ ಹಾಗೂ ರೈತಾಪಿ ಜನತೆಯ ಗಮನ ಸೆಳೆಯಲಾಗಿದೆ. ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ಪಡೆಯಲಾಗಿದೆ.

ಎರಡನೆಯ ಹಂತವಾಗಿ 17 ರಿಂದ ತಾಲ್ಲೂಕು ಕೇಂದ್ರಗಳಲ್ಲಿ ಧರಣಿ, 4 ತಾಲ್ಲೂಕು ಕೇಂದ್ರಗಳಲ್ಲಿ ಮಾತ್ರ ನಡೆಸಲಾಗಿದೆ. ರಾಸ್ತಾರೋಕೋ, 6 ತಾಲ್ಲೂಕು ಕೇಂದ್ರಗಳಲ್ಲಿ ಹಮ್ಮಿಕೊಳ್ಳಲಾಗಿದೆ. ರೈತಾಪಿ ಜನರನ್ನು ಚರ್ಚೆಗೆ ಇಳಿಸಲಾಗಿದೆ. ಆದರೆ ವ್ಯಾಪಕ ಜನ ಬೆಂಬಲ ಪಡೆಯಲು ಸಾಧ್ಯವಾಗಿಲ್ಲ. ಹೋರಾಟ ಒಟ್ಟಾರೆ ಸಾಂಕೇತಿಕವಾಗಿ ನಡೆಸಲಾಗಿದೆ. ರೈತಸಮೂಹವನ್ನು ಸಾರಾಸಗಟಾಗಿ ಇಳಿಸಲು ಸಾಧ್ಯವಾಗಿಲ್ಲ.

ತೀವ್ರಗೊಂಡು ರೈತ ಸಂಘದ ವಿರುದ್ಧ ಅಪಪ್ರಚಾರ

ಬೇಳೆ ಕಾರ್ಖಾನೆ ಮಾಲಿಕರು ಅಡತಿ ಅಂಗಡಿ ಮಾಲಿಕರು ಕ್ರಿಮಿನಾಶಕಗಳ ಮಾರಾಟಗಾರರು ರೈತ ಸಂಘ ಬೆಂಬಲ ಬೆಲೆ ಹೋರಾಟದ ವಿರುದ್ಧ ಅಪಪ್ರಚಾರ ನಡೆಸಿದ್ದಾರೆ. ತಮ್ಮ ಲಾಭಕ್ಕೆ ಧಕ್ಕೆಯಾಗುವುದರಿಂದ ರೈತ ಸಂಘದ ಸತ್ಯಾಗ್ರಹದಿಂದ ಬೆಲೆ ಕುಸಿಯಿತು, ಬೇಳೆ ಕಾರ್ಖಾನೆಯಿಂದ ಹಣಪಡೆದು ಚಳುವಳಿ ಕೈಬಿಟ್ಟರು, ರೈತರಿಗೆ ದ್ರೋಹ ಬಗೆದರು ಎಂಬ ಇತ್ಯಾದಿ ಪ್ರಚಾರ ಅಲ್ಲಲ್ಲಿ ಕೇಳಿ ಬರುತ್ತಿದೆ.

ಅಂಶಿಕವಾಗಿ ಯಶಸ್ವಿಗೊಂಡ ಚಳುವಳಿ: ಗುಲ್ಬರ್ಗ ಎಪಿಎಂಸಿ ಎದುರು ಒಂದು ವಾರ ಕಾಲ ಚಳುವಳಿ ನಡೆಸಿದ ಫಲವಾಗಿ ಕೃಷಿ ಸಚಿವರು ಸತ್ಯಾಗ್ರಹಕ್ಕೆ ಬಂದು ಆಶ್ವಾಸನೆ ನೀಡಿದರು. ಉಸ್ತುವಾರಿ ಸಚಿವರು ಜಿಲ್ಲೆಯ ಪ್ರಮುಖ ಸಚಿವರು ರೈತರ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದರು. ಅದರಂತೆ ಕಳೆದ 2-3 ದಿನಗಳಿಂದ ಮಾರುಕಟ್ಟೆ ತೊಗರಿ ಖರೀದಿ ಮಾಡಲು ಸರ್ಕಾರದ ಏಜೆನ್ಸಿಗಳು ಮುಂದೆ ಬಂದಿವೆ. ತೊಗರಿ ಒತ್ತೆ ಇಟ್ಟುಕೊಂಡು ಸಾಲ ಕೊಡುವ ಕೃಷ್ಣಾ ಗ್ರಾಮೀಣ ಬ್ಯಾಂಕು ಮತ್ತು ಇತರೆಬ್ಯಾಂಕುಗಳು ಕೂಡಾ ಮುಂದೆ ಬಂದಿವೆ.

ಕರ್ನಾಟಕ ರಾಜ್ಯ ರೈತ ಸಂಘ(ಎಐಕೆಎಸ್) ಜೊತೆಗೂಡಿ ಜಂಟಿಯಾಗಿ ಹೋರಾಟಕ್ಕೆ ಕರೆಕೊಡಲಾಗಿದೆ. ಒಟ್ಟಾರೆ ರೈತಸಮುದಾಯ ತೊಗರಿ ಬೆಳೆಗಾರರ ಹೋರಾಟದ ಕುರಿತು ಚರ್ಚಿಸುವಂತಾಗಿದೆ. ಬಡ, ಮಧ್ಯಮ ರೈತರು ಈ ಹೋರಾಟದ ಕುರಿತು ಅಭಿಮಾನಪಡುವಂತಾಗಿದೆ. ಉತ್ಪಾದನಾ ಖರ್ಚು-ಮಾರುಕಟ್ಟೆಯಲ್ಲಿ ರೈತರ ಶೋಷಣೆ, ಇತ್ಯಾದಿಗಳ ಕುರಿತು ಚರ್ಚಿಸಿ ಆಳುವ ಪಕ್ಷದ ಮುಖಂಡರನ್ನು ಟೀಕೆಗೆ ಒಳಪಡಿಸಲಾಗಿದೆ.

ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು, ಮಂತ್ರಿಗಳು ಸಂಸತ್ ಸದಸ್ಯರು ತೊಗರಿ ಬೆಳೆಗಾರರ ಬೇಡಿಕೆ ಬಗ್ಗೆ ಮಾತಾಡದಿರುವುದು ಬೇಳೆ ಕಾರ್ಖಾನೆ ಮಾಲಕರ ಜೊತೆಯ ಸಖ್ಯತೆಗೆ ಹಿಡಿದ ಕನ್ನಡಿಯಾಗಿದೆ. ಬಂಡವಾಳಗಾರರ ಬೇಳೆ ಕಾರ್ಖಾನೆ ಕೈಗೊಂಬೆಗಳಾಗಿದ್ದರಿಂದಲೇ ಅವರ ಹಿತಕ್ಕೆ ದೃಢವಾಗಿ ನಿಂತಿದ್ದಾರೆ. ನಮ್ಮ ಚಳುವಳಿ ತೀವ್ರಗೊಂಡಾಗ ಮಾತ್ರ ಬೇಳೆ ಕಾರ್ಖಾನೆ ಮಾಲಿಕರಬಂಡವಾಳ ಶಾಹಿ ಪಕ್ಷಗಳ ರಾಜಕಾರಣಿಗಳ ಸಖ್ಯತೆ ನಡುವೆ ಬಿರುಕು ಬರಲು ಸಾಧ್ಯವಾಗುತ್ತದೆ. ಇವರ ಮಧ್ಯದಲ್ಲಿ ಬಿರುಕು ಬರುವಂತಹ ರೀತಿಯಲ್ಲಿ ಚಳುವಳಿ ಸಂಘಟಿಸುವುದು ಆದ್ಯ ಕರ್ತವ್ಯವಾಗಿದೆ. ಪ್ರಜಾಪ್ರಭುತ್ವ ಚಳುವಳಿ ಬಲಗೊಳ್ಳಲು ತೊಗರಿ ಬೆಳೆಗಾರರ ಬೇಡಿಕೆಗಾಗಿ ನಡೆಸುವ ಹೋರಾಟ ಇನ್ನಷ್ಟು ತೀವ್ರಗೊಳಿಸುವ ಅಗತ್ಯವಿದೆ. 2 ಲಕ್ಷ ಬೆಳೆಗಾರರಲ್ಲಿ ಕನಿಷ್ಟ 20 ಸಾವಿರ ರೈತರಾದರೂ ಪಾಲ್ಗೊಂಡರೆ ನಮ್ಮ ಸಾಮರ್ಥ್ಯದ ಸ್ವರೂಪ ಬದಲಾಗುತ್ತದೆ.


ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅಡ್ಡಿಯಾದ ರೈತಾಪಿ ಜನತೆ ಶೋಷಕರಾದ ಛಿದ್ರಕಾರಿಶಕ್ತಿಗಳಿಗೆ ಸಹಾಯಕರಾದ ಪ್ರಜಾಪ್ರಭುತ್ವ ಚಳುವಳಿಗೆ ಕಂಟಕರಾದ ಬೇಳೆ ಕಾರ್ಖಾನೆ ಮಾಲಿಕರ ವಿರುದ್ಧ ನಡೆಯುವ ಈ ಚಳುವಳಿ ಯಶಸ್ವಿಗೊಳಿಸಲು ನಾವೆಲ್ಲರೂ

ತೊಗರಿ ಬೆಳೆದು ತಲೆಮೇಲೆ ಬಟ್ಟೆ ಹಾಕಿ ಚಿಂತಾಕ್ರಾಂತನಾಗಿ ಕುಳಿತ ರೈತ



ಸಾರ್ವಜನಿಕ ಆಸ್ತಿಯ ಲೂಟಿಯ ವಿರುದ್ಧ ದೇಶಪ್ರೇಮಿ ಕ್ರಮ

ಉತ್ತರ ಪ್ರದೇಶದಲ್ಲಿ ವಿದ್ಯುತ್ ಮುಷ್ಕರ! ಮುಷ್ಕರ! ಯಾತಕ್ಕೆ?



ಉತ್ತರ ಪ್ರದೇಶದಲ್ಲಿ 80 ಸಾವಿರ ವಿದ್ಯುತ್ ಕಾರ್ಮಿಕರ ಮುಷ್ಕರ ಆರಂಭವಾಗಿ ಒಂದು ವಾರ ಆಗಿದೆ. ಅಲ್ಲಿನ ರಾಜ್ಯ ಸರ್ಕಾರ ವಿದ್ಯುತ್ ಬೋರ್ಡಿನ ಕಾರ್ಮಿಕರ ಜತೆ ಚರ್ಚಿಸದೆ ವ್ಯಾಪಕ ಸಾರ್ವಜನಿಕ ಚರ್ಚೆಗಳು ಆಗದೆ ಅವಸರದಲ್ಲಿ ಯಾವುದೋ ಕನ್ಸಲ್ಟೆಂಟ್ ವರದಿ ಆಧಾರದ ಮೇಲೆ ವಿದ್ಯುತ್ ಬೋರ್ಡ್‌ನ್ನು ಭಾಗಮಾಡತೊಡಗಿದೆ. ಉತ್ಪಾದನೆ, ಪ್ರಸಾರಣ, ವಿತರಣೆ ಎಂದು ಮೂರು ಭಾಗಮಾಡಿ ಸ್ವತಂತ್ರ ಕಾರ್ಪೊರೇಷನ್‌ಗಳನ್ನು ಮಾಡುವ ನಿರ್ಧಾರ ಮಾಡಿದೆ. ಮುಷ್ಕರ ಇದರ ವಿರುದ್ಧ. ವಿದ್ಯುತ್ ಬೆಲೆಗಳನ್ನು ಗಮನಕ್ಕೇರಿಸುವ, ಕೊನೆಗೆ ವಿದ್ಯುತ್ ಕ್ಷೇತ್ರವನ್ನು, ಆಕ್ಷೇತ್ರದಲ್ಲಿ ಸ್ವಾವಲಂಬನೆಯನ್ನು ನಿರ್ನಾಮ ಮಾಡುವ, 7 ಲಕ್ಷ ಕೋಟಿ ಬೆಲೆ ಬಾಳುವ ದೇಶದ ವಿದ್ಯುತ್ ಜಾಲವನ್ನು ವಿದೇಶಿ ಖಾಸಗಿ ಕಂಪನಿಗಳಿಗೆ ಮೂರು ಕಾಸಿಗೆ ಮಾರುವ ಬಿಜೆಪಿ ಸರ್ಕಾರದ ಜನವಿರೋಧಿ, ದೇಶ-ವಿರೋಧಿ, ನೀತಿ ವಿರುದ್ಧದ ಈ ಮಹಾನ್ ಮುಷ್ಕರ ಹೇಗೆ ದೇಶಪ್ರೇಮಿ ಕ್ರಮ? ಅದು ಹೇಗೆ ಅತ್ಯಂತ ಜನಪರ ದೇಶ ಪ್ರೇಮಿ ಹೋರಾಟ ಎಂದು ವಿವರಿಸುವ ಲೇಖನ.

ಉತ್ತರ ಪ್ರದೇಶದ ವಿದ್ಯುತ್ ಬೋರ್ಡನ್ನು ಮೂರು ಭಾಗಮಾಡಿ ಉತ್ಪಾದನೆ, ಪ್ರಸರಣ, ವಿತರಣೆಗೆ ಜವಾಬ್ದಾರಿ ಇರುವ ಪ್ರತ್ಯೇಕ ಕಾರ್ಪೊರೇಶನ್‌ಗಳನ್ನು ಮಾಡುವ ನಿರ್ಧಾರ ದೇಶಕ್ಕೆ ಕಿಚ್ಚು ಹಚ್ಚಿದೆ. ಅಲ್ಲಿನ ವಿದ್ಯುತ್ ಬೋರ್ಡಿನ 80 ಸಾವಿರ ಕಾರ್ಮಿಕರು ಇದನ್ನು ವಿರೋಧಿಸಿ ಮುಷ್ಕರ ಹೂಡಿದ್ದಾರೆ. ಇದರ ಮೊದಲು ಈ ಬಗ್ಗೆ ಮಾತುಕತೆಗೆ ನಿರಾಕರಿಸಿದ ಬಿಜೆಪಿ ರಾಜ್ಯ ಸರ್ಕಾರದ ನಿರ್ಧಾರದಿಂದ ಈ ಮುಷ್ಕರ ಅನಿವಾರ್ಯವಾಗಿದೆ. ಸರ್ಕಾರದ ನೀತಿಗಳನ್ನು ಕಾರ್ಮಿಕರು ಪ್ರಶ್ನಿಸಲಾಗದು. ಅದನ್ನು ಜಾರಿ ಮಾಡುವುದಷ್ಟೇ ಅವರ ಜವಾಬ್ದಾರಿ ಎಂದು ಉತ್ತರ ಪ್ರದೇಶ ಸರ್ಕಾರದ ವಿದ್ಯುತ್ ಮಂತ್ರಿ ಪದೇ ಪದೇ ಹೇಳುತ್ತಿದ್ದಾರೆ. ತಮ್ಮ ಜೀವನ, ರಾಜ್ಯದ ಆರ್ಥಿಕವನ್ನು ಬಾಧಿಸುವ ಪ್ರಶ್ನೆಯ ಬಗ್ಗೆ ಯಾವುದೇ ಚರ್ಚೆ, ವಿಚಾರ-ವಿಮರ್ಶೆ ಇಲ್ಲದೆ ಇಂತಹ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಹಕ್ಕಿಲ್ಲ ಎಂದು ಕಾರ್ಮಿಕರು ಸವಾಲು ಹಾಕಿದ್ದಾರೆ. ಅವರಿಗೆ ವಿದ್ಯುತ್ ಬೋರ್ಡ್‌ನ್ನು ಭಾಗಮಾಡುವುದರ ವಿರುದ್ಧ ಕಾರ್ಮಿಕರ ಬೆಂಬಲಾರ್ಥವಾಗಿ ಉತ್ತರ ಭಾರತ ವಿದ್ಯುತ್ ಇಂಜನಿಯರರ ಫೆಡರೇಶನ್ ಕರೆ ಮೇರೆಗೆ ಇಂಜನೀಯರುಗಳು ಜನವರಿ 7ರಿಂದ 'ನಿಯಮದ ಪ್ರಕಾರ ಕೆಲಸ' ಆರಂಭಿಸಿದ್ದಾರೆ. ಕಾರ್ಮಿಕರ ಮೇಲೆ ದರ್ಪ ಆರಂಭವಾಗಿದೆ. ನೂರಾರು ಕಾರ್ಮಿಕರನ್ನು ವಜಾ ಮಾಡಲಾಗಿದೆ. ಮೀಸಾ, ಎಸ್ಮಾ ಎಸ್. ಎಸ್.ಎ ಮುಂತಾದ ಕರಾಳ ಕಾನೂನುಗಳನ್ನು ಬಳಸಿ ಕಾರ್ಮಿಕರ ಮನೋಬಲ ಮುರಿಯುವ ಪ್ರಯತ್ನ ಸಾಗಿದೆ. ಆದರೆ ಇದಕ್ಕೆ ಅಂಜದೆ ಮುಷ್ಕರ ಮುಂದುವರೆದಿದೆ. ಉತ್ತರ ಪ್ರದೇಶ ವಿದ್ಯುತ್‌ಕಟ್ ಆಗಿದೆ. ದೈನಂದಿನ ಜೀವನ ಏರುಪೇರಾಗಿದೆ. ಆದರೂ ಸರ್ಕಾರ ಕಾರ್ಮಿಕರ ನಾಯಕರ ಜತೆ ವಿದ್ಯುತ್ ಬೋರ್ಡ್, ಭಾಗಮಾಡುವ ಬಗ್ಗೆ ಮಾತುಕತೆಗೆ ಇಳಿಯಲು ತಯಾರಿಲ್ಲ. ಸೇವಾ ಪರಿಸ್ಥಿತಿ ಬಗ್ಗೆ ಮಾತನಾಡಲು ತಯಾರಿದ್ದಾರೆ. ಏಕೀ ಹಠಮಾರಿತನ? ಸಾಮಾನ್ಯವಾಗಿ ವೇತನ, ಸೇವಾ ಪರಿಸ್ಥಿತಿ ಬಗ್ಗೆ ಮಾತ್ರ ಮುಷ್ಕರ ಮಾಡುವ ಕಾರ್ಮಿಕರು ಈ ಬಗ್ಗೆ ಯಾಕೆ ತಲೆಕೆಡಿಸಿಕೊಂಡಿದ್ದಾರೆ?

ಬೋರ್ಡಿನ ವಿಭಜನೆ ಖಾಸಗೀಕರಣದ ಮೊದಲ ಹೆಜ್ಜೆ.

ವಿದ್ಯುತ್ ಬೋರ್ಡ್‌ನ್ನು ಕಮರ್ಶಿಯಲ್ ಆಧಾರದ ಮೇಲೆ ಉತ್ಪಾದನೆ, ಪ್ರಸರಣೆ, ವಿತರಣೆಯಲ್ಲಿ ತೊಡಗಿದ ಮೂರು ಪ್ರತ್ಯೇಕ ಕಂಪನಿಗಳಾಗಿ ಒಡೆದರೆ ವಿದ್ಯುತ್ ಬೋರ್ಡ್ ದಕ್ಷವಾಗಿ ಕೆಲಸ ಮಾಡುತ್ತದೆ. ವಿದ್ಯುತ್ ಬೋರ್ಡಿನ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತದೆ ಎಂದು ಸರ್ಕಾರದ ಹೇಳಿಕೆ. ಆದರೆ ನಿಜವಾಗಿಯೂ ಇದು ಇತ್ತರ ಪ್ರದೇಶದ ರಾಜ್ಯ ಸರ್ಕಾರದ ನಿರ್ಧಾರವಲ್ಲ. ಇದು ವಿಶ್ವ ಬ್ಯಾಂಕ್‌ಗೆ ಸಲಹೆ ಕೊಡುವ ಪುಟ್‌ನಮ್, ಹೇಸ್ ಅಂಡ್ ಬಾರ್ಡರೆಟ್ ಎಂಬ ಕಂಪನಿಯ ವರದಿಯ ಶಿಫಾರಸುಗಳನ್ನು ಬಿಜೆಪಿ ಸರ್ಕಾರ ಶಿರಸಾವಹಿಸಿ ಪಾಲಿಸುತ್ತಿರುವುದು ಅಷ್ಟೇ ಎಂದು ಕಾರ್ಮಿಕರು ವಾದಿಸುತ್ತಾರೆ. ಮೂರು ಕಾರ್ಪೊರೇಶನ್‌ಗಳಾಗಿ ಒಡೆದ ಕೂಡಲೇ ಹೇಗೆ ದಕ್ಷತೆ ಬರುತ್ತದೆ. ಮೂರು ಪ್ರತ್ಯೇಕ ಕಂಪನಿಗಳ ಆಡಳಿತಾತ್ಮಕ ಖರ್ಚು ಹೆಚ್ಚಿ, ಮೂರು ಕಂಪನಿಗಳಲ್ಲಿ ಪ್ರತಿಯೊಂದು ಲಾಭ ಮಾಡಬೇಕಾದ ಒತ್ತಡದಿಂದ ಒಟ್ಟು ಗ್ರಾಹಕ ತೆರಬೇಕು. ಬೆಲೆ ಹೆಚ್ಚುವುದಿಲ್ಲವೇ ಎನ್ನುತ್ತಾರೆ ವಿದ್ಯುತ್ ಇಂಜಿನಿಯರುಗಳ ಸಂಘದವರು. ವಿದ್ಯುತ್ ಬೋರ್ಡ್‌ಗೆ ಬಾರಿ ನಷ್ಟ ಅನುಭವಿಸುತ್ತಿದೆ. ಇತರ ಕಾರಣಗಳು ಏನು? ಎಂದು ವಿಶ್ಲೇಷಿಸಿದರೆ, ಬರಿಯ ವಿಭಜನೆ ನಷ್ಟ ತುಂಬಿಕೊಡುತ್ತದೆ ಎನ್ನುವುದು ಹಸ್ಯಾಸ್ಪದ ಎನ್ನುತ್ತಾರೆ ವಿಶೇಶಜ್ಞರು.

ಬೋರ್ಡ್ ವಿಭಜನೆಯ ಉದ್ದೇಶವೂ ಅದರ ದಕ್ಷತೆ ಹೆಚ್ಚುವುದಾಗಲಿ, ನಷ್ಟ ತಡೆಯುವುದಾಗಲಿ ಅಲ್ಲ. ಇದು ಖಾಸಗೀಕರಣದ ಮೊದಲ ಹೆಜ್ಜೆ. ಮೂರು ಕಂಪನಿಗಳಾಗಿ ಒಡೆದರೆ, ಅದರಲ್ಲಿ ಮುಂದೆ ಖಾಸಗಿ ಬಂಡವಾಳ ಭಾಗವಹಿಸಲು ಅವಕಾಶವಾಗುತ್ತದೆ. ಕ್ರಮೇಣ ಈ ಮೂರು ಕಂಪನಿಗಳನ್ನು ಹಂತಹಂತವಾಗಿ ಖಾಸಗೀಕರಿಸಬಹುದು. ಇದು ಉತ್ತರ ಪ್ರದೇಶ ಬಿಜೆಪಿ ಸರ್ಕಾರ ನಿಜವಾದ ಉದ್ದೇಶ. ಎನ್ನುತ್ತಾರೆ ವಿದ್ಯುತ್ ಬೋರ್ಡ್ ಕಾರ್ಮಿಕರು.

ವಿಶ್ವಬ್ಯಾಂಕ್ ಬಿಜೆಪಿ ಸರ್ಕಾರದ ಪಿತೂರಿಗೆ ಉತ್ತರ ಪ್ರದೇಶ ವಿದ್ಯುತ್ ಕಾರ್ಮಿಕರ ತಡೆ.


ಉತ್ತರ ಪ್ರದೇಶದಲ್ಲಿ ಈಗ ವಿಶ್ವಬ್ಯಾಂಕ್ ನಿರ್ದೇಶನದ ಮೇಲೆ ಜಾರಿಮಾಡಲಾಗುತ್ತಿರುವ ಈ ನೀತಿ ಹೊಸದಲ್ಲ. ಹಿಂದಿನ ಸಾರ್ವಜನಿಕಕ್ಷೇತ್ರದ ವಿದ್ಯುತ್ ಉತ್ಪಾದನಾ ಸ್ಥಾವರಗಳಿಗೆ ಸಾಲ ಕೊಡುವ ಮೂಲಕ ನಮ್ಮ ವಿದ್ಯುತ್ ಕ್ಷೇತ್ರದ ಮೇಲೆ ಹಿಡಿತ ಸಾಧಿಸಿದ ವಿಶ್ವಬ್ಯಾಂಕ್ ಎಲ್ಲಾ ರಾಜ್ಯ ಸರ್ಕಾರಗಳ ಮೇಲೆ ಈ ನೀತಿಯ ಜಾರಿಗೆ ಒತ್ತಡ ಹೇರುತ್ತಿದೆ.

ಇದನ್ನು ವಿಶ್ವಬ್ಯಾಂಕ್ ಒತ್ತಡದಿಂದ ಕರ್ನಾಟಕ, ಆಂಧ್ರ, ಒರಿಸ್ಸಾದಲ್ಲಿ ಜಾರಿಮಾಡಲಾಗುತ್ತಿದೆ. ಕರ್ನಾಟಕದಲ್ಲಿ ಇದು ವಿದ್ಯುತ್ ಬೋರ್ಡಿನ ಕಾರ್ಮಿಕರ ವಿಶೇಷ ಪ್ರತಿರೊಧ ಬಂದಿತ್ತು. ಆದರೂ ಜಾರಿ ಮಾಡಲಾಗುತ್ತಿದೆ.

ಉತ್ತರ ಪ್ರದೇಶದ ವಿದ್ಯುತ್ ಕಾರ್ಮಿಕರು ಮುಷ್ಕರದ ಮೂಲಕವೇ ಪಿತೂರಿ ಇಡೀ ದೇಶದ ಎಲ್ಲಾ ರಾಜ್ಯಗಳನ್ನು ಬಲಿತೆಗೆದುಕೊಳ್ಳುವ ವಿಶ್ವಬ್ಯಾಂಕ್ ಬಿಜೆಪಿ ಸರ್ಕಾರದ ಪಿತೂರಿಗೆ ಅಡ್ಡಿ ಒಡ್ಡಿದ್ದಾರೆ.

ವಿದ್ಯುತ್ ಬೋರ್ಡಿನ ಸಮಸ್ಯೆಗಳೇನು?

ಉತ್ತರ ಪ್ರದೇಶ ಮಾತ್ರವಲ್ಲ ಎಲ್ಲಾ ರಾಜ್ಯಗಳ ವಿದ್ಯುತ್ ಬೋರ್ಡ್‌ಗೆ ಎದುರಾಗಿರುವ ಸಾಮಾನ್ಯ ಸಮಸ್ಯೆ ಭಾರಿನಷ್ಟದ್ದು, ಎಲ್ಲಾ ರಾಜ್ಯ ವಿದ್ಯುತ್ ಬೋರ್ಡ್‌ಗಳ 1998-99ರ ಒಟ್ಟು ವಾರ್ಷಿಕ ನಷ್ಟ ಹತ್ತು ಸಾವಿರ ಕೋಟಿ. ಈ ನಷ್ಟಕ್ಕೆ ಮುಖ್ಯ ಕಾರಣ ಕೃಷಿಗೆ ನೀಡುತ್ತಿರುವ ವಿದ್ಯುತ್ ಸಬ್ಸಿಡಿ ಎಂದು ಸರ್ಕಾರ, ವಿಶ್ವಬ್ಯಾಂಕ್ ಮತ್ತು ಗುತ್ತೇದಾರಿ ಹಿಡಿತದಲ್ಲಿರುವ ಸುದ್ದಿ ಮಾಧ್ಯಮಗಳು ಪ್ರಚಾರ ಮಾಡುತ್ತಿವೆ. ಅದೇ ರೀತಿ ಸಿಬ್ಬಂದಿ ಅಶಿಸ್ತು, ಅದಕ್ಷತೆ, ಭ್ರಷ್ಟಾಚಾರ, ಪೋಲು ಸಹ ಕಾರಣ ಎನ್ನುತ್ತಾರೆ ಅವರು. ಇವೆಲ್ಲ ಸ್ವಲ್ಪ ಪ್ರಮಾಣದ ನಷ್ಟಕ್ಕೆ ಕಾರಣವಿದ್ದರೂ, ಇವು ಪ್ರಮುಖ ಕಾರಣಗಳು ಎನ್ನುತ್ತಾರೆ.



ವಿದ್ಯುತ್ ಬೋರ್ಡಿನ ನಷ್ಟಕ್ಕೆ ಮುಖ್ಯ ಕಾರಣ ವಿತರಣೆಯಲ್ಲಿ ನಷ್ಟ. ಇದಕ್ಕೆ ಬೇಕಾದ ತಾಂತ್ರಿಕ ಬದಲಾವಣೆಗೆ ಬೇಕಾದ ಹಣ ಅದಕ್ಕೆ ಹೂಡದಿರುವುದೇ ಕಾರಣ. ಈಗಿನ ಪ್ರಸಾರಣೆ ಮತ್ತು ವಿತರಣೆಯಲ್ಲಿ ಆಗುವ ನಷ್ಟ ಸುಮಾರು ಹತ್ತು ಸಾವಿರ ಕೋಟಿ (ಬೋರ್ಡುಗಳ ನಷ್ಟದಷ್ಟೇ ಸುಮಾರು) ಸರ್ಕಾರ ಬೋರ್ಡುಗಳನ್ನು ಕಮರ್ಶಿಯಲ್ ಆಧಾರದ ಮೇಲೆ ನಡೆಸಬೇಕು ಎನ್ನುತ್ತಾರೆ. ಯಾವುದೇ 'ಕಂಪನಿ'ಯಲ್ಲಿ ಬಂಡವಾಳ ಹೂಡದೆ ಅದು ನಡೆಯಲು ಸಾಧ್ಯವೇ? ಬೋರ್ಡುಗಳಲ್ಲಿ ರಾಜ್ಯ ಸರ್ಕಾರಗಳು 'ಸಾಲ' ಕೊಡುತ್ತವೆ. ಅದರ ಮೇಲೆ ಬೋರ್ಡ್‌ಗಳು ಬಡ್ಡಿ ತೆರಬೇಕು. ರಾಜ್ಯ ಸರಕಾರಗಳು ಕೊಡುವ 'ಸಾಲ'ವನ್ನು ಬಂಡವಾಳ' ಎಂದು ಪರಿಗಣಿಸಿದರೆ, ಇದನ್ನು ಬೋರ್ಡುಗಳ ವಿತರಣೆ ಮತ್ತು ಪ್ರಸಾರಣೆ ತಾಂತ್ರಿಕ ಅಭಿವೃದ್ಧಿಗೆ ಬಳಸಲು ಅದರಿಂದ ನಷ್ಟ ಅಳಿಸಿ ಹಾಕಬಹುದು. ಪಶ್ಚಿಮ ಬಂಗಾಳ ಸರ್ಕಾರ ಈ ರೀತಿ ಮಾಡಿದೆ.

ಕೃಷಿ ಸಬ್ಸಿಡಿ ನಷ್ಟದ ಮೂಲ ಎಂದು ಹೇಳಲಾಗುತ್ತದೆ. ಇದು ನಿಜವಲ್ಲ, ಮಾತ್ರವಲ್ಲ ಹೆಚ್ಚಿನ ಕೃಷಿ ವಿದ್ಯುತ್ ಮೀಟರಿಲ್ಲದ್ದರಿಂದ, ಹಲವರು ಅದನ್ನು ಪ್ರಸರಣ ಮತ್ತು ವಿತರಣೆ ನಷ್ಟಕ್ಕೆ ಸೇರಿಸಿಬಿಡುತ್ತಾರೆ. ಇದು ಮಾತ್ರವಲ್ಲ ಕೃಷಿಗೆ ವಿದ್ಯುತ್ ಸಬ್ಸಿಡಿ ಮುಂದುವರೆಸುವ ಅಗತ್ಯವಿದೆ. ದೇಶದ ಆಹಾರ ಭದ್ರತೆ ದೃಷ್ಟಿಗೆ ವಿದ್ಯುತ್ ಸಬ್ಸಿಡಿ ಮುಂದುವರೆಯಬೇಕು. ಇಲ್ಲವೆ ರಾಜ್ಯ ಸರ್ಕಾರ ಬೋರ್ಡುಗಳಿಗೆ ಆ ಮೊತ್ತವನ್ನು ಪಾವತಿ ಮಾಡಬೇಕು. ಕೃಷಿ ಸಬ್ಸಿಡಿಯನ್ನು ಹಿಗ್ಗಿಸುವ ಈ ಮೋಸವನ್ನು ಗಣನೆಗೆ ತೆಗೆದುಕೊಂಡು ಪ್ರಸರಣ ಮತ್ತು ವಿತರಣೆಯಲ್ಲಿ ನಷ್ಟ 18 ಸಾವಿರ ಕೋಟಿರೂ. ಎಂದು ಅಂದಾಜು ಮಾಡಲಾಗಿದೆ. ಅದರ ಅರ್ಧವಷ್ಟ ಕಡಿಮೆ ಮಾಡಿದರೂ, ಬೋರ್ಡುಗಳ ನಷ್ಟಗಳನ್ನು ಅಳಿಸಿ ಹಾಕಬಹುದು. ಬೋರ್ಡುಗಳು ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸರ್ಕಾರಗಳು ಮುತುವರ್ಜಿ ವಹಿಸಬೇಕು. ಆದರೆ ಅದು ಸರ್ಕಾರದ ಉದ್ದೇಶ ಸಹ ಅಲ್ಲ. ಸರ್ಕಾರದ ಉದ್ದೇಶವೇ ಬೇರೆ. ಬೋರ್ಡುಗಳ ನಷ್ಟ ಬರಿಯ ನೆಪ.

ವಿದ್ಯುತ್ ಕ್ಷೇತ್ರ ಖಾಸಗೀಕರಿಸುವ ಹುನ್ನಾರ

ವಿಶ್ವಬ್ಯಾಂಕ್‌ನ ಒತ್ತಡದಿಂದ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಿಸುವುದೇ ಬಿಜೆಪಿ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರಗಳ ಹುನ್ನಾರ. 8ನೇ ಯೋಜನೆಯಲ್ಲಿ ವಿದ್ಯುತ್ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಖೋತಾ ಮಾಡಿ ಕಾಂಗ್ರೆಸ್ ಸರ್ಕಾರ ವಿದ್ಯುತ್ ಉತ್ಪಾದನೆಯಲ್ಲಿ ಕುಸಿತವಾಗಿತ್ತು. 5,6,7ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಸುಮಾರು 20 ಶೇಕಡಾ ಇದ್ದ ವಿದ್ಯುತ್ ಕ್ಷೇತ್ರದ ಹೂಡಿಕೆ, 8ನೇ ಯೋಜನೆಯಲ್ಲಿ ಶೇಕಡ 16ಕ್ಕೆ ಕುಸಿಯಿತು. 7ನೇ ಯೋಜನೆಯಲ್ಲಿ 21,000 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ ಸ್ಥಾಪಿಸಿದರೆ, 8ನೇ ಯೋಜನೆಯಲ್ಲಿ ಗುರಿ ಇದ್ದದ್ದೇ 10 ಸಾವಿರ ಮೆಗಾವ್ಯಾಟ್. ಆದರೂ ಹೆಚ್ಚು ಕಡಿಮೆ ಪೂರ್ಣವಾಗಿ ಖಾಸಗಿ ವಿದೇಶಿ ಬಂಡವಾಳ ಆಧಾರಿತ. ಆಗಿನ ಕಾಂಗ್ರೆಸ್ ಸರ್ಕಾರ ಮತ್ತು ಈಗಿನ ಬಿಜೆಪಿ ಸರ್ಕಾರ ವಿದ್ಯುತ್ ಕ್ಷೇತ್ರಕ್ಕೆ ವಿದೇಶಿ ಖಾಸಗಿ ಬಂಡವಾಳ ಆಕರ್ಷಿಸಲಿಕ್ಕೆ ಎಲ್ಲಾ ರೀತಿಯ ತಿಪ್ಪರಲಾಗಿ ಹಾಕಿದೆ. ದೇಶದ ಹಿತಾಸಕ್ತಿಗಳನ್ನು ಜನರ ಮೇಲೆ ಹೊರೆ ಹೇರಿಸಿ ಈ ಕಂಪನಿಗಳಿಗೆ ಸವಲತ್ತುಗಳನ್ನು ನೀಡಿದೆ. ಆದರೂ ಕೂಡ ಹಾಕಿಕ್ಕೊಂಡಿದಕ್ಕಿಂತಲೂ ಕಡಿಮೆ ಗುರಿ ಸಾಧಿಸಲಾಗಿದೆ. ಅದರಲ್ಲಿ ಖಾಸಗಿ ವಿದ್ಯುತ್ ಉತ್ಪಾದನೆ ಕೇವಲ 2000 ಮೆಗಾವ್ಯಾಟ್. ಅದೂ ಎನ್ರೋನ್, ಕೊಜೆಂಟ್ರಿಕ್ಸ್‌ನ ಸಂದರ್ಭದಲ್ಲಿ ಜಗಜ್ಜಾಹೀರಾಗುವಂತೆ ಈ ಕಂಪನಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಡಾಲರಿನಲ್ಲಿ ಶೇಕಡ 16 ಲಾಭ ಗ್ಯಾರಂಟಿ ಕೊಟ್ಟು, ಉತ್ಪಾದನೆಯನ್ನು ಬೋರ್ಡುಗಳು ಬಳಸುವ ಬಗ್ಗೆ ಗ್ಯಾರಂಟಿ ಕೊಟ್ಟು, ಸಾರ್ವಜನಿಕ ಕ್ಷೇತ್ರದ ವಿದ್ಯುತ್ ಉತ್ಪಾದನಾ ಕೇಂದ್ರಗಳು ಯೂನಿಟಿಗೆ 2 ರೂ ರೂನಂತೆ ಬೆಲೆ ತೆತ್ತು ಈ ದುರವಸ್ಥೆ, ಈಗ ಸ್ಥಿತಿ ಎಂತಹ ಅದೋಗತಿ ಮುಟ್ಟಿದೆಯೆಂದು ಮಹಾರಾಷ್ಟ್ರದಲ್ಲಿ ಎನ್ರೋನ್ ಮುಂದೆ ಸಾಷ್ಟಾಂಗ ಬಿದ್ದ ಕೇಂದ್ರ, ರಾಜ್ಯ ಸರ್ಕಾರಗಳ ಸವಲತ್ತು ಮುಂದುವರೆಸಬೇಕು. ಇತರ ಅಗ್ಗದ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಮುಚ್ಚಬೇಕು. ಬೋರ್ಡ್ ಯೂನಿಟ್ಟಿಗೆ 5 ರೂ ತೆರಲಾಗದೆ, ಅದನ್ನು ಗ್ರಾಹಕರಿಂದ ವಸೂಲಿ ಮಾಡಲಾಗದೆ ಒದ್ದಾಡುತ್ತಿದೆ.

ಸಾರ್ವಜನಿಕರಿಗೆ ವಿದ್ಯುತ್ ಬೆಲೆ ಏರಿಕೆ- ವಿದೇಶಿ ಕಂಪನಿಗಳಿಗೆ ಭಾರಿ ಲಾಭ

ಪ್ರಸರಣ, ವಿತರಣೆಯನ್ನೂ ಕಂಪನಿ ಮಾಡಿ, ಖಾಸಗೀಕರಿಸಿದರೆ ಇದರಲ್ಲಿ ಬಂಡವಾಳ ಹೂಡುವ ಬಾರಿ ದೈತ್ಯ ವಿದೇಶಿ ಕಂಪನಿಗಳು ಸರ್ಕಾರ, ಬೋರ್ಡು ಬದಲು ಈ ಖಾಸಗಿ ಕಂಪನಿಗಳು ಜನರ ಮೇಲೆ ವಿದ್ಯುತ್ ಬೆಲೆ 2-3 ಪಟ್ಟು ಹೆಚ್ಚು ಹೇರಲು ಹೆಚ್ಚು ದಕ್ಷವಾಗಿರಬಹುದು ಎಂದು ವಿಶ್ವಬ್ಯಾಂಕ್ ಲೆಕ್ಕಾಚಾರ. ಆಗ ಭಾರಿ ಅಶಾಂತಿ ಆದರೆ ಎಲ್ಲಾ ಖಾಸಗಿ ಕಂಪನಿಗಳ ಕೈಯಲ್ಲಿದೆ ಅವರನ್ನು ಕೇಳಿಕೊಳ್ಳಿ. ಅವರು ಕೇಳಿದ ಬೆಲೆ ತೆರದಿದ್ದರೆ ವಿದ್ಯುತ್ ಉತ್ಪಾದನೆ ಮುಚ್ಚಿಬಿಡ್ತಾರೆ ಎಂದು ಬೆದರಿಸಬಹುದು. ಇದು ಅವರ ಲೆಕ್ಕಾಚಾರ. ಅಲ್ಲದೆ ಈ ಮೂರು ಕಂಪನಿಗಳನ್ನು ಖಾಸಗೀಕರಿಸಿದರೆ, ಸಾರ್ವಜನಿಕರು ದುಡಿದು ಹೂಡಿದ 7 ಲಕ್ಷ ಕೋಟಿರೂ. ಆಸ್ತಿ ಇರುವ ವಿದ್ಯುತ್ ಕ್ಷೇತ್ರವನ್ನು ಮೂರು ಕಾಸಿಗೆ ವಿದೇಶಿ ಕಂಪನಿಗೆ ಮಾರಬಹುದಲ್ಲ, ಅದರಲ್ಲಿ 'ಕಟ್' ಇಸಗೊಳ್ಳಬಹುದಲ್ಲ, ಇದು ಬಿಜೆಪಿ ಸರ್ಕಾರದ ಪ್ಲಾನ್.

ಯು.ಪಿ. ವಿದ್ಯುತ್ ಬೋರ್ಡನ್ನು ಮೂರು ಆಗಿ ಒಡೆಯಬೇಕೆಂದು ಸಲಹೆ ಮಾಡಿದ ಕಂಪನಿಯು ಕೊನೆಗೂ ವಿದ್ಯುತ್ ಬೆಲೆಯನ್ನು 5ರಿಂದ 6 ಪಟ್ಟು ಹೆಚ್ಚಿಸಬೇಕು ಎಂದು ಶಿಫಾರಸು ಮಾಡಿದೆ ಎಂಬುದನ್ನು ಬಿಜೆಪಿ ಕೇಂದ್ರ ರಾಜ್ಯ ಸರ್ಕಾರಗಳು ಮುಚ್ಚಿಡುತ್ತವೆ. ವಿದ್ಯುತ್ ಬೆಲೆ ಏರಿದಾಗ ನೀರು, ಮುನಿಸಿಪಾಲಿಟಿ ಟ್ಯಾಕ್ಸ್ ಇತ್ಯಾದಿಯೂ ಏರಬೇಕಾಗುತ್ತದೆ.

ಈ ರೀತಿ ಯುಪಿ ಸರ್ಕಾರದ ಬೋರ್ಡನ್ನು ಒಡೆಯುವ 7 ಲಕ್ಷ ಕೋಟಿ ರೂ. ಬೆಲೆ ವಿದ್ಯುತ್ ಕ್ಷೇತ್ರವನ್ನು ವಿದೇಶಿ ಕಂಪನಿಗಳಿಗೆ ಮೂರು ಕಾಸಿಗೆ ಮಾರುವ, ಎಲ್ಲಾ ಅಧಕ್ಷತೆ, ನಷ್ಟ ಲೂಟಿಯ ಭಾರವನ್ನು ಜನರ ಮೇಲೆ ವಿದ್ಯುತ್ ಬೆಲೆ ಏರಿಕೆ ರೂಪದಲ್ಲಿ ಹೊರಿಸುವ ಹುನ್ನಾರ.

ಇದರ ವಿರುದ್ಧ ಹೋರಾಡುತ್ತಿರುವ ಧೀರ ಉತ್ತರ ಪ್ರದೇಶದ ವಿದ್ಯುತ್ ಕಾರ್ಮಿಕರಿಗೆ ಎಲ್ಲಾ ವಿದ್ಯುತ್ ಕಾರ್ಮಿಕರ, ಎಲ್ಲಾ ಕಾರ್ಮಿಕರ, ಎಲ್ಲಾ ದೇಶಪ್ರೇಮ ಜನರ ಬೆಂಬಲ ಅಗತ್ಯ.

ಕರ್ನಾಟಕದಲ್ಲಿ ವಿದ್ಯುತ್, ನೀರು, ಒಳಚರಂಡಿ, ಖಾಸಗೀಕರಣ

ಉತ್ತರ ಪ್ರದೇಶದಲ್ಲಿ ವಿದ್ಯುತ್ ಮುಷ್ಕರ ನಡೆಯುತ್ತಿರುವಾಗ ಕರ್ನಾಟಕ ಸರ್ಕಾರ ವಿದ್ಯುತ್, ನೀರು, ಒಳಚರಂಡಿ ಖಾಸಗಿಕರಣ ಘೋಷಿಸಿದೆ. ಕೆಲವು ದಿನಗಳ ಹಿಂದೆಯಷ್ಟೆ ಎಲ್ಲಾ ಕೃಷಿ ವಿದ್ಯುತ್ ಸರಬರಾಜು ಮಾಡಲು ಹಾಕಲಾಗದು ಎಂದಿದ್ದ ನಮ್ಮ ಹೈ-ಟೆಕ್ ಮುಖ್ಯಮಂತ್ರಿಗಳು ಐ.ಟಿ. ಕೈಗಾರಿಕೆಗಳಿಗೆ ದಿನಬೆಳಗಾದರೆ ಸವಲತ್ತು ಘೋಷಿಸುವ ಮುಖ್ಯಮಂತ್ರಿಗಳು. ರೈತನಿಗೆ ವಿದ್ಯುತ್ ಸಬ್ಸಿಡಿ ತೆಗೆದು ಹಾಕುವ ಸೂಚನೆ ಇದೆ? ಕೊಜೆಂಟ್ರಿಕ್ಸ್ ತಾನು ವಿದ್ಯುತ್ ಉತ್ಪಾದನೆ ಬಿಟ್ಟು ಹೊರನಡೆಯುತ್ತಿದೆ ಎಂದಾಗ ಪೀಡೆ ಕಳೆಯಿತು ಎನ್ನುವದು ಬಿಟ್ಟು, ಸಾಷ್ಟಾಂಗ ನಮಸ್ಕಾರ ಹಾಕಿ ಅದನ್ನು ಓಲೈಸುವ ನೀತಿಯ ಬಗ್ಗೆ ಸಹ ಜನ...

ಭಾರತಕ್ಕೆ ದುಡಿಯುವ ವರ್ಗಕ್ಕೊಂದು ದಾರಿದೀಪ

1964ರಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ ಅಂಗೀಕರಿಸಲಾದಂದಿನಿಂದ ಇಲ್ಲಿಯ ವರೆಗಿನ ಬೆಳವಣಿಗೆಗಳನ್ನು ವಿಮರ್ಶಿಸಿ ಕಾರ್ಯಕ್ರಮದಲ್ಲಿ ಸೇರಿಸಬೇಕೆಂದು ನಿಯೋಜಿಸಲಾಗಿದ್ದ ಸಮಿತಿಯ ಶಿಫಾರಸ್ಸುಗಳನ್ನು ಪಕ್ಷದ ಪೊಲಿಟ್‌ಬ್ಯೂರೋ ಏಕಾಭಿಪ್ರಾಯದಿಂದ ಅಂಗೀಕರಿಸುವುದರೊಂದಿಗೆ ದೇಶಾದ್ಯಂತ ಸಿಪಿಐ(ಎಂ)ನ ಕಾರ್ಯಕ್ರಮದ ಚರ್ಚೆಗೆ ವೇದಿಕೆಯನ್ನು ಸಿದ್ಧಗೊಳಿಸಲಾಗಿದೆ.

ಮುಂದಿನ ಮೂರ್‍ನಾಲ್ಕು ತಿಂಗಳು ಅತ್ಯಂತ ಪ್ರಜಾಸತ್ತಾತ್ಮಕವಾಗಿ, ತೀವ್ರವಾದ ಚರ್ಚೆಗೆ ಒಳಗಾಗಲಿರುವ ಈ ಕೆಲಸವು ಭಾರತದ ದುಡಿಯುವ ವರ್ಗಕ್ಕೆ ಮತ್ತು ಅದರ ಚಳುವಳಿಗೆ ಅತ್ಯಂತ ಮಹತ್ವದ ಕಾಣಿಕೆ ನೀಡಲಿದೆ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಅಗತ್ಯ, ಅದರ ಚಾರಿತ್ರಿಕ ಬೆಳವಣಿಗೆ, ಬದಲಾದ ಸನ್ನಿವೇಶ ಮುಂತಾದವುಗಳ ಬಗ್ಗೆ ಸೂಕ್ಷ್ಮವಾಗಿ ಬೆಳಕು ಚೆಲ್ಲುವುದೇ ಇಲ್ಲಿಯ ಪ್ರಯತ್ನವಾಗಿದೆ.

ಕಾರ್ಯಕ್ರಮದ ಅಗತ್ಯ

ಪಕ್ಷಕ್ಕೊಂದು ಸ್ಪಷ್ಟವಾಗಿ ನಿರ್ಧಿಷ್ಟಪಡಿಸಿದ ಕಾರ್ಯಕ್ರಮವೆಂಬುದು ಬಂಡವಾಳಶಾಹಿ - ಭೂಮಾಲಿಕ ಪಕ್ಷಗಳಿಗೆ ಸಾಮಾನ್ಯವಾಗಿ ಇರುವುದಿಲ್ಲ. ಇವು ಆಗಾಗ ನೀಡುವ ರಾಜಕೀಯ ಹೇಳಿಕೆಗಳು, ಕೆಲ ಸಂದರ್ಭಗಳಲ್ಲಿ ಸಂಘಟಿಸುವ ಸಮಾವೇಶದ ತೀರ್ಮಾನಗಳು ಒಬ್ಬೊಬ್ಬರು ಬರೆದು ಅಧಿವೇಶನಗಳ ಮುಂದೆ ಓದಿ ಏನಾಗುತ್ತಿದೆ ಎಂದು ತಿಳಿಯುವುದರೊಳಗೆ ಅಂಗಿಕಾರವಾಗುವ ಈ ತೀರ್ಮಾನಗಳು. ಇವೇ ಇಂತಹ ಪಕ್ಷಗಳ ಕಾರ್ಯಕ್ರಮಗಳಾಗಿ ಬಿಡುತ್ತವೆ. ಆದರೆ ಇಡೀ ದೇಶದ ಕ್ರಾಂತಿಕಾರಿ ಬದಲಾವಣೆಯ ಗುರಿ ಇರುವ ಕಮ್ಯುನಿಸ್ಟ್ ಪಕ್ಷಗಳಿಗೆ ಕಾರ್ಯಕ್ರಮ ಇರುತ್ತದೆ ಮತ್ತು ಇರಲೇಬೇಕಾಗುತ್ತದೆ. ಆಯಾ ದೇಶದ ನಿರ್ದಿಷ್ಟ ಸನ್ನಿವೇಶಗಳಿಗೆ ಅನ್ವಯಿಸಿ ನಿರ್ದಿಷ್ಟ ರೀತಿಯ ಕ್ರಾಂತಿಯನ್ನು ಸಂಘಟಿಸಬೇಕಾದ ಚಾರಿತ್ರಿಕ ಜವಾಬ್ದಾರಿ ಕಮ್ಯುನಿಸ್ಟ್ ಪಕ್ಷಗಳಿಗಿರುವುದರಿಂದ ಕಮ್ಯುನಿಸ್ಟ್ ಪಕ್ಷಕ್ಕೆ ಮೂಲ ದಾಖಲೆಯಾಗಿದೆ.

ದೀರ್ಘವಾದ ಸೈದ್ಧಾಂತಿಕ ಸಂಘರ್ಷಗಳ ಫಲ

ಸಿಪಿಐ(ಎಂ)ನ ಪ್ರಸಕ್ತ ಕಾರ್ಯಕ್ರಮವು 1964ರಲ್ಲಿ ನಡೆದ ಪಕ್ಷದ ಏಳನೇ ಅಧಿವೇಶನದಲ್ಲಿ ಅಂಗೀಕರಿಸಿದ್ದು. ಇದು ಒಬ್ಬ ಮಾರ್ಕ್ಸ್‌ವಾದಿಯ ವೈಯುಕ್ತಿಕ ಸಂಶೋಧನೆಯಲ್ಲ ಅಥವಾ ಅದಕ್ಕಾಗಿ ನಿಯೋಜಿಸಿದ ಒಂದು ಗುಂಪಿನದ್ದೂ ಅಲ್ಲ. ಭಾರತದ ಕಮ್ಯುನಿಸ್ಟ್ ಚಳುವಳಿಯ ಒಳಗೆ ಹಲವು ದಶಕಗಳ ಕಾಲ, ಮುಖ್ಯವಾಗಿ 1947ರಲ್ಲಿ ರಾಜಕೀಯ ಸ್ವತಂತ್ರ್ಯ ಬಂದ ನಂತರದ ವರ್ಷಗಳಲ್ಲಿ ಪಕ್ಷದೊಳಗೆ ನಡೆದ ತೀವ್ರವಾದ ಆಂತರಿಕ ಚರ್ಚೆಗಳ ಫಲವಾಗಿದೆ.

ಬ್ರಿಟಿಷರಿಂದ ಅಧಿಕಾರ ವರ್ಗಾವಣೆಯ ನಂತರ, ರಾಜ್ಯದ ವರ್ಗ ವಿಶ್ಲೇಷಣೆ, ಭಾರತದ ಕ್ರಾಂತಿಯ ಹಾದಿ, ಸಿಪಿಐ(ಎಂ)ನ ಮುಂದಿದ್ದ ಕರ್ತವ್ಯಗಳು, ಇವು ಸೈದ್ಧಾಂತಿಕ-ರಾಜಕೀಯ ಕಾರಣಗಳಾಗಿ ಪಕ್ಷದ ಆಂತರಿಕ ಸಂಘರ್ಷಕ್ಕೆ ಕಾರಣವಾದವು. ಸಿಪಿಐನೊಳಗೆ ಸುಧಾರಣಾವಾದಿ ಮತ್ತು ಎಡ-ಪಂಥವಾದಿ ನೆಲೆಯ ದೃಷ್ಟಿಕೋನಗಳು ನಿರಂತರವಾಗಿ ಮುಂದುವರಿದು ಸರಿಯಾದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಧೋರಣೆ ಹೊಂದಲು ವಿಫಲವಾಯಿತು. ಈ ಪ್ರಕ್ರಿಯೆಯ ಭಾಗವಾಗಿಯೇ 1951ರಲ್ಲಿ ಸ್ಟಾಲಿನ್ ಜೊತೆ ಚರ್ಚೆ ನಡೆದು ಅದರ ತೀರ್ಮಾನಗಳನ್ನು 1951ರ ಕಾರ್ಯಕ್ರಮದಲ್ಲಿ ಸೇರಿಸಲಾಯ್ತು. ಮತ್ತು ಇದಕ್ಕಾಗಿ ಕರೆದಿದ್ದ ವಿಶೇಷ ಸಮ್ಮೇಳನದಲ್ಲಿ ಅಂಗೀಕರಿಸಲಾಯ್ತು. ನಂತರ 1953ರಲ್ಲಿ ನಡೆದ ಪಕ್ಷದ ಮೂರನೇ ಮಹಾಧಿವೇಶನದಲ್ಲಿ ಇದನ್ನು ಅಂಗೀಕರಿಸಲಾಯ್ತು.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬೆಳವಣಿಗೆಗಳು ಎಷ್ಟು ವೇಗವಾಗಿ ಬೆಳೆದವೆಂದರೆ 1955ರಷ್ಟೊತ್ತಿಗೆ ಈ ಕಾರ್ಯಕ್ರಮದ ಮೂಲ ತಿಳುವಳಿಕೆಗಳು ಅಂದಿನ ರಾಜಕೀಯ ಅಗತ್ಯಗಳನ್ನು ಪೂರೈಸಲು ಆಗಲಿಲ್ಲ ಮತ್ತು ಪರಿಸ್ಥಿತಿಗೆ ಸರಿಹೊಂದಲಿಲ್ಲ. ಈ ಹಿನ್ನೆಲೆಯಲ್ಲಿ 1995ರಲ್ಲಿ ಕೇಂದ್ರ ಸಮಿತಿ ಅಂಗೀಕರಿಸಿದ ನಿರ್ಣಯವು ಪಕ್ಷಕ್ಕೆ ಒಂದು ರಾಜಕೀಯ ಧೋರಣೆ ಮತ್ತು ಕಾರ್ಯಕ್ರಮಕ್ಕಾಗಿನ ಆಂತರಿಕ ಹೋರಾಟವನ್ನು ಹರಿಬಿಟ್ಟಿತು.

1956ರಲ್ಲಿ ಪಕ್ಷದ ನಾಲ್ಕನೇ ಅಧಿವೇಶನಕ್ಕೆ ಪೂರ್ವಭಾವಿಯಾಗಿ ವಿಭಿನ್ನ ಅಭಿಪ್ರಾಯಗಳು, ಧೋರಣೆಗಳನ್ನು ಹೊಂದಿರುವ ದಾಖಲೆಗಳನ್ನು ಚರ್ಚೆಗೆ ಬಿಡಲಾಯ್ತು. ಈ ಅಧಿವೇಶನಕ್ಕೆ ಮುಂಚೆ ನಡೆದ ರಾಜ್ಯ ಸಮ್ಮೇಳನಗಳು ಈ ಭಿನ್ನ-ವಿಭಿನ್ನ ದೃಷ್ಟಿಕೋನಗಳಿಗೆ ರಾಜಕೀಯ ರಣರಂಗಗಳಾಗಿ ಮಾರ್ಪಟ್ಟವು. ಅಂತಿಮವಾಗಿ ಮಹಾಧಿವೇಶನದಲ್ಲಿ ತೀವ್ರವಾದ ಚರ್ಚೆಗಳು ನಡೆದು 1951ರ ಕಾರ್ಯಕ್ರಮವನ್ನು ಅಮಾನತ್ತಿನಲ್ಲಿಡಲು ತೀರ್ಮಾನಿಸಲಾಯ್ತು.

1956 ರಿಂದ 1961ರವರೆಗೆ ಹೀಗೇ ಮುಂದುವರಿದಿತ್ತು. 1961ರಲ್ಲಿ ವಿಜಯವಾಡದಲ್ಲಿ ನಡೆದ ಆರನೇ ಮಹಾಧಿವೇಶನದಲ್ಲಿ ಮತ್ತೊಂದು ಸುತ್ತಿನ ತೀವ್ರವಾದ ಮತ್ತು ಆಕ್ರೋಶಭರಿತವಾದ ಪಕ್ಷದ ಆಂತರಿಕ ಹೋರಾಟವು ಪುಟಿದೆದ್ದಿತು. ಅಂತಿಮವಾಗಿ ಪಕ್ಷ ಒಡೆಯಬಹುದಾದಷ್ಟು ತೀವ್ರವಾದ ರಾಜಕೀಯ ಭಿನ್ನತೆಗಳು ನಿರ್ಮಾಣವಾದವು. ಭಾರತದ ಕ್ರಾಂತಿಯದಾರಿ ಚೀನಾ ಮಾದರಿಯೋ, ಸೋವಿಯತ್ ಮಾದರೀಯೋ ಎಂಬಿತ್ಯಾದಿ ಮೂಲ ಸೈದ್ಧಾಂತಿಕ ವಿಚಾರಗಳಲ್ಲಿನ ಭಿನ್ನತೆಯೇ ಅಲ್ಲದೆ, ವಿಶ್ವಕಮ್ಯುನಿಸ್ಟ್ ಚಳುವಳಿಯಲ್ಲಿ ಮೂಡಿಬಂದ ಸೈದ್ಧಾಂತಿಕ ವ್ಯತ್ಯಾಸಗಳು ಸಿಪಿಐ ಒಳಗಿನ ರಾಜಕೀಯ - ಸೈದ್ಧಾಂತಿಕ ಭಿನ್ನತೆಗಳನ್ನು ಮತ್ತು ಸಂಘರ್ಷವನ್ನು ಹೆಚ್ಚಿಸಿತು.

ಇಂತಹ ತೀವ್ರ ಸೈದ್ಧಾಂತಿಕ ಸಂಘರ್ಷಗಳ ಫಲವಾಗಿ ಭಾರತದ ಪ್ರಭುತ್ವದ ವರ್ಗ ವಿಶ್ಲೇಷಣೆ, ಕ್ರಾಂತಿಯ ಹಂತ, ದಾರಿ ಮತ್ತು ಸ್ವರೂಪದಲ್ಲಿನ ಅಸ್ಪಷ್ಟತೆಗಳನ್ನು, ತಪ್ಪು ಧೋರಣೆಗಳನ್ನು, ಅಂಧಾನುಕರಣೆಯನ್ನು ಹೊರತುಪಡಿಸಿದ ಒಂದು ಸರಿಯಾದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಧೋರಣೆಯ ಪಕ್ಷವಾಗಿ 1964ರಲ್ಲಿ ಸಿಪಿಐ(ಎಂ) ಪಕ್ಷ ಮೂಡಿಬಂತು. ಈ ರೀತಿಯಾಗಿ ಸಿಪಿಐ(ಎಂ)ನ ಕಾರ್ಯಕ್ರಮವು ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿನ ಒಟ್ಟಾರೆ ಅನುಭವದ ಮೂಸೆಯಲ್ಲಿ ಮೂಡಿ ಬಂದ ದಸ್ತಾವೇಜಾಗಿದೆ.

ಮತ್ತೆ ಬದಲಾದ ಸನ್ನಿವೇಶ

1964ರಷ್ಟು ಹಿಂದೆ ಜಾರಿಗೊಂಡ ಪಕ್ಷದ ಕಾರ್ಯಕ್ರಮವನ್ನು, ಇದುವರೆಗೆ ರಾಷ್ಟ್ರೀಯವಾಗಿ ಮತ್ತು ಅಂತರರಾಷ್ಟ್ರೀಯವಾಗಿ ಆಗಿರುವ ಗಣನೀಯ ಬದಲಾವಣೆಗಳಿಗೆ ಅನ್ವಯವಾಗುವಂತೆ ಮಾಡಬೇಕೆಂದು 1992ರಲ್ಲಿ ಚೆನ್ನೈಯಲ್ಲಿ ನಡೆದ ಪಕ್ಷದ 14ನೇ ಮಹಾಧಿವೇಶನವು ತೀರ್ಮಾನಿಸಿತ್ತು. ಕಾರ್ಯಕ್ರಮದ ಮೂಲ ವಿಷಯಗಳಾದ ಕ್ರಾಂತಿಯ ಹಂತ, ರಾಜ್ಯದ ವರ್ಗಗುಣ, ವ್ಯೂಹ ಮತ್ತು ವರ್ಗ ಹೊಂದಾಣಿಕೆಗಳು ಈಗಲೂ ಪ್ರಸ್ತುತವಾಗಿವೆ, ಉಳಿದ ವಿಚಾರಗಳಿಗೆ ಸಂಬಂಧಿಸಿ ಪರಿಪೂರ್ಣಗೊಳಿಸಬೇಕೆಂದು ತೀರ್ಮಾನಿಸಲಾಗಿತ್ತು.

ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷದ ಏಕಸ್ವಾಮ್ಯವು ಕ್ಷೀಣಿಸುತ್ತಿದ್ದು ರಾಜಕಾರಣವು ಬಲಪಂಥೀಯ ದಿಕ್ಕಿಗೆ ವಾಲುತ್ತಿದೆ. ಹಲವಾರು ಪ್ರಾದೇಶಿಕ ರಾಜಕೀಯ ಗುಂಪುಗಳು ಸೃಷ್ಟಿಯಾಗಿವೆ. ಭಾರತದ ಬಹುಸಂಖ್ಯಾತ ಜನರನ್ನು ಉದಾರೀಕರಣದ ಆರ್ಥಿಕ ನೀತಿಗಳು ತೀವ್ರವಾಗಿ ಬಾಧಿಸುತ್ತಿವೆ. ಜಾಗತೀಕವಾಗಿ ಸಮಾಜವಾದಿ ರಷ್ಯಾ ಪತನವಾಗಿದೆ. ಹಲವಾರು ಸಮಾಜವಾದಿ ರಾಷ್ಟ್ರಗಳೂ ಪತನವಾಗಿವೆ. ಜಾಗತಿಕ ವರ್ಗಬಲಾಬಲಗಳು ಸಾಮ್ರಾಜ್ಯಶಾಹಿಯ ಪರವಾಗಿವೆ. ಇದು ಬಂಡವಾಳಶಾಹಿಯ ಕ್ರೋಢೀಕರಣ ಮತ್ತು ವಿಸ್ತರಣೆಗೆ ಅನುಕೂಲಕರವಾಗಿ ಪರಿಣಮಿಸಿದೆ. ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಯ ಸುಲಿಗೆಗೆ ದಾರಿಯಾಗಿದೆ.

ಇಂತಹ ಒಟ್ಟಾರೆ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪಕ್ಷದ 14ನೇ ಅಧಿವೇಶನದಲ್ಲಿ ಕಾರ್ಯಕ್ರಮವನ್ನು ಅಪ್‌ಡೇಟ್ ಮಾಡಲು ತೀರ್ಮಾನಿಸಲಾಯ್ತು. ಅಂದರೆ ಕಳೆದ ಸುಮಾರು 8 ವರ್ಷಗಳಿಂದ ಈ ನಿಟ್ಟಿನಲ್ಲಿ ನಡೆದ ತೀವ್ರವಾದ ಸೈದ್ಧಾಂತಿಕ ಚರ್ಚೆ, ವಿಮರ್ಶೆ ಅನುಭವಗಳ ಆಧಾರದಲ್ಲಿ ಈಗ ಪೊಲಿಟ್ ಬ್ಯೂರೋ ಅಪ್‌ಡೇಟ್ ಆದ ಕಾರ್ಯಕ್ರಮದ ಕರಡನ್ನು ಅಂಗೀಕರಿಸಿದೆ.

ದುಡಿಯುವ ವರ್ಗಕ್ಕೆ ಮಹತ್ವವಾದುದು

ಸಿಪಿಐ(ಎಂ)ನ ಕಾರ್ಯಕ್ರಮ ಎಂಬುದು ಭಾರತದ ಇಡೀ ದುಡಿಯುವ ಜನಸಮೂಹಕ್ಕೆ ಮಹತ್ವದ ವಿಷಯವಾಗಿದೆ. ಬದಲಾದ ಪರಿಸ್ಥಿತಿಯು ಅಪಾಯಕಾರಿ ಸನ್ನಿವೇಶವನ್ನು ಸೃಷ್ಟಿಸಿದೆ. ಸಾಮ್ರಾಜ್ಯಶಾಹಿ ಕೃಪಾಪೋಷಿತ ನೂತನ ಆರ್ಥಿಕ ನೀತಿಗಳು ಒಂದು ಕಡೆ, ಇವುಗಳನ್ನು ಕೋಮುವಾದದ ಮುಖವಾಡದೊಂದಿಗೆ ಜಾರಿಗೊಳಿಸಲು ಮತ್ತೊಂದು ಕಡೆ, ಭಾರತದ ಆಳುವ ವರ್ಗ ತೀರ್ಮಾನಿಸಿದೆ. ಹೀಗಾಗಿಯೇ ಕಾಂಗ್ರೆಸ್‌ನ ಜೊತೆಯಲ್ಲಿದ್ದ ಭಾರತದ ಬಂಡವಾಳ ವರ್ಗದ ಮುಖ್ಯ ಪಾಲು ಈಗಲೇ ಕೋಮುವಾದಿ ಮುಖವಾಡ ಹೊತ್ತ ಬಿಜೆಪಿಯನ್ನು ಜೊತೆಗಿಟ್ಟುಕೊಂಡಿದೆ. ಇಂತಹ ವರ್ಗ ಪರಿಣಾಮದ ಹಿನ್ನೆಲೆಯಲ್ಲೇ ಪಕ್ಷದ ಕಾರ್ಯಕ್ರಮವನ್ನು ಅಪ್‌ಡೇಟ್ ಮಾಡುವುದು ದುಡಿಯುವ ವರ್ಗದ ದೃಷ್ಟಿಯಲ್ಲಿ ಮಹತ್ವವಾಗಿರುವುದು.

ಸಿಪಿಐ(ಎಂ)ನ ಕಾರ್ಯಕ್ರಮ- ದೀರ್ಘ ಅನುಭವದ ಕಾರ್ಯಕ್ರಮ

ಸಿಪಿಐ(ಎಂ)ನ ಕಾರ್ಯಕ್ರಮವು ಭಾರತದ ಜನಸಮೂಹಗಳ ವಿಮೋಚನೆಯ ದಾರಿಯಾಗಿದೆ. ಈ ದಾರಿಯ ಅನುಭವವು ಮೂರು ರಾಜ್ಯಗಳ ದೀರ್ಘ ಪಯಣದಲ್ಲಿ ದಟ್ಟವಾಗಿ ದಾಖಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ಎರಡು ದಶಕಗಳಿಗೂ ಮೇಲ್ಪಟ್ಟು ನಡೆಸಿರುವ ಆಡಳಿತ, ಬಂಡವಾಳಶಾಹಿ ರಾಜ್ಯ ವ್ಯವಸ್ಥೆಯ ಮಿತಿಯಲ್ಲೂ ಜಗತ್ತಿನ ಗಮನವನ್ನೇ ಸೆಳೆದ ಭೂ ಸುಧಾರಣೆಗಳು, ಭಾರತಕ್ಕೊಂದು ಮಾದರಿಯಾಗಿರುವ ಪಂಚಾಯತ್ ರಾಜ್ ವ್ಯವಸ್ಥೆ, ಶಿಕ್ಷಣ ಮತ್ತು ಇತರೆ ಸಾಮಾಜಿಕ ಕ್ಷೇತ್ರಗಳಿಗೆ ಇತರೆ ಯಾವುದೇ ರಾಜ್ಯಗಳಿಗಿಂತಲೂ ಹೆಚ್ಚಿನ ಆದ್ಯತೆ, ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ, ಮುಂತಾದ ಸಾಧನೆಗಳ ಹಿಂದಿರುವ ಕರ್ತೃತ್ವ ಶಕ್ತಿ ಪಕ್ಷದ ಕಾರ್ಯಕ್ರಮವಾಗಿದೆ.

ಕೇರಳದಲ್ಲಿನ ಪರಿಣಾಮಗಳು ಹಲವಾರು ರಂಗಗಳಲ್ಲಿ ಅಂತರಾಷ್ಟ್ರೀಯ ಖ್ಯಾತಿಯನ್ನು ಗಳಿಸಿವೆ. ಕೇರಳಕ್ಕಿರುವ ಮಾನವ ಅಭಿವೃದ್ಧಿ ಸೂಚ್ಯಾಂಕ ಸ್ಥಾನವು ಮಹತ್ವವಾದುದು. ಇಡೀ ಕೇರಳ ಸಮಾಜದ ಇಂತಹ ಬದಲಾವಣೆಗೆ ಕಾರಣವಾದ ದೃಷ್ಟಿಕೋನ ಅಡಕವಾಗಿರುವ ಕಾರ್ಯಕ್ರಮವನ್ನು ಅಪ್‌ಡೇಟ್ ಮಾಡುವ ಕೆಲಸ ನಮ್ಮ ಮುಂದಿದೆ.

ಭಾರತದ ಒಟ್ಟಾರೆ ಸಾರಸಂಗ್ರಹ ಕಾರ್ಯಕ್ರಮ ಎಂದರೆ

ಭಾರತ ರಾಜಕೀಯ ಸ್ವಾತಂತ್ರ್ಯಗಳಿಸಿದ್ದು, ಪ್ರಸಕ್ತ ರಾಷ್ಟ್ರೀಯ - ಅಂತರಾಷ್ಟ್ರೀಯ ಸ್ಥಿತಿಗಳಲ್ಲಿ ಅದರ ಪ್ರಾಮುಖ್ಯತೆ, ಭಾರತ ರಾಜ್ಯ ಮತ್ತು ಸರ್ಕಾರದ ವರ್ಗಗುಣ, ಮತ್ತು ಸ್ವರೂಪ-ದೊಡ್ಡ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ, ಭೂಮಾಲಿಕ ರಾಜ್ಯ, ಈ ಪ್ರಭುತ್ವವು ಹೇಗೆ ಭಾರತದ ಆರ್ಥಿಕತೆಯನ್ನು ಬಂಡವಾಳಶಾಹಿ ಲೈನಿನಲ್ಲಿ ಬೆಳೆಸುತ್ತದೆ ಮತ್ತು ಇದನ್ನು ವಿದೇಶಿ ಹಣಕಾಸು ಬಂಡವಾಳದ ಹಾಗೂ ಭೂಮಾಲಿಕತ್ವದ ಸಹಯೋಗದೊಡನೆ ಹೇಗೆ ಬೆಳೆಸುತ್ತದೆ. ಸರ್ಕಾರದ ಕೃಷಿ, ಕೈಗಾರಿಕೆಯಂತಹ ಆಂತರಿಕ ಮತ್ತು ವಿದೇಶಾಂಗ ನೀತಿಗಳ ಸ್ಪಷ್ಟ ವಿಶ್ಲೇಷಣೆ, ಈ ಸರ್ಕಾರವು ಹೇಗೆ ಜನಸಮೂಹಗಳಿಗೆ ಪ್ರಜಾಪ್ರಭುತ್ವವನ್ನು ವಂಚಿಸಿದೆ ಮತ್ತು ಇಂತಹ ನೀತಿಗಳಿಂದಾಗಿ ದೇಶವನ್ನು ರಾಷ್ಟ್ರೀಯ ಸಮಗ್ರತೆಯ ದೃಢ ಅಡಿಪಾಯದ ಮೇಲೆ ಕಟ್ಟುವ ಬದಲಿಗೆ ಪ್ರತ್ಯೇಕತಾ ಪ್ರವೃತ್ತಿಗಳಿಗೆ ಅನುವು ಮಾಡಿ ಕೊಡಲಾಗಿದೆ. ಕಮ್ಯುನಿಸ್ಟ್ ಪಕ್ಷದ ಧ್ಯೇಯ ಉದ್ದೇಶಗಳು, ಭಾರತದ ಕ್ರಾಂತಿಯ ಘಟ್ಟ ಮತ್ತು ಕ್ರಾಂತಿಯ ವ್ಯೂಹದ ಸ್ಥೂಲ ವಿವರಣೆ, ಅದಕ್ಕಾಗಿ ಒಂದು ಸರಿಯಾದ ಸಮೂಹಿಕ ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಬೇಕಾದ ಅಗತ್ಯವನ್ನು ಕಾರ್ಯಕ್ರಮವು ವಿವರಿಸುತ್ತದೆ.

ಅಂದರೆ ಕಾರ್ಯಕ್ರಮವು ಭಾರತದ ತತ್ವಸಾಸ್ತ್ರ, ಇತಿಹಾಸ, ರಾಜಕೀಯ, ಸಾಮಾಜಿಕ, ಆರ್ಥಿಕ, ವಿಜ್ಞಾನ-ತಂತ್ರಜ್ಞಾನ, ಸಾಂಸ್ಕೃತಿಕ, ಹೀಗೆ, ಎಲ್ಲಾ ವಿಷಯಗಳ ತೀವ್ರವಾದ ಮತ್ತು ಆಳವಾದ ವಿಶ್ಲೇಷಣೆಯ ಫಲವಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮವೆಂದರೆ ಇಡೀ ಭಾರತದ ಸಮಗ್ರ ಪರಿಸ್ಥಿತಿಯ ಆಳ ಅನುಭವದ ಸಾರಸಂಗ್ರಹವಾಗಿದೆ.

– ಕೆ. ಪ್ರಕಾಶ್

ಪಕ್ಷದ ಸದಸ್ಯರು ಮತ್ತು ಸಾರ್ವಜನಿಕರ ಮುಂದೆ ಚರ್ಚೆಗಿಡಲಾಗಿದೆ

ಕಾಂ॥ ಹರಿಕಿಷನ್ ಸಿಂಗ್ ಸುರ್ಜಿತ್‌ರವರ ಸಂಚಾಲಕತ್ವದಲ್ಲಿ ನಿಯೋಜಿಸಲಾಗಿದ್ದ ಆಯೋಗವು ಹಲವು ಬಾರಿ ಸಭೆ ಸೇರಿ ತಯಾರಿಸಿದ ಕರಡು ಶಿಫಾರಸ್ಸುಗಳನ್ನು ಜನವರಿ 14-16 ರವರೆಗೆ ಕಲ್ಕತ್ತದಲ್ಲಿ ಸೇರಿದ್ದ ಪಕ್ಷದ ಪೊಲಿಟ್‌ಬ್ಯೂರೋ ಸಭೆಯಲ್ಲಿ ಮಂಡಿಸಲಾಯಿತು. ಕಾಂ॥ ಜ್ಯೋತಿಬಸುರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯು ಶಿಫಾರಸ್ಸುಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು. ಈ ಶಿಫಾರಸ್ಸುಗಳನ್ನು ಮಾರ್ಚ್‌ನಲ್ಲಿ ನಡೆಯುವ ಕೇಂದ್ರಸಮಿತಿಯಲ್ಲಿ ಇಡಲಾಗುವುದು. ಕೇಂದ್ರ ಸಮಿತಿಯು ಈ ಶಿಫಾರಸ್ಸುಗಳನ್ನು ಚರ್ಚಿಸಿದ ನಂತರ ಅದರ ಪ್ರತಿಯನ್ನು ಪಕ್ಷದ ಸದಸ್ಯರಿಗಾಗಿ ಬಿಡುಗಡೆ ಮಾಡಲಾಗುವುದು. ಪಕ್ಷದ ಸದಸ್ಯರು ಅವುಗಳನ್ನು ಅಭ್ಯಾಸ ಮಾಡಿ ಶಿಫಾರಸ್ಸುಗಳನ್ನು ಮಾಡಬಹುದಾಗಿದೆ. ಈ ಪ್ರಕ್ರಿಯೆ ಸುಮಾರು ಎರಡು ತಿಂಗಳ ಕಾಲ ನಡೆಯಲಿದ್ದು ಪಕ್ಷದ ಸುಮಾರು 7 ಲಕ್ಷ ಸದಸ್ಯರು ಇದರಲ್ಲಿ ಸಂಪೂರ್ಣವಾಗಿ ಭಾಗವಹಿಸಲಿದ್ದಾರೆ. ನೈಜವಾದ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಇದು ಜೀವಂತ ಉದಾಹರಣೆಯಾಗಿದೆ.

ಪಕ್ಷದ ಆಂತರಿಕ ಚರ್ಚೆಗೆ ಅನುಗುಣವಾಗಿ ಕಾರ್ಯಕ್ರಮದ ಬಗ್ಗೆ ಸಲಹೆಗಳನ್ನು ಇತರೆ ಆಸಕ್ತರೂ ಕಳುಹಿಸಬಹುದಾಗಿದೆ. ಅದರಲ್ಲೂ ಮುಖ್ಯವಾಗಿ ದುಡಿಯುವ ವರ್ಗ ಈ ಅವಕಾಶವನ್ನು ಬಳಸಿಕೊಳ್ಳಬೇಕು.

ಈ ಚರ್ಚೆಗಳ ನಂತರ ಅಖಿಲಭಾರತ ಮಟ್ಟದಲ್ಲಿ ಪಕ್ಷದ ಪ್ಲೀನಂ ಕರೆದು ಅಪ್ ಡೇಟ್ ಆದ ಕಾರ್ಯಕ್ರಮವನ್ನು ಅಂತಿಮಗೊಳಿಸಲಾಗುವುದು.

ತ್ರಿಪುರಾದಲ್ಲಿ ಭಯೋತ್ಪಾದಕರ ದಾಂಧಲೆಗಳು

ಕೆ. ಮಹಾಂತೇಶ್

ತ್ರಿಪುರ ಈಶ್ಯಾನ ಭಾರತದ ಪುಟ್ಟ ರಾಜ್ಯ ಬಹುಪಾಲು ಗುಡ್ಡಗಾಡು ಪ್ರದೇಶಗಳಿಂದ ಆವೃತಗೊಂಡಿರುವ ಈ ರಾಜ್ಯವು ಮೊದಲಿನಿಂದಲೂ 18 ಬುಡಕಟ್ಟು ಜನಾಂಗಗಳ ಸಂಸ್ಕೃತಿಯೊಂದಿಗೆ ಬೆಸೆದುಕೊಂಡು ವಿಶಿಷ್ಟ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ಮುಕ್ಕಾಲುಪಾಲು ಬಾಂಗ್ಲಾ ದೇಶದ ಗಡಿಯೊಂದಿಗೆ ಅಂಟಿಕೊಂಡಿದೆ. ಈ ಕಾರಣದಿಂದಲೇ ದೇಶದ ಇತರೆ ರಾಜ್ಯಗಳಿಗೆ ಸುಲಭವಾಗಿ ತಲುಪುವಂತೆ ತ್ರಿಪುರಕ್ಕೆ ತಲುಪಲು ಸಾಧ್ಯವಿಲ್ಲ. ತುಂಬಾ ದೀರ್ಘ ಅವಧಿಯ ಪ್ರಯಾಣ ತ್ರಿಪುರಕ್ಕೆ. ತ್ರಿಪುರಾದ ನೆರೆಹೊರೆಯ ರಾಜ್ಯಗಳಾದ ಮಿಜೋರಾಂ, ಮಣಿಪುರ, ನಾಗಾಲ್ಯಾಂಡ್‌ಗಳಲ್ಲಿ ಗಿರಿಜನಗಳಲ್ಲಿ ದೇಶದ್ರೋಹಿ ವಿಚ್ಛಿದ್ರಕಾರಿ ಚಟುವಟಿಕೆಗಳು ಹೊತ್ತಿಕೊಂಡು ಉರಿಯುತ್ತಿದ್ದರೂ, ಅಸ್ಸಾಂ ಮೇಘಾಲಯಗಳಲ್ಲಿ ಗಿರಿಜನರು ಸ್ಥಳೀಯರು, ಹಾಗೂ ಇತರ ರಾಜ್ಯಗಳಿಂದ ವಲಸೆ ಬಂದವರ ನಡುವೆ ದ್ವೇಷದಿಂದಾಗಿ ಹಲವು ದಶಕಗಳಿಂದ ಅಶಾಂತಿಗೊಳಗಾಗಿದ್ದರೂ ತ್ರಿಪುರಾದಲ್ಲಿ ಗಿರಿಜನ ಮತ್ತು ಗಿರಿಜನೇತರರ ನಡುವಿನ ಬಾಂಧವ್ಯ ಅನ್ಯೋನ್ಯವಾಗಿತ್ತು. ಇಡೀ ಪ್ರದೇಶಕ್ಕೆ ಮಾದರಿಯಾಗಿತ್ತು. ಈ ರಾಜ್ಯವು ಇತ್ತೀಚಿನ ವರ್ಷಗಳಲ್ಲಿ, ಛಿದ್ರಕಾರಿ ಶಕ್ತಿಗಳು, ಹರಿಯಬಿಟ್ಟಿರುವ ಛಿದ್ರಕಾರಿ ಚಟುವಟಿಕೆಗಳಿಂದಾಗಿ ಪ್ರತಿನಿತ್ಯ ಮುಗ್ಧ ಜನರ ಕೊಲೆ ಹಿಂಸಾಕೃತ್ಯಗಳ ಆರಂಭವಾಗಿವೆ. ರಾಜ್ಯದ ನಾಗರೀಕರು, ಪ್ರತಿಕ್ಷಣವನ್ನು ಬೆದರಿಕೆಯಲ್ಲಿ ಕಳೆಯುವಂತಹ ಪರಿಸ್ಥಿತಿಯನ್ನು ಹಲವಾರು ತೀವ್ರಗಾಮಿ, ಸಂಘಟನೆಗಳು ನಿರ್ಮಾಣ ಮಾಡಿದೆ.

ಬುಡಕಟ್ಟುಗಳ ರಾಜ್ಯ

ತ್ರಿಪುರ ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಬುಡಕಟ್ಟು ರಾಜನ ಆಳ್ವಿಕೆಗೆ ಒಳಪಟ್ಟಿತ್ತು. 'ತ್ರಿಪುರೀಸ್' ಇದು 18 ಬುಡಕಟ್ಟುಗಳನ್ನೊಳಗೊಂಡ ಪಂಗಡ. 1901 ಜನಸಂಖ್ಯೆಯ ಪ್ರಕಾರ ಆ ರಾಜ್ಯದಲ್ಲಿ ಶೇ. 56 ರಷ್ಟು ಬುಡಕಟ್ಟು ಜನರು ಮತ್ತು ಶೇ. 44ರಷ್ಟು ಬುಡಕಟ್ಟೇತರರು ವಾಸಿಸುತ್ತಿದ್ದರು. ಇದು 1941 ರಷ್ಟೊತ್ತಿಗೆ ಶೇ. 51 ಮತ್ತು ಶೇ. 49 ರಷ್ಟಾಗಿತ್ತು. ತ್ರಿಪುರವು ಮೊದಲಿನಿಂದಲೂ ಬಂಗಾಳಿ ಅಧಿಪತ್ಯದ ಮತ್ತು ಬಂಗಾಳಿ ಆಡಳಿತ ಭಾಷೆಯಾಗಿದ್ದ ರಾಜ್ಯವಾಗಿತ್ತು. ಮೂಲತಃ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದ ತ್ರಿಪುರ ಜನರು ವ್ಯವಸಾಯಕ್ಕೆ ಅಂದರೆ ಒಂದು ಸ್ಥಳದಲ್ಲಿ ಕಾಡನ್ನು ಕಡಿದು ವ್ಯವಸಾಯ ಮಾಡಿ 3-4 ವರ್ಷಗಳನಂತರ ಮತ್ತೊಂದು ಸ್ಥಳಕ್ಕೆ ಪ್ರಯಾಣಿಸುತ್ತಾ ಅಲೆಮಾರಿ ಬೇಸಾಯ ನಡೆಸುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಈ ರಾಜ್ಯದಲ್ಲಿ ಕೃಷಿ ಅಭಿವೃದ್ಧಿಗಾಗಿ ಮಹಾರಾಜ ಬಂಗಾಲಿಗಳನ್ನು ತ್ರಿಪುರಾಕ್ಕೆ ಆಹ್ವಾನಿಸಿದರು. ಹೀಗೆ ಬಂದ ಬಹುಪಾಲು ಜನರು, ಮುಸ್ಲಿಮರು ಮತ್ತು ಹರಿಜನರು. ಇವರೊಂದಿಗೆ ರಾಜ್ಯದ ಆಡಳಿತದಲ್ಲಿ ಕೆಲಸಕ್ಕಾಗಿ ನೌಕರದಾರರು, ವ್ಯಾಪಾರಸ್ಥರು ಇತರೆ ಜನರು ತ್ರಿಪುರಕ್ಕೆ ಆಗಮಿಸುವಂತಾಯಿತು. ಈ ಕಾರಣದಿಂದಾಗಿ, ಇಲ್ಲಿಯ ಜನತೆಗೆ, ಬಂಗಾಳ ಸಂಸ್ಕೃತಿ, ಭೌಧಿಕತೆಯೊಂದಿಗೆ ಆಚಾರ, ವಿಚಾರಗಳು ಅವಿಭಾಜ್ಯ ಅಂಶಗಳಾದವು. ದೇಶ ವಿಭಜನೆಯ ಸಂದರ್ಭದಲ್ಲಿ, ಬಾಂಗ್ಲಾ ಮುಸ್ಲಿಮರು ದಕ್ಷಿಣ ಪಾಕಿಸ್ತಾನಕ್ಕೆ ಹೊರಟರೆ, ಬಂಗ್ಲಾಪ್ರದೇಶದ ಹಿಂದುಗಳು ತ್ರಿಪುರಕ್ಕೆ ಬಂದರು. ಈ ಬದಲಾವಣೆಯಿಂದಾಗಿ 1971ರಲ್ಲಿ ಬುಡಕಟ್ಟು ಜನಸಂಖ್ಯೆ ಶೇ 29 ರಷ್ಟಾಯಿತು.

1940ರಲ್ಲಿ 'ಗಣಮುಕ್ತಿ ಪರಿಷದ್' (ಜಿಎಂಪಿ) ಕಾಂ। ದಶರಥದೇಬ್ ನೇತೃತ್ಯದಲ್ಲಿ ಪ್ರಾರಂಭವಾಗಿ, ತೀವ್ರರೀತಿಯ ಜನರ ಆಂದೋಲನವನ್ನು ಕಟ್ಟಿ ಬೆಳೆಸಲಾಯಿತು. ಗಿರಿಜನ 1949-59 ಈ ಮೂರು ವರ್ಷಗಳಲ್ಲಿ ಗಣ ಮತ್ತು ಪರಿಷದ್ ಸಂಘಟಿಸಿದ ಬೃಹತ್ ಆಂದೋಲನಗಳ ಪರಿಣಾಮವಾಗಿ 1952ರಲ್ಲಿ ಪ್ರಥಮ ಲೋಕಸಭಾ ಚುನಾವಣೆಯಲ್ಲಿ ತ್ರಿಪುರಾದ ಎರಡೂ ಸ್ಥಾನಗಳಲ್ಲೂ ಕಮ್ಯುನಿಸ್ಟರು ಜಯಸಾಧಿಸಿದರು. ಮಾತ್ರವಲ್ಲ ತ್ರಿಪುರ ಪ್ರಾದೇಶಿಕ ಪರಿಷತ್ ತ್ರಿಪುರ ಕೇಂದ್ರದ ನೇರ ಆಡಳಿತದಲ್ಲಿದ್ದಾಗ ವಿಧಾನಸಭೆಯ ಬದಲು ಇದ್ದ ಸಂಸ್ಥೆ 30 ಸ್ಥಾನಗಳಲ್ಲಿ 19 ಸ್ಥಾನಗಳನ್ನು ಗಳಿಸಲು ಸಾಧ್ಯವಾಯ್ತು.

ಆಗ ತ್ರಿಪುರಾದಲ್ಲಿ ಗಿರಿಜನರು ಮತ್ತು ಗಿರಿಜನರೇತರರ ನಡುವೆ ಎಂತಹ ಮಧುರ ಬಾಂಧವ್ಯವಿತ್ತೆಂದರೆ ಬಾಂಗ್ಲಾದಿಂದ ವಲಸೆಬಂದ ಹಿಂದೂಗಳ ಪುನರ್ವಸತಿಗಾಗಿ ನಡೆಸುವ ಹೋರಾಟದಲ್ಲಿ ಗಿರಿಜನರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರು.

ಆದರೆ 1967ರಲ್ಲಿ ಟಿವಿಜೆಎಸ್. (ತ್ರಿಪುರ ಉಪಜಾತಿ ಸಮಿತಿ) ಬುಡಕಟ್ಟು ಯುವಕರನ್ನೊಳಗೊಂಡ ತೀವ್ರಗಾಮಿ ಚಟುವಟಿಕೆ ಹುಟ್ಟುಹಾಕಿ 'ಬಂಗಾಳಿ ವಿರೋಧಿ ಹೋರಾಟಕ್ಕೆ ಪ್ರಚೋದನೆ ನೀಡಿತು. ಅಸ್ಸಾಂನಲ್ಲಿಯ ಅಲ್ ಅಸ್ಸಾಂ ಸ್ಟೂಡೆಂಟ್ ಯೂನಿಯನ್ ರೀತಿಯಲ್ಲೇ ತ್ರಿಪುರಾದಲ್ಲಿರುವ ಎಲ್ಲಾ ವಿದೇಶಿಯರು ರಾಜ್ಯ ಬಿಟ್ಟು ಹೊರಡಬೇಕೆನ್ನುವ ಘೋಷಣೆಯನ್ನು ಈ ಸಮಿತಿ ಎತ್ತಿತು.

ಜೊತೆಯಲ್ಲೇ 1949 ಆಗಸ್ಟ್-15ರ ನಂತರ ಬಂದ ಎಲ್ಲಾ ಬಂಗಾಳಿಗಳನ್ನು ಓಡಿಸಬೇಕೆಂದು ಕರೆ ನೀಡಲಾಯಿತು. ಇದರೊಂದಿಗೆ, 'ಆನಂದಮಾರ್ಗಿ'ಗಳ ಸಂಘಟನೆಯಾದ "ಅಮ್ರ ಬಂಗಾಳಿ" ಕೂಡ ರಚನೆಯಾಯ್ತು ಹಾಗೂ ಬಂಗಾಳಿಗಳ ನಡುವೆ ಗಿರಿಜನ ದ್ವೇಷವನ್ನು ಬಿತ್ತತೊಡಗಿತು.

1978 ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಎಡರಂಗ ಸರ್ಕಾರವು ಗಿರಿಜನರಿಗೆ ತಮ್ಮ ಆಡಳಿತ ತಾನೇ ಮಾಡಿಕೊಳ್ಳುವ ಅವಕಾಶ ನೀಡುವ ಸ್ವಾಯತ್ತ ಜಿಲ್ಲಾ ಮಂಡಳಿ ರಚನೆ ಮಾಡಿ ಚುನಾವಣೆಗಳನ್ನು ನಡೆಸಬೇಕೆನ್ನುವ ಸಂದರ್ಭದಲ್ಲಿ ಟಿಯುಜೆಎಸ್‌ನ ಭಯೋತ್ಪಾದಕ ಸಂಘಟನೆಯಾದ ತ್ರಿಪುರಾ ನ್ಯಾಷನಲ್ ವಾಲಂಟಿಯರ್ಸ್ (ಟಿ.ಎನ್.ವಿ) ಧರಣಿಗಳನ್ನು ಆರಂಭಿಸಿ 1982ರವರೆಗೂ ಚುನಾವಣೆಗಳು ನಡೆಯಲಾರದಂತಹ ಸ್ಥಿತಿ ನಿರ್ಮಾಣ ಮಾಡಿತು. 12ರ ನಂತರದಲ್ಲಿ ಚುನಾವಣೆಗಳು ನಡೆದವು ಮತ್ತು ಎಡರಂಗಗಳು ಬುಡಕಟ್ಟು ಜನರ ರಕ್ಷಣೆಗಾಗಿ ಕೆಲಸಮಾಡತೊಡಗಿತು. ಮತ್ತು 6ನೇ ಶಡ್ಯೂಲ್‌ನಲ್ಲಿ ಬುಡಕಟ್ಟು ಜನಾಂಗವನ್ನು ಸೇರಿಸುವ ಪ್ರಯತ್ನ ನಡೆಸಲಾಯಿತು. ಎಡರಂಗದ ಇಂತಹ ಎಲ್ಲ ಪ್ರಯತ್ನಗಳನ್ನು ಕಾಂಗ್ರೆಸ್ ಮತ್ತು ಟಿಯುಜೆಎಸ್. ಉದ್ದೇಶಪೂರ್ವಕವಾಗಿ, ಉಗ್ರಗಾಮಿಗಳೊಂದಿಗೆ ಬೆಂಬಲವಾಗಿ ನಿಂತು ವಿಫಲಗೊಳಿಸಲು ಯತ್ನಿಸುತ್ತಿದ್ದವು. 1988ರ ವಿಧಾನಸಭಾ ಚುನಾವಣೆಯಲ್ಲಿ ತೀವ್ರ ರೀತಿಯ ಆಕ್ರಮಣಕಾರಿ, ದಾಳಿಗಳನ್ನು ಹರಿಯಬಿಡುವುದರ ಮೂಲಕ, ಕೊಲೆ, ಬೆದರಿಕೆಗಳನ್ನು ನಡೆಸಿ, ದೊಡ್ಡಪ್ರಮಾಣದಲ್ಲಿ ಚುನಾವಣಾ ಅಕ್ರಮಗಳನ್ನು ನಡೆಸಿ ಕಾಂಗ್ರೆಸ್ - ಟಿಯುಜೆಎಸ್ ಮೈತ್ರಿಕೂಟ ಅಧಿಕಾರಕ್ಕೆ ಬಂತು. ಅನಂತರದಲ್ಲಿ ಸಿಪಿಐ(ಎಂ) ನಾಯಕರ ಮತ್ತು ಕಾರ್ಯಕರ್ತರುಗಳ ಮೇಲೆ ದಾಳಿ ದಬ್ಬಾಳಿಕೆಗಳನ್ನು ನಡೆಸಲಾಯಿತು. ಮನೆಗಳನ್ನು ಸುಟ್ಟು, ಬುಡಕಟ್ಟು ಪ್ರದೇಶಗಳಲ್ಲಿ ಅವರು ಜೀವಿಸಲಾರದಂತಹ ಪರಿಸ್ಥಿತಿ ನಿರ್ಮಾಣ ಮಾಡಲಾಯಿತು. ರಾಜ್ಯದ ಜನರು ತೀವ್ರ ಭಯ ಆತಂಕಗಳಿಂದ ಬದುಕಬೇಕಾಯಿತು.

1998ರ ನಂತರ ಪರಿಸ್ಥಿತಿ ಮತ್ತಷ್ಟು ಬದಲಾಯಿತು. ಟಿ.ಎನ್.ಯು ಈ ಉಗ್ರಗಾಮಿ ಸಂಘಟನೆ ತೀವ್ರಗಾಮಿ ಚಟುವಟಿಕೆಗಳನ್ನು ನಡೆಸುತ್ತಿತ್ತಾದರೂ ಕಿಡ್ನಾಪ್ ಸಂಸ್ಕೃತಿಯನ್ನು ಹೊಂದಿರಲಿಲ್ಲ. ಇದು ವಿದೇಶಿ ಉಗ್ರರೊಂದಿಗೆ ಸ್ನೇಹ ಬೆಳೆಸಿದ್ದು ಮಾತ್ರವಲ್ಲ ಐಎಸ್‌ಐ ಮತ್ತು ಇತರೆ ವಿದೇಶಿ ಛಿದ್ರಕಾರಿ ಶಕ್ತಿಗಳೊಂದಿಗೆ ತ್ರಿಪುರ ಸದಸ್ಯರನ್ನು ಅಂತರ ರಾಷ್ಟ್ರೀಯಗೊಳಿಸಿ, ಮಾನವ ಹಕ್ಕುಗಳ ಕಮಿಷನ್-ಹತ್ತಿರ ಕೊಂಡೊಯ್ಯಿತು.

ಎಟಿಟಿಎಫ್ ಕೃತ್ಯಗಳು ಪ್ರತಿನಿತ್ಯ ಅಪಹರಣ, ಕೊಲೆ ಮಾಡುವುದು ಹಣಕ್ಕಾಗಿ ಬೆದರಿಕೆ, ...

ನಡೆಯುತ್ತಿವೆ. ಈಗ ಅಖಿಲ ತ್ರಿಪುರಾ ಟೈಗ... ಫೋರ್ಸ್ (ಎಟಿಟಿಎಫ್.) ಎಂಬ ಮತ್ತೊಂದು... ಮತ್ತಷ್ಟು ಭಯೋತ್ಪಾದಕ ಸಂಘಟನೆ ಹುಟ್ಟಿದೆ.

1996ರಲ್ಲಿ ಸಂಯುಕ್ತರಂಗ ಸರ್ಕಾರವು... ಛಿದ್ರಕಾರಿ ಚಟುವಟಿಕೆಯನ್ನು ಹತ್ತಿಕ್ಕಲು... ಬಾಂಗ್ಲಾದೇಶದ ಸಹಕಾರದೊಂದಿಗೆ... ಕಾರ್ಯಯೋಜನೆಯನ್ನು ರೂಪಿಸಿತು. ಮತ್ತು... ತೀವ್ರಗಾಮಿ ಚಟುವಟಿಕೆಗಳನ್ನು ಹತ್ತಿಕ್ಕಲು 3... ಉಗ್ರಗಾಮಿಗಳ ವಿರುದ್ಧ ಹೋರಾಟದ ತರಬೇತಿ... ಪಡೆದ ಮಿಲಿಟರಿ ತುಕಡಿಗಳನ್ನು ರಾಜ್ಯಕ್ಕೆ... ಕಳುಹಿಸಿತು. ಆದರೆ ಬಿಜೆಪಿ ನೇತೃತ್ವದ ಕೇಂದ್ರ... ಸರ್ಕಾರ ಅಧಿಕಾರಕ್ಕೆ ಬರುತ್ತಲೇ ಸಂ.ರಂ. ಸರ್ಕಾರ... ಕಳುಸಿದ್ದ - 3 ಬೆಟಾಲಿಯನ್‌ಗಳನ್ನೂ ವಾಪಸ್... ಕರೆಸಿಕೊಂಡರು. ಬದಲಾಗಿ, ಸಿ.ಆರ್.ಪಿ.ಎಫ್... ತುಕಡಿಗಳನ್ನು ತ್ರಿಪುರಾಕ್ಕೆ ಕಳುಹಿಸುತ್ತೇನೆಂದು... ಹೇಳುತ್ತಿದೆ. ಇದರಿಂದ ತ್ರಿಪುರಾದಲ್ಲಿನ ಛಿದ್ರಕಾರಿ... ಚಟುವಟಿಕೆಗಳನ್ನು ನಿಗ್ರಹಿಸಲು ಸಾಧ್ಯವಿಲ್ಲ... ಯಾಕೆಂದರೆ ಸಿಆರ್‌ಪಿಎಫ್‌ನ ಪೋಲೀಸ್‌ಪಡೆ... ಶಸ್ತ್ರ ಸಜ್ಜಿತ ಉಗ್ರರೊಂದಿಗೆ ಸೆಣಸಲು ಸಾಧ್ಯವಿಲ್ಲ... ಪರಿಣಾಮವಾಗಿ, ರಾಜ್ಯದಲ್ಲಿ ಉಗ್ರಗಾಮಿ... ಚಟುವಟಿಕೆಗಳಿಗೆ ಮತ್ತಷ್ಟು ಕುಮ್ಮಕ್ಕು ಸಿಕ್ಕಂತಾಗಿದೆ... ಆದರೂ ರಾಜ್ಯದ ಎಡರಂಗ ಸರ್ಕಾರ ರಾಜ್ಯದ... ಶಾಂತಿ ಪ್ರಿಯ ಜನತೆಯ ಬೆಂಬಲದೊಂದಿಗೆ, ತನ್ನ... ಮಿತಿಯೊಳಗೆ, ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು... ಅನುಸರಿಸುತ್ತಿದೆ. ಈಶಾನ್ಯ ರಾಜ್ಯಗಳಲ್ಲಿಯೇ... ವಿಶಿಷ್ಟ ಸ್ಥಾನ ಹೊಂದಿರುವ ಇಲ್ಲಿ... ಗಿರಿಜನ-ಗಿರಿಜನೇತರರ ನಿರಂತರ ಮೈತ್ರಿ... ಉಳಿಸಿಕೊಳ್ಳಲು ನಿರಂತರ ಪ್ರಯತ್ನ ನಡೆದಿದೆ.

ಮತ ಚಲಾಯಿಸಿದರೆ - ಬೆರಳ... ತುಂಡರಿಸಿದರು!

ಇತ್ತೀಚಿಗೆ ನಡೆದ ಚುನಾವಣಾ ಸಂದರ್ಭದಲ್ಲಿ... ಉಗ್ರಗಾಮಿ ಸಂಘಟನೆಗಳು ಚುನಾವಣಾ... ಬಹಿಷ್ಕಾರಕ್ಕೆ ಕರೆ ನೀಡಿದ್ದವು. ಅದರ ಬೆದರಿಕೆ... ಯಾವ ರೀತಿಯದ್ದು ಎಂದರೆ ಯಾರಾದರೂ... ಮನೆಗಳಿಂದ ಹೊರಬಂದು ಮತ ಚಲಾಯಿಸಿದರೆ... ಅವರ ಬೆರಳುಗಳನ್ನು, ಕೈಗಳನ್ನು ತುಂಡರಿಸುವ... ಬೆದರಿಕೆ ಹಾಕಿದ್ದರು.ಇದೇ ಸಂದರ್ಭದಲ್ಲಿ... ಸಿಪಿಐ(ಎಂ)ನ ಎರಡುಬುಡಕಟ್ಟು ಮುಖಂಡರನ್ನು... ಮತದಾನ ಮಾಡಿದರೆಂಬ ಒಂದೇ ಕಾರಣಕ್ಕಾಗಿ... ಕೊಲೆಗಯ್ಯಲಾಯಿತು. ಅದರೂ ಶೇ 75 ರಷ್ಟು... ಜನರು ಮತವನ್ನು ಚಲಾಯಿಸಿದರು. ಕೆಲವ... ಕೆಲವು ಮತ ಕ್ಷೇತ್ರಗಳಲ್ಲಿ ಮಾತ್ರ ಶೇ 60 ರಿಂದ 6... ಮತ ಚಲಾವಣೆಯಾಗಿದೆ(ಇದು ಕೂಡ ದೇಶದ... ಕರ್ನಾಟಕದ ಮತದಾನದ ಪ್ರಮಾಣಕ್ಕಿಂತ... ಹೆಚ್ಚಿನದು)

ಛಿದ್ರಕಾರಿಗಳೊಂದಿಗೆ ಕೈಜೋಡಿಸುವ... ವಿರೋಧಪಕ್ಷಗಳು

ತ್ರಿಪುರದಲ್ಲಿ ತೀವ್ರವಾದಿಗಳು ಪ್ರತಿಬಾರಿಯು... ಜನರ ಮೇಲೆ ಧಾಳಿಗಳನ್ನು ನಡೆಸಿದಾಗಲೂ... ಕೊಲೆ, ಸುಲಿಗೆ, ಅಪಹರಣಗಳು... ಅವ್ಯಾಹತವಾಗಿ ನಡೆಯುತ್ತಿದ್ದಾಗಲೂ,ಕಾಂಗ್ರೆಸ್... ಮತ್ತು ಟಿಯುಜೆಎಸ್ ಕೂಗು ಮಾತ್ರ ಒಂದೇ... ತ್ರಿಪುರಾವನ್ನು ಭಯಗ್ರಸ್ತ ರಾಜ್ಯವೆಂದು ಘೋಷಿಸಿ... ರಾಷ್ಟ್ರಪತಿ ಆಳ್ವಿಕೆ ಜಾರಿ ಮಾಡಬೇಕೆನ್ನುವುದು... ಮತ್ತು ನಗರ ಪ್ರದೇಶಗಳ... ಉದ್ದೇಶಪೂರ್ವಕವಾಗಿ ಜನರನ್ನು ಸೇರಿ... ಸರ್ಕಾರದ ವಿರುದ್ಧ ಪ್ರತಿಭಟನೆಗಳನ್ನು ನಡೆ... ಕಾನೂನು ವ್ಯವಸ್ಥೆಯನ್ನು ಕದಡುವುದು. ಅವ... ದಿನನಿತ್ಯದ ಕೆಲಸವಾಗಿದೆ. ತೀವ್ರಗಾಮಿಗಳ... ನಿಗ್ರಹಣೆಗಾಗಿ ನಿಯೋಜಿಸಲಾಗಿರುವ ರಕ್ಷಣಾ... ಸಿಬ್ಬಂದಿಯನ್ನು ಇವರ ಪ್ರತಿಭಟನೆಯಿಂದಾ... ತಲೆದೋರುವ ಪರಿಸ್ಥಿತಿ ನಿಯಂತ್ರಣ... ಬಳಸಬೇಕಾಗಿರುವುದರಿಂದ ಗುಡ್ಡಗಾಡು... ಪ್ರದೇಶಗಳಲ್ಲಿ ಉಗ್ರಗಾಮಿ ಚಟುವಟಿಕೆಗಳ... ಕುಮ್ಮಕ್ಕು ಸಿಕ್ಕಂತಾಗುತ್ತಿದೆ. ಬುಡಕಟ್ಟು ಜನ... ಮತ್ತು ಬಂಗಾಳಿಗಳು ಮಿಶ್ರರಾಗಿರುವ ಸ್ಥಳಗಳ... ಹಲ್ಲೆಗಳನ್ನು ನಡೆಸಿ, ಬಂಗಾಳಿಗಳು ಹೊ... ಹೋಗುವಂತೆ ಬೆದರಿಕೆಗಳೂ ಹಾಕಲಾಗುತ್ತಿದೆ.

ಕಾಂಗ್ರೆಸ್ ಈಗ ಇಬ್ಭಾಗಗೊಂಡ... ಬಹುಪಾಲು ತೃಣಮೂಲ ಕಾಂಗ್ರೆಸ್‌ನೊಂದ...



ತ್ರಿಪುರ ಮುಖ್ಯಮಂತ್ರಿ ಮಾಣಿಕ ಸರ್ಕಾರ್ ರಾಜ್ಯದ ಸ್ಥಿತಿಗತಿಗಳ ಬಗ್ಗೆ ವಿರೋಧ ಪಕ್ಷಗಳ ಮುಖಂಡರೊಂದಿಗೆ ಚರ್ಚಿಸುತ್ತಿರುವುದು.

ಕ್ಯೂಬನ್ ಹುಡುಗನನ್ನು ಕಾನೂನುಬಾಹಿರವಾಗಿ ಹಿಡಿದಿಟ್ಟಿರುವ ಅಮೆರಿಕ



ನವೆಂಬರ್ 22 ರಂದು ಕ್ಯೂಬಾದ ಕರಾವಳಿ ಗಾರ್ಡ್ ದೋಣಿಯೊಂದು ಅಮೆರಿಕದ ಫ್ಲೋರಿಡಾದತ್ತ ಹೋಗುವುದನ್ನು ತಡೆದರು. ಕ್ಯೂಬಾದ ರಾಜಧಾನಿ ಹವಾನಾದಿಂದ ಅಮೆರಿಕದ ಫ್ಲೋರಿಡಾ ಪ್ರಾಂತ್ಯದ ಮಿಯಾಮಿಗೆ ಕೇವಲ 60 ಮೈಲು. ದೋಣಿಯಲ್ಲಿ ಹೋಗಬಹುದಾದರೂ ಅತ್ಯಂತ ಅಪಾಯಕಾರಿ ಪ್ರಯಾಣವಿದು. ಅದರಲ್ಲಿನ ಪ್ರಯಾಣಿಕರು ಕಾನೂನುಬಾಹಿರವಾಗಿ ಕ್ಯೂಬಾದಿಂದ ಅಮೆರಿಕಕ್ಕೆ ಹೊರಟಿದ್ದವರು ಈ ಅಪಾಯಕಾರಿ ಪ್ರಯಾಣವನ್ನು ಬಿಟ್ಟುಕೊಡಿ ಎಂದು ಅವರನ್ನು ಒಪ್ಪಿಸುವುದು ಸಾಧ್ಯವಾಗಲಿಲ್ಲವಾದ್ದರಿಂದ, ಅಮೆರಿಕದ ಕರಾವಳಿ ಗಾರ್ಡ್‌ಗೆ ರೇಡಿಯೋ ಸಂದೇಶ ತಲುಪಿತು. ಇಂತಹ ದೋಣಿಯೊಂದು ಬರುತ್ತಿದೆ ಅಂತ.

ನವೆಂಬರ್ 25 ರಂದು ಸುದ್ದಿ ಬಂತು. ಅಮೆರಿಕದ ಕರಾವಳಿ ಗಾರ್ಡ್ ದೋಣಿ ಅಫಘಾನಿಸ್ತಾನದಲ್ಲಿ ಮೂವರನ್ನು ರಕ್ಷಿಸಿತು. ಉಳಿದವರು (ಸುಮಾರು 11 ಜನ) ಮುಳುಗಿ ಸತ್ತಿದ್ದರು ಉಳಿದ ಮೂವರಲ್ಲಿ ಐದು ವರ್ಷದ ಬಾಲಕ ಇಲ್ಲಾನ್ ಗೋಗ್‌ರ್ಝಾಲೆಝ್ ಒಬ್ಬ. ಆತನನ್ನು ಕರೆದುಕೊಂಡು ಹೊರಟಿದ್ದ ಆತನ ತಾಯಿ ಸತ್ತವರಲ್ಲಿ ಒಬ್ಬಳಾಗಿದ್ದಳು. ಈ ಬಾಲಕನ ತಂದೆ ಕ್ಯೂಬಾದಲ್ಲೇ ಇದ್ದಾನೆ. ಆತನ ಅಜ್ಜಿ, ಅಜ್ಜ ಸಹ ಕ್ಯೂಬಾದಲ್ಲೇ ಇದ್ದಾರೆ. ಅಮೆರಿಕದಲ್ಲಿ ದೂರದ ಸಂಬಂಧಿ ಹೇಳಿಕೊಳ್ಳುವವರು ಮಾತ್ರ ಇದ್ದಾರೆ. ಈ ಸಂದರ್ಭದಲ್ಲಿ ಬಾಲಕನನ್ನು ತಂದೆಗೆ ಒಪ್ಪಿಸಲು ಬಾಲಕನನ್ನು ಕ್ಯೂಬಾಕ್ಕೆ ವಾಪಸು ಕಳಿಸಬೇಕೆಂಬುದು ಸ್ವಾಭಾವಿಕ. ಅಂತರ್ರಾಷ್ಟ್ರೀಯ ಮತ್ತು ಹೆಚ್ಚಿನ ದೇಶದಕಾನೂನಿನ ಪ್ರಕಾರ ಸಹ ಸರಿಯಾದ ಕ್ರಮ. ಆದರೆ ಅಮೆರಿಕದಲ್ಲಿರುವ ಬಲಪಂಥೀಯ ಅಮೆರಿಕನ್ ಕ್ಯೂಬನ್ನರ ದಾಂಧಲೆ, ಅಮೆರಿಕನ್ ಸರ್ಕಾರ ಅದರ ಜತೆ ಶಾಮೀಲಾಗಿ ಆ ಹುಡುಗ ತಂದೆಗೆ ವಾಪಸಾಗುವುದನ್ನು ತಡೆಯಲು ಕನಿಷ್ಠ ವಿಳಂಬ ಮಾಡಲು ನೋಡುತ್ತಿದ್ದಾರೆ.

ಕಾನೂನು ಬಾಹಿರ ವಲಸೆಗೆ ಕುಮ್ಮಕ್ಕು

ಅಮೆರಿಕ ಬೇರೆ ಯಾವುದೇ ದೇಶದ ನಾಗರೀಕರು ಅಮೆರಿಕವನ್ನು ಕಾನೂನು ಬಾಹಿರವಾಗಿ ಪ್ರವೇಶಿಸಲು ಪ್ರಯತ್ನಿಸಿದರೆ, ಅವರನ್ನು ಹಿಡಿದು ಆದೇಶಕ್ಕೆ ವಾಪಸು ಕಳಿಸುತ್ತದೆ. ಇದು ಯಾವುದೇ ನಾಗರೀಕ ದೇಶದ ಕಾನೂನು ಪ್ರಕಾರ ಸರಿಯಾದ ಕ್ರಮ. ಎರಡು ನಾಗರೀಕ ದೇಶಗಳ ನಡುವೆ ವಿಸಾ ಇಲ್ಲದೆ ಯಾರೂ ಪ್ರಯಾಣಿಸುವಂತಿಲ್ಲ. ಅಮೆರಿಕ ಕ್ಯೂಬಾಗಳ ನಡುವೆ ಸಹ ಇಂತಹ ವೀಸಾದ ಬಗ್ಗೆ ಒಪ್ಪಂದ ಇದೆ. ಆದರೆ ಇಂತಹ ದ್ವಿಪಕ್ಷೀಯ ಒಪ್ಪಂದ ಮತ್ತು ಅಂತರ್ರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿ, ಕ್ಯೂಬನ್ನರು ಯಾರಾದರೂ ಅಮೆರಿಕನ್ ವೀಸಾ ಇಲ್ಲದೆ ಕಾನೂನುಬಾಹಿರವಾಗಿ ಪ್ರವೇಶಿಸಿದರೆ ಅಮೆರಿಕದ ವಲಸೆ ಇಲಾಖೆ ಅಧಿಕಾರಿಗಳು ತತ್‌ಕ್ಷಣ ಅವರಿಗೆ ಅಮೆರಿಕದಲ್ಲಿ ಉಳಿಯಲು ಅನುಮತಿ ಕೊಡುತ್ತಾರೆ. ಇದು ರಾಜಕೀಯ ದುರುದ್ದೇಶಪೂರಿತ ಕ್ರಮ. 'ಶೀತಸಮರ'ದಲ್ಲಿ ಕಮ್ಯುನಿಸ್ಟ್ ಸರ್ಕಾರಗಳ ಅಡಿಯಲ್ಲಿ ಜನ 'ದಬ್ಬಾಳಿಕೆ' ತಾಳಲಾರದೆ ಓಡಿಬರುತ್ತಾರೆ ಎಂದು ಬಿಂಬಿಸಿ, ಸಮಾಜವಾದದ ವಿರುದ್ಧ ಅಪಪ್ರಚಾರದಲ್ಲಿ ಒಂದು ಅಸ್ತ್ರ. ಇದಕ್ಕಾಗಿ ಈಗಾಗಲೇ ವಲಸೆ ಬಂದ ಕ್ಯೂಬನ್ ಅಮೆರಿಕನ್ನರ ಬಲಪಂಥೀಯ ಸಂಘಟನೆಯನ್ನು ಬಳಸಲಾಗುತ್ತದೆ. ಅದಕ್ಕೆ ಅಮೆರಿಕಾದ ಗೂಢಾಚಾರ್ಯ ಸಂಸ್ಥೆಗಳು, ಹಲವೊಮ್ಮೆ ಇತರ ಸರ್ಕಾರಿ ಸಂಸ್ಥೆಗಳು ಬಹಿರಂಗವಾಗೇ ಸಹಾಯ ಮಾಡುತ್ತವೆ. ಈ ಸಂಸ್ಥೆಗಳು ಕ್ಯೂಬನ್ನರನ್ನು ಅಮೆರಿಕಕ್ಕೆ ಕಾನೂನು ಬಾಹಿರವಾಗಿ ಕಳ್ಳಸಾಗಾಣಿಕೆ(ತಲಾ 8 ರಿಂದ 10 ಸಾವಿರ ಡಾಲರು ವಸೂಲಿ ಮಾಡಿ) ಮಾಡಿ ಅವರಿಗೆ ಅಮೆರಿಕನ್ ಪೌರತ್ವ ಕೊಡಿಸುವ ದಂಧೆಯನ್ನು ನಡೆಸುತ್ತಿದ್ದಾರೆ. ಇದನ್ನು ಸಮರ್ಥಿಸಿಕೊಳ್ಳಲು 'ಕ್ಯೂಬನ್ ಅಡ್‌ಜಸ್ಟ್‌ಮೆಂಟ್' ಕಾನೂನು ರಚಿಸಲಾಗಿದೆ. ಆದರೆ ಈ ಕಾನೂನು ಕ್ಯೂಬಾ-ಅಮೆರಿಕನ್ ವೀಸಾ ಒಪ್ಪಂದ, ಅಮೆರಿಕದ ವಲಸೆಕಾನೂನು ಮತ್ತು ಹಲವು ಅಂತರ್ರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸುವಂತದು.

ಅಮೆರಿಕದ ಅಟಾರ್ನಿ ಜನರಲ್ ನಿರ್ಧಾರ ಉಲ್ಲಂಘನೆ

ಈ ಬಾಲಕನನ್ನು ಕ್ಯೂಬಾಕ್ಕೆ ವಾಪಸು ಕಳಿಸುವಂತೆ ಕ್ಯೂಬಾದ ಸರ್ಕಾರ ಮತ್ತು ಬಾಲಕನ ತಂದೆ ಅಮೆರಿಕದ ಸರ್ಕಾರಕ್ಕೆ ಅರ್ಜಿ ಕೊಟ್ಟಿದೆ. ಈ ಅರ್ಜಿಯ ಮೇಲೆ ಅಮೆರಿಕದ ವಲಸೆ ಇಲಾಖೆ ಬಾಲಕನನ್ನು ಕ್ಯೂಬಾಕ್ಕೆ ಆತನ ತಂದೆಯ ಬಳಿ ವಾಪಸು ಕಳಿಸಬೇಕೆಂದು ತೀರ್ಮಾನಿಸಿದ್ದರು, ಅದರ ಜಾರಿಯನ್ನು ರಾಜಕೀಯಕರಣಗೊಳಿಸಿ, ತಡೆ ಹಿಡಿಯಲಾಗಿದೆ.ಮಿಯಾಮಿಯ ಕ್ಯೂಬನ್ ಅಮೆರಿಕನ್ನರ ಸಂಘಟನೆಯೊಂದು ಬಾಲಕನ ದೂರದ ಸಂಬಂಧಿಯೊಬ್ಬನ ಹೆಸರಲ್ಲಿ ಸ್ಥಳೀಯ ಕೋರ್ಟ್‌ಗೆ ಹೋಗಿ, ಮೂರು ತಿಂಗಳು ಕ್ಯೂಬಾಕ್ಕೆ ಬಾಲಕನನ್ನು ವಾಪಸು ಕಳಿಸುವುದನ್ನು ತಡೆಹಿಡಿಯಬೇಕೆಂದು ಆಜ್ಞೆ ಮಾಡಿದೆ. ಆದರೆ ವಲಸೆ ಸಂಬಂಧಿ ವಿಷಯಗಳಲ್ಲಿ ಸ್ಥಳೀಯ, ಪ್ರಾಂತೀಯ ಕೋರ್ಟುಗಳಿಗೆ ಮಧ್ಯ ಪ್ರವೇಶಿಸುವ ಹಕ್ಕು ಇಲ್ಲ. ಫೆಡರಲ್ ಕೋರ್ಟು ಮಾತ್ರ ಈ ವಿಷಯದಲ್ಲಿ ತೀರ್ಮಾನಿಸುವ ಹಕ್ಕು ಇದೆ ಎಂದು ಅಮೆರಿಕದ ಅಟಾರ್ನಿ ಜನರಲ್ ವಲಸೆ ಇಲಾಖೆಯ ತೀರ್ಮಾನವನ್ನು ಎತ್ತಿ ಹಿಡಿದಿದ್ದಾರೆ.

ಈ ತೀರ್ಪನ್ನು ಜಾರಿ ಮಾಡಲು ಬಾಲಕನನ್ನು ಕಾನೂನುಬಾಹಿರವಾಗಿ ಹಿಡಿದಿಟ್ಟಿರುವ ಕ್ಯೂಬನ್ ಅಮೆರಿಕನ್ ಸಂಘಟನೆ, ಆತನ ದೂರದ ಸಂಬಂಧಿ ಎಂದು ಹೇಳಿಕೊಳ್ಳುವವರ ಮೇಲೆ ಕ್ರಮ ಕೈಗೊಳ್ಳಲು ಜನವರಿ 14 ಗಡುವು ಸಹ ಹಿಂದೆ ಕೊಟ್ಟಿತ್ತು. ಆದರೆ ಈಗ ಅದನ್ನು ಮುಂದಕ್ಕೆ ಹಾಕುವುದಾಗಿ ಹೇಳಿದೆ. ಆದರೆ ಹೊಸ ಗಡುವು ಹೇಳಿಲ್ಲ. ಬಾಲಕನ ದೂರದ ಸಂಬಂಧಿಗಳು ಬೇಕಾದರೆ ಸುಪ್ರೀಂಕೋರ್ಟ್‌ಗೆ ಹೋಗಲು ಇದು ಕಾಲಾವಕಾಶ ಎಂದಿದೆ. ಒಟ್ಟಾರೆಯಾಗಿ ಅಮೆರಿಕನ್ ಸರ್ಕಾರ ಸಹ ಬಾಲಕನನ್ನು ಕಾನೂನು ಬಾಹಿರವಾಗಿ ಅಮೆರಿಕದಲ್ಲಿ ಹಿಡಿದಿಡುವಲ್ಲಿ ಶಾಮೀಲಾಗಿದೆ.

ಈ ನಡುವೆ ಅಮೆರಿಕದ ಮಿಯಾಮಿ ಮತ್ತು ಕ್ಯೂಬಾದ ಹವಾನಾದಲ್ಲಿ ಬಾಲಕನನ್ನು ಆತನ ತಂದೆಗೆ ವಾಪಸು ಮಾಡುವುದರ ಪರ-ವಿರುದ್ಧ ಪ್ರದರ್ಶನಗಳು ನಡೆದಿವೆ. ಅಮೆರಿಕದ ಟಿ.ವಿ., ರೇಡಿಯೋ, ಪತ್ರಿಕೆಗಳು ಈ ವಿವಾದಬಳಸಿ ಕ್ಯೂಬಾದ ಸಮಾಜವಾದಿ ವ್ಯವಸ್ಥೆ, ಅಲ್ಲಿನ ಸಾಮಾಜಿಕ-ರಾಜಕೀಯ ಪರಿಸ್ಥಿತಿ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಪರೋಕ್ಷವಾಗಿ ಬಾಲಕನ ದೂರದ ಸಂಬಂಧಿ, ಕ್ಯೂಬನ್ ಅಮೆರಿಕನ್ನರ, ಅಮೆರಿಕನ್ ಸರಕಾರದ ಕಾನೂನುಬಾಹಿರ ಕ್ರಮಗಳನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಹಲವು ನೆಪಗಳ ಮೂಲಕ ಬಾಲಕನ ವಾಪಸಾತಿಯನ್ನು ವಿಳಂಬ ಮಾಡಲಾಗುತ್ತಿದೆ.

- ಶರತ್ ಚಂದ್ರ

............ಭಯೋತ್ಪಾದಕರ ದಾಂಧಲೆಗಳು

ವರ್ಷದ ಮಧ್ಯ ಭಾಗದಲ್ಲಿ ತ್ರಿಪುರಾದಲ್ಲಿ ನಡೆಯಲಿರುವ ಪ್ರಾದೇಶಿಕ ಜಿಲ್ಲಾ ಮಂಡಳಿ (ಎಡಿಸಿ)ಗಳ ಚುನಾವಣೆಗಳನ್ನು ಗೊಂದಲಗೊಳಿಸಿ ರಾಜ್ಯ ಕಾನೂನು ಸುವ್ಯವಸ್ಥೆ ಮತ್ತು ಶಾಂತಿ ಕದಡುವ ಪ್ರಯತ್ನಗಳನ್ನು ನಡೆಸಿವೆ.

ರಾಜ್ಯದಲ್ಲಿ ಮುಂಬರುವ ಎ.ಡಿ.ಸಿ. ಚುನಾವಣೆಗಳನ್ನು ಸಿಪಿಐ(ಎಂ) ಮತ್ತು ಎಡರಂಗ ಸರ್ಕಾರ ಮತ್ತು ಸಾಮೂಹಿಕ ಸಂಘಟನೆಗಳು ಬಹುದೊಡ್ಡ ಸವಾಲಾಗಿ ಸ್ವೀಕರಿಸಿದೆ. ಸರ್ಕಾರವು ತೀವ್ರವಾದಿ ಚಟುವಟಿಕೆಗಳನ್ನು ಹತ್ತಿಕ್ಕಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದೆ.

ಪಕ್ಷವು ಜನರ ಮಧ್ಯದಲ್ಲಿ ಐಕ್ಯತೆ ತರಲು, ಮತ್ತು ಶಾಂತಿ ನೆಲೆಸಲು ಪ್ರದರ್ಶನಗಳನ್ನು ಶಾಂತಿ ಮೆರವಣಿಗೆಗಳನ್ನು, ಮನವರಿಕೆಯ ಸಭೆಗಳನ್ನು ಬುಡಕಟ್ಟು ಜನರ ರಕ್ಷಣೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಜೊತೆಗೆ ಬಂಗಾಳಿ ಮತ್ತು ಬುಡಕಟ್ಟು ಜನರ ನಡುವೆ ಸೌಹಾರ್ದತಾ ವಾತಾವರಣ ನಿರ್ಮಿಸಲು ಶ್ರಮಿಸುತ್ತಿದೆ.

ಗಿರಿಜನ ವಿದ್ಯಾರ್ಥಿ ಪರಿಷತ್, ಎಸ್‌ಎಫ್‌ಐ, ಡಿವೈಎಫ್‌ಐ, ರೈತ ಸಂಘಟನೆಗಳು ರಾಜ್ಯಾದ್ಯಂತ ಜಂಟಿ ಪ್ರಚಾರಾಂದೋಲನಗಳನ್ನು ನಡೆಸಿವೆ. ಕೂಲಿಕಾರ ಸಂಘ, ಗಿರಿಜನ ಸಂಘಟನೆಗಳ ಕಾರ್ಯಕರ್ತರು ಪ್ರಾಣ ಪಣಕ್ಕೊಡ್ಡಿ ಛಿದ್ರಕಾರಿ ಶಕ್ತಿಗಳನ್ನು ಎದುರಿಸುತ್ತಿವೆ. ಸರ್ಕಾರ ಶಾಂತಿ ನೆಲೆಸುವ ಕೆಲಸದಲ್ಲಿ ಜನರನ್ನು ಅಣಿ ನೆರೆಸುತ್ತಿದೆ. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ರ‍್ಯಾಲಿಗಳಲ್ಲಿ ಭಾಗವಹಿಸುತ್ತಿದ್ದಾರೆ.

ಲೋಕಸಭಾ ಚುನಾವಣಾ ನಂತರದ ಹಿಂಸಾಚಾರ-ಕೊಲೆಗಳು - ಅಪಹರಣ ಕೃತ್ಯಗಳು

... ಎಂಬ ಹಳ್ಳಿಯಲ್ಲಿ ಸಂತೆಯ ದಿನ ಜನರು ಗಿಜಿ ಗಿಜಿ ಎನ್ನುತ್ತಿರುವಾಗ ಧಾಳಿ ಮಾಡಿ 16 ಜನರನ್ನು ಕೊಲೆಗೈದರು. 5 ಜನರನ್ನು ಅಪಹರಿಸಿದರು. ಇದೂವರೆಗೂ ಅವರು ವಾಪಸ್ಸಾಗಿಲ್ಲ. ಹಲವರಿಗೆ ಗಂಭೀರ ಗಾಯಗಳಾಗಿವೆ. ಈ ಧಾಳಿಯಲ್ಲಿ ಬುಡಕಟ್ಟು ಮತ್ತು ಬುಡಕಟ್ಟೇತರ ಜನರೂ ತುತ್ತಾಗಿದ್ದಾರೆ.

ಅಕ್ಟೋಬರ್ 22 ಪೋಲೀಸರ ಸಂಚಾರಿ ಪಡೆಗಳ ವಾಹನದ ಮೇಲೆ ಧಾಳಿ ನಡೆಸಿ 8 ಪೋಲೀಸರನ್ನು ಕೊಲೆಗೈದರು. ಮಾರನೇ ದಿನ ಎರಡು ಜನ ಫಾರೆಸ್ಟ್ ಗಾರ್ಡ್‌ಗಳ ಕೊಲೆ.

ಡಿಸೆಂಬರ್ ಶ್ರೀಪುರ ಬಜಾರ್ ಮಾರ್ಕೆಟ್‌ನಲ್ಲಿ ಧಾಳಿ ನಡೆಸಿ 6 ಜನರನ್ನು ಕೊಲೆಗೈದರು.

ಪ್ರತಿನಿತ್ಯ ಅಪಹರಣ ಕೃತ್ಯಗಳು ನಡೆಯುತ್ತಲೇ ಇರುತ್ತವೆ. ಚುನಾವಣೆ ನಂತರದಲ್ಲಿ ಉಗ್ರವಾದಿಗಳ ತೀವ್ರರೀತಿಯ ಹಲ್ಲೆ, ಧಾಳಿಗಳನ್ನು ವಿಶೇಷವಾಗಿ ಬುಡಕಟ್ಟು ಜನರು ಮತ್ತು ಬಂಗಾಳಿಗಳು ಮಿಶ್ರವಾಗಿರುವ ಪ್ರದೇಶಗಳಲ್ಲಿ ನಡೆಸುತ್ತಿದ್ದಾರೆ.

ಡಿಸೆಂಬರ್ 31 ಎನ್‌ಎಲ್ ಎಫ್‌ಐ ಸಂಘಟನೆಯ 15-16 ಉಗ್ರವಾದಿಗಳು ಹಲವಾರು ಹಳ್ಳಿಗಳಲ್ಲಿ ಜನರಿಗೆ ಭಯವನ್ನುಂಟು ಮಾಡುತ್ತಾ ಉದ್ರೇಕ ಸ್ಥಿತಿಯನ್ನು ಉಂಟು ಮಾಡಿದ್ದಾರೆ. ಡಿಸೆಂಬರ್-31 ಮತ್ತು ಜನವರಿ 1, 4 ಮತ್ತು 5 ರಂದು ದಕ್ಷಿಣ ತ್ರಿಪುರಾದ ಅಮರಪುರ ಉಪವಿಭಾಗಕ್ಕೆ ಬರುವ ಖಚ್ಚಂದ್ರಪಾರ, ರಾಮಚಂದ್ರ ಪಾರಾ, ಭಕ್ತಮೋಹನ ಮಲಸನಪುರಗಳಲ್ಲಿ ನಿರಂತರ ದೌರ್ಜನ್ಯ ದಾಳಿಗಳನ್ನು ನಡೆಸಿ ವಯಸ್ಸಾದವರನ್ನು ಕೊಂದರು. ... 105 ಕುಟುಂಬಗಳ ಮನೆಗಳನ್ನು ಕಿತ್ತೆಸೆದರು. ಬೀದಿಪಾಲು ಮಾಡಿದ್ದಾರೆ. ತೀವ್ರ ಚಳಿಗಾಲದ ಕೊರೆಯುವ ಚಳಿಯಲ್ಲಿ ಮಹಿಳೆಯರು - ಮಕ್ಕಳು ವೃದ್ಧರು ಯಾತನೆ ಅನುಭವಿಸುತ್ತಿದ್ದಾರೆ.

ಜನವರಿ 8 ಶಸ್ತ್ರಸಜ್ಜಿತ ಉಗ್ರರು ಜೀಪ್ ಟ್ರೈಲರ್ ಸಮೇತ 5 ಜನರನ್ನು ಜೀವಂತವಾಗಿ ಸುಟ್ಟ ಘಟನೆಯು ಪಶ್ಚಿಮ ತ್ರಿಪುರಾದ ಕೊಟೈ ಉಪ ವಿಭಾಗಕ್ಕೆ ಸೇರಿದ ಕರಾಜಿಭೇರರ್ ಎಂಬಲ್ಲಿ ನಡೆಯಿತು. ತೀವ್ರವಾದಿಗಳು ಜೀಪನ್ನು ಅಡ್ಡತಡೆದು ಪ್ರಯಾಣಿಕರನ್ನು ಹೊರಗೆಳೆದು ಜೀಪ್ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಲ್ಲದೆ ಪ್ರಯಾಣಿಕರನ್ನು ಅದರೊಳಗೆ ದೂಡಿ ಜೀವಂತ ದಹಿಸಿದರು. ಸತ್ತವರಲ್ಲಿ ಜೀಪ್ ಡ್ರೈವರ್ ಲೂಲುದಾಸ್(28) ತ್ರಿಪುರ ಮೋಟಾರ್ ಶ್ರಮಿಕ ಯೂನಿಯನ್(ಸಿಐಟಿಯು) ಕ್ರಿಯಾಶೀಲ ಕಾರ್ಯಕರ್ತನಾಗಿದ್ದ. ಮತ್ತೊಬ್ಬರು ಮನೋರಂಜನ ಸಬಾರ್ ಎಡಪಂಥೀಯ ಪರವಾದ, ತ್ರಿಪುರ ಪರಿಶಿಷ್ಟ ಜಾತಿ ಸಮನ್ವಯ ಸಮಿತಿಯ ವಿಭಾಗೀಯ ಸಮಿತಿಯ ಸದಸ್ಯರಾಗಿದ್ದರು.

ಈ ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡವರಲ್ಲಿ 3 ಜನ ಮಹಿಳೆಯರು ಸೇರಿದ್ದಾರೆ. ಎಲ್ಲಾ ಗಾಯಾಳುಗಳು ಈಗ ಸಾವು ಬದುಕಿನೊಂದಿಗೆ ಹೋರಾಡುತ್ತಿದ್ದಾರೆ.

ಜನವರಿ 16 ಗಿರಿಜನರು ಸಾಂಪ್ರದಾಯಿಕ ಹಬ್ಬವನ್ನು ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಿದ್ದ ಸಂದರ್ಭದಲ್ಲಿ ರಾಜಕೀಯ ಪ್ರಚೋದಿತ ಉಗ್ರವಾದಿಗಳು ಬಾಂಬ್ ದಾಳಿಗಳನ್ನು ನಡೆಸಿ, ಮೂರು ಜನರು ಹತರಾಗಿ, 6 ಜನರು ತೀವ್ರವಾಗಿ ಗಾಯಗೊಂಡಿದ್ದಾರೆ ಮತ್ತು ಒಬ್ಬರನ್ನು ಅಪಹರಿಸಿದ್ದಾರೆ. ಈ ಘಟನೆಯು ಜನವರಿ 14 ರಂದು ಪಶ್ಚಿಮ ತ್ರಿಪುರಾದ ಕೊವೈ ಪ್ರದೇಶದಲ್ಲಿ ನಡೆದಿದೆ. ಜನರು ಹಬ್ಬವನ್ನು ಆಚರಿಸುವ ಸಲುವಾಗಿ ಜೀಪ್‌ನಲ್ಲಿ ಪ್ರಯಾಣಿಸುತ್ತಿದ್ದರು.

ಸತ್ತವರಲ್ಲಿ ಜೀಪ್ ಡ್ರೈವರ್ ಸೇರಿದ್ದಾರೆ. ಪಿಯುಸಿ ಓದುತ್ತಿದ್ದ ವಿದ್ಯಾರ್ಥಿನಿ ತೀವ್ರವಾಗಿ ಗಾಯಗೊಂಡಿದ್ದಾಳೆ. ಇತರೆ 4 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಲ್ಲೆ ನಡೆಸಿದ ತಕ್ಷಣ ಉಗ್ರವಾದಿಗಳು 'ಅವರ ಬಂಗಾಳಿ ಪಾರ್ಟಿಯ ಮುಖ್ಯ ಸಂಘಟಕನಾಗಿ ಎಲ್ಲರಿಗೂ ಗೊತ್ತಿರುವ ನೇಪಾಲ್ ದೇಬ್. ಮನೆಯಲ್ಲಿ ಸೇರಿ ತಪ್ಪಿಸಿಕೊಂಡಿದ್ದಾರೆ. 1984 ರಲ್ಲಿ ಇವನ ಮನೆಯಲ್ಲಿ ಎಂಟುಜನರು ಬಾಂಬ್‌ಗಳನ್ನು ತಯಾರಿಸುವ ಕೆಲಸದಲ್ಲಿದ್ದಾಗ ಸ್ಫೋಟಿಸಿ ಸತ್ತ ಘಟನೆ ನಡೆದಿತ್ತು.

ಅದೇ ದಿನ ಸಂಜೆ, ಉತ್ತರ ಚಾಂದಪುರ ಪಂಚಾಯತ್ ಸದಸ್ಯರು ಸಿಪಿಐ(ಎಂ) ಮುಖಂಡರಾದ ಕಾರ್ತಿಕ್ ಮುಜುಂದಾರ್ ಮನೆ ಮೇಲೆ ಗುರುತುಸಿಗದ ಉಗ್ರವಾದಿಗಳು ಧಾಳಿ ನಡೆಸಿದ್ದಾರೆ. ಆದರೆ ಕಾರ್ತಿಕ್ ಮನೆಯಲ್ಲಿರಲಿಲ್ಲ. ಉಗ್ರವಾದಿಗಳು ಕಾರ್ತಿಕ್ ಮಜುಂದಾರ್ ಮನೆಯಲ್ಲಿದ್ದ ಸುಮನ್ ದೇಬ್(12) ಮಗುವನ್ನು ಕಿಡ್ನಾಪ್ ಮಾಡಲು ಪ್ರಯತ್ನಿಸಿದಾಗ, ಅವರ ಮನೆಯವರಿಂದ ತೀವ್ರ ಪ್ರತಿರೋಧ ಎದುರಿಸಿ, ಅವರನ್ನು ಬಂದೂಕಿನ ನಳಿಕೆಯಿಂದ ಗಾಯಗೊಳಿಸಿದ್ದಾರೆ.

ಉಗ್ರವಾದಿಗಳು ಅದೇ ದಿನ ಕೂಲಿಕಾರನೊಬ್ಬನನ್ನು ಗುಂಡಿಕ್ಕಿ ಕೊಂದಿದ್ದಾರೆ. ಉಗ್ರವಾದಿಗಳು ಮುಂಬರುವ ಚುನಾವಣೆಗಳಲ್ಲಿ(ಎಡಿಸಿ) ಎಡರಂಗ ಸರ್ಕಾರವನ್ನು ಸೈದ್ಧಾಂತಿಕವಾಗಿ ಎದುರಿಸುವ ತಾಕತ್ತಿಲ್ಲದೆ ಜನರಲ್ಲಿ ಭಯಭೀತಿ ಉಂಟು ಮಾಡುತ್ತಿವೆ ಎಂದು ಸಿಪಿಐ(ಎಂ) ಹಾಗೂ ಗಣಮುಕ್ತಿ ಪರಿಷದ್ ಆರೋಪಿಸಿದೆ. ರಾಜ್ಯದ ಜನತೆ ಮತ್ತು ಎಡರಂಗ ಸರ್ಕಾರ ಛಿದ್ರಕಾರಿ ಶಕ್ತಿಗಳ ವಿರುದ್ಧ ರಾಜಿ ರಹಿತ ಹೋರಾಟ ಮುಂದುವರಿಸಲಿದೆ ಎಂದು ಘೋಷಿಸಿದೆ.

50ನೇ ದಿನ ಪೂರೈಸಿದ

'ನಾನೇನೂ ಮಾಡ್ಲಿಲ್ಲ'

ಹಾಸ್ಯಭರಿತ ಕೌಟುಂಬಿಕ ಚಿತ್ರ



ಇತ್ತೀಚಿನ ಎ, ಉಪೇಂದ್ರ, ಪೋಲೀಸ್ ಸ್ಟೋರಿ, ಓಂನಮಃ ಶಿವಾಯ, ಬಾಂಬೆ ಹಲ್ವಾ ಇತ್ಯಾದಿ ಅರ್ಭಟ, ಕ್ರೌರ್ಯ ಮತ್ತು ಅಶ್ಲೀಲ ಕನ್ನಡ ಚಿತ್ರಗಳ ಮಧ್ಯೆ 'ನಾನೇನೂ ಮಾಡ್ಲಿಲ್ಲ' ನವಿರಾದ ಹಾಸ್ಯ ಭರಿತ ಚಿತ್ರ ಪ್ರೇಕ್ಷಕರನ್ನು ಸೆಳೆದಿರುವುದೊಂದು ವಿಶೇಷ.

'ಉಪೇಂದ್ರ' ತನ್ನೆಲ್ಲಾ ಅಬ್ಬರ, ಕೀಳು ಮೌಲ್ಯಗಳೊಂದಿಗೆ ನೂರು ಪೂರೈಸುತ್ತಿರುವ ಸಮಯದಲ್ಲಿ 'ನಾನೇನೂ ಮಾಡ್ಲಿಲ್ಲ' ಒಂದು ಕೌಟಂಬಿಕ ಚಿತ್ರ 50 ದಿನಗಳ ಪ್ರದರ್ಶನ ಕಂಡಿದೆ. ವೇಶ್ಯೆಯಾಗಬೇಕಾಗಿದ್ದ ಹಳ್ಳಿಯ ಮುಗ್ಧ ಹೆಣ್ಣುಮಗಳೊಬ್ಬರು ಒಂದು 'ಮಧ್ಯಮ ವರ್ಗ'ದ ಕುಟುಂಬದ ಅಕ್ಕರೆಯ ಪುತ್ರಿಯಾಗಿ ರೂಪುಗೊಳ್ಳುವುದೆ ಈ ಚಿತ್ರದ ಕಥಾವಸ್ತು.

ಹಲವು ವರ್ಷಗಳ ನಂತರ ಹಳೆಯ ಸ್ನೇಹಿತರು ರಾಮಚಂದ್ರನ (ಅನಂತ್‌ನಾಗ್)ಮನೆಯಲ್ಲಿ ಭೇಟಿಯಾಗುತ್ತಾರೆ. ಈ ಸಮಯದಲ್ಲಿ ರಾಮಚಂದ್ರನ ಹೆಂಡತಿ ಚಿತ್ರಾ (ಸುಧಾರಾಣಿ) ಅವರ ತಂದೆ, ತಾಯಿ ಜೊತೆ ತಿರುಪತಿಗೆ ಹೋಗಿರುತ್ತಾಳೆ. ಅವರು 2 ದಿನಗಳ ನಂತರವೇ ಬರುವುದೆಂದು ತಿಳಿದಾಗ ತಮ್ಮ ಭೇಟಿಯ ಸಂತೋಷಕ್ಕಾಗಿ ಮಧ್ಯಪಾನ ಮಾಡತೊಡಗುತ್ತಾರೆ. ವೇಶ್ಯಾಗೃಹದಿಂದ ಹುಡುಗಿಯೊಬ್ಬಳನ್ನು ಕೂಡಾ (ಶಿಲ್ಪಾ) ರಾಮಚಂದ್ರನ ವಿರೋಧದ ನಡುವೆ ಕರೆತರುತ್ತಾರೆ. ಇಂತಹ ಸನ್ನಿವೇಶದಲ್ಲಿ ಅತೀವ ಸಂತೋಷದಿಂದ ಒಬ್ಬ ಸ್ನೇಹಿತನಿಗೆ ಲಗು ಹೃದಯಾಘಾತವಾಗುತ್ತದೆ. ಅವನ ಚಿಕಿತ್ಸೆಯ ಗಡಿಬಿಡಿಯಲ್ಲಿ ಆ ಹುಡುಗಿ ರಾಮಚಂದ್ರನ ಮನೆಯಲ್ಲಿಯೇ ಆ ರಾತ್ರಿ ಉಳಿದುಬಿಡುವಂತಾಗುತ್ತದೆ.

ಇಷ್ಟರಲ್ಲಿ ಹುಡುಗಿಯನ್ನು ಕರೆದುಕೊಂಡು ಹೋಗಬೇಕಾದ ಬ್ರೋಕರ್ ಬಾರದೆ ರಾಮಚಂದ್ರ ಪೇಚಿಗೆ ಸಿಲುಕುತ್ತಾನೆ. ಇಷ್ಟರಲ್ಲಿ ತಿರುಪತಿಗೆ ಹೋಗಿದ್ದ ಚಿತ್ರಾ ಮತ್ತು ಅವರ ತಂದೆ ತಾಯಿ ವಾಪಸ್ಸಾಗುತ್ತಾರೆ. ಹುಡುಗಿಯನ್ನು ಮಹಡಿ ಮೇಲಿನ ಕೋಣೆಯಲ್ಲಿ ಬಚ್ಚಿಟ್ಟು ಕೊಳಾಯಿ ರಿಪೇರಿ ನೆಪವೊಡ್ಡಿ ಹೆಂಡತಿ ಮೇಲೆ ಹೋಗದಂತೆ ತಡೆಯುತ್ತಾನೆ.

ಕೊಳವೆ ರಿಪೇರಿಯ ವೇಲು (ರಾಮಕೃಷ್ಣ)ಜೊತೆ ಸೇರಿ ಹುಡುಗಿಯನ್ನು ಅಲ್ಲಿಂದ ಸಾಗಹಾಕುವ ಪ್ರಯತ್ನದಲ್ಲಿ ವಿಫಲನಾಗುತ್ತಾನೆ. ಪಕ್ಕದ ಮನೆಯ ಹುಡುಗ ಕಿಟಕಿಯಿಂದ ಅಂದದ ಹುಡುಗಿ ನೋಡಿ ಫೋಟೋ ತೆಗೆದು ಅವಳಿಗೆ ತಲುಪಿಸುವ ಯತ್ನದಲ್ಲಿ ಚಿತ್ರಾಳಿಗೆ ತಮ್ಮ ಮನೆಯ ಮೇಲಿನ ಕೊಠಡಿಯಲ್ಲಿ ಬೇರೊಬ್ಬ ಹುಡುಗಿ ಇರುವುದು ಗೊತ್ತಾಗುತ್ತದೆ. ಈ ವಿಷಯವಾಗಿ ಗಂಡನನ್ನು ತರಾಟೆಗೆ ತೆಗೆದುಕೊಳ್ಳುವ ಸಮಯಕ್ಕೆ ಬಂದ ಸ್ನೇಹಿತರು ಆ ಹುಡುಗಿಯನ್ನು ತಾವೇ ಮನೆಗೆಲಸಕ್ಕೆಂದು ಕರೆತಂದೆವೆಂದು ಮತ್ತೆ ವಾಪಸು ಕರೆದುಕೊಂಡು ಹೋಗುವುದಾಗಿ ಮತ್ತೆ ಸುಳ್ಳು ಹೇಳಿ ರಾಮಚಂದ್ರನನ್ನು ಆ ಸನ್ನಿವೇಶದಿಂದ ಪಾರು ಮಾಡುತ್ತಾರೆ. ಒಂದು ದಿನ ಈ ಹುಡುಗಿಯನ್ನು ನೋಡಿದ ಬ್ರೋಕರ್ ಹುಡುಗಿ ಕಳಿಸುವಂತೆ ಅಥವಾ 5 ಲಕ್ಷ ಹಣ ನೀಡುವಂತೆ ಒತ್ತಾಯಿಸಿದಾಗ ವಿಷಯ ಬಹಿರಂಗಗೊಳ್ಳುವುದು. ಕೆಲಸಕ್ಕಾಗಿ ಹಳ್ಳಿಯಿಂದ ಬಂದ ಹುಡುಗಿ ವೇಶ್ಯಾವಾಟಿಕೆಗೆ ಬಲಿಯಾಗುವ ಸಂದರ್ಭದಿಂದ ಪಾರು ಮಾಡಿ, ಮಕ್ಕಳಿಲ್ಲದ ಗಂಡ-ಹೆಂಡತಿ ಇವಳನ್ನು ಪುತ್ರಿಯಾಗಿ ಸ್ವೀಕರಿಸುತ್ತಾರೆ.

ನಿರ್ದೇಶಕ ದಿನೇಶ್ ಬಾಬು ಈ ಚಿತ್ರದಲ್ಲಿ ಹಳ್ಳಿಯ ಮುಗ್ಧ ಹಾಗೂ ಬಡ ಹೆಣ್ಣು ಮಕ್ಕಳನ್ನು ವೇಶ್ಯಾವಾಟಿಕೆಗೆ ನೂಕುವ ಸಾಮಾಜಿಕ ಅನಿಷ್ಟವನ್ನು ಸರಳವಾಗಿ ನಿರೂಪಿಸಿದ್ದಾರೆ. ವೇಶ್ಯಾಪದ್ಧತಿಯ ನಿರ್ಮೂಲನಕ್ಕೆ ಅವರು ದತ್ತು ಸ್ವೀಕಾರವನ್ನೇ ಪರಿಹಾರವನ್ನಾಗಿ ಸೂಚಿಸುವುದಿಲ್ಲವಾದರೂ ಮಹಿಳೆಯರ ಶೋಷಣೆ, ಅದರ ಅಮಾನವೀಯತೆಯ ಕಡೆಗೆ ಗಮನ ಸೆಳೆದಿದ್ದಾರೆ.

ಮಧ್ಯಮ ವರ್ಗದ ಗಂಡಸರ ತೆವಲುಗಳನ್ನು ಬಿಂಬಿಸಿ, ಅವರ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಸ್ವಲ್ಪ ಮಟ್ಟಿಗೆ ಎಚ್ಚರಿಸಿದ್ದಾರೆ.

ಚಿತ್ರ[...] ನಿರೂಪಣೆ ಕೆಲವ[...] ಸಡಿಲಗೊಂಡಿದೆ. ವೇಶ್ಯಾವೃತ್ತಿಗೆ[...] ಕಳುಹಿಸಿದ ಹುಡುಗಿಯನ್ನು ಬ್ರೋಕ[...] ತಿಂಗಳುಗಟ್ಟಲೆ ಮರೆಯುವುದು, ಸುಧಾರಾಣಿಯ[...] ಕುಣಿಸುವುದಕ್ಕಾಗಿಯೇ ಹಾಡು ಸೃಷ್ಟಿಸಿರುವು[...] ಇತ್ಯಾದಿಗಳು.

ಒಟ್ಟಾರೆ ಚಿತ್ರದಲ್ಲಿ ಅಶ್ಲೀಲತೆ, ದ್ವಂದ್ವಾ[...] ಸಂಭಾಷಣೆ ಇಲ್ಲದ, ನವಿರಾದ ಹಾಸ್ಯಭ[...] ಸಂಭಾಷಣೆ ಮೂಲಕ ಕಥಾವಸ್ತುವನ್ನು ಪ್ರೇಕ್ಷಕ[...] ಮುಟ್ಟಿಸುತ್ತದೆ. ಚಿತ್ರದ ಛಾಯಾಗ್ರಹ[...] ಉತ್ತಮವಾಗಿದೆ, ಚಿತ್ರದಲ್ಲಿ ಶಿಲ್ಪ, ಉಮಾಶ್ರೀ[...] ರಾಮಕೃಷ್ಣರ ಅಭಿನಯ ಗುರುತಿಸಬಹುದಾಗಿ[...] ಅನಂತ್‌ನಾಗ್ ಹಾಗೂ ಸುಧಾರಾಣಿ ಹಲ[...] ವರ್ಷಗಳ ನಂತರ ತೆರೆಯಮೇಲೆ ಬಂ[...] ಲೀಲಾಜಾಲವಾಗಿ ನಟಿಸಿದ್ದಾರೆ. ಚಿತ್ರದ ಸಂಭಾ[...] ಚುರುಕಾಗಿದ್ದು ಹಾಸ್ಯ ಭರಿತವಾಗಿದೆ. ಒಟ್ಟಾ[...] ಮನೆಮಂದಿಯೆಲ್ಲಾ ನೋಡಬಹುದಾ[...] ಮನರಂಜನೀಯ ಚಿತ್ರ.

\- ಜಯರಾ[...]

ಎಸ್‌ಎಫ್‌ಐ ರಾಷ್ಟ್ರ ಸಮ್ಮೇಳನ

ಯುವಜನಾಂಗ ಶಿಕ್ಷಣದಲ್ಲಿ ಕೋಮುವಾದಿ ಮಧ್ಯಪ್ರವೇಶವನ್ನು ತಡೆಯಬೇಕು

ಮನುಷ್ಯನ ಮಧ್ಯಪ್ರವೇಶದಿಂದ ಐತಿಹಾಸಿಕ ಅವಕಾಶಗಳು ಸೃಷ್ಟಿಯಾಗುತ್ತವೆ

ಡಾ. ಕೆ.ಎನ್.ಫಣಿಕ್ಕರ್

ಸಮ್ಮೇಳನವನ್ನು ದೇಶದ ಖ್ಯಾತ ಇತಿಹಾಸಕಾರ ಡಾ|| ಕೆ.ಎನ್.ಫಣಿಕ್ಕರ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ ಭಾರತದಲ್ಲಿ ಕೋಮುವಾದ ಬೆಳೆದುಬಂದ ಐತಿಹಾಸಿಕ ಪ್ರಕ್ರಿಯೆಯನ್ನು ವಿಶ್ಲೇಷಿಸಿದರು.

10 ವರ್ಷಗಳ ಹಿಂದೆ ಪರಿಸ್ಥಿತಿ ಈಗಿನಂತಿರಲಿಲ್ಲ. ಹಿಂದೆ ಕೋಮುವಾದ ಮೂಲೆಗುಂಪಾಗಿತ್ತು. ಆದರೆ ಇಂದು ಪ್ರಧಾನ ಪಾತ್ರವಹಿಸುತ್ತಿದೆ. ಏಕೆ ಈ ಬದಲಾವಣೆ ಎಂದು ಅರ್ಥಮಾಡಿಕೊಳ್ಳಬೇಕು. 10 ವರ್ಷಗಳ ಬದಲಾವಣೆ ಕೇವಲ ರಾಜಕೀಯ ಬದಲಾವಣೆಯಲ್ಲ, ಭಾರತದ ಬಹುತೇಕ ಜನ ಜಾತ್ಯಾತೀತರಾಗಿರುವಾಗ ಕೋಮುವಾದಿಗಳ ಮುನ್ನಡೆ ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಅವರು ನಾವು ಇಂದು ಮಾರ್ಕ್ಸ್‌ವಾದದ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಬೇಕು. ಭಾರತ ದೇಶದ ವಾಸ್ತವವನ್ನು ಅರಿಯಲು ಇದು ಅವಶ್ಯಕ. ಮನುಷ್ಯನ ಮಧ್ಯಪ್ರವೇಶದಿಂದ ಐತಿಹಾಸಿಕ ಅವಕಾಶಗಳು ಸೃಷ್ಟಿಯಾಗುತ್ತವೆ. ಭಾರತದ ಇಂದಿನ ಗಂಭೀರ ಸನ್ನಿವೇಶದಲ್ಲಿ ಯುವಜನಾಂಗದ ಮಧ್ಯ ಪ್ರವೇಶ ತುಂಬಾ ಅಗತ್ಯ ಎಂದು ಅವರು ತಿಳಿಸಿದರು.

ದೇಶದಲ್ಲಿ ನಿರಂತರವಾದ ಸಾಂಸ್ಕೃತಿಕ ಚಟುವಟಿಕೆ ಕೋಮುವಾದಿಗಳಿಂದ ನಡೆದಿದೆ. ಅವರ ಸಾಂಸ್ಕೃತಿಕ ಸಂಘಟನೆಗಳು ನೂರಾರು ಇವೆ. ಅವರು ಜನರ ಮನಸ್ಸುಗಳನ್ನು ಸೆಳೆಯಲು ಸಮರ್ಥರಾಗಿದ್ದಾರೆ. ಕೋಮುವಾದ ಬಂಡವಾಳಶಾಹಿಯನ್ನು ಅಳವಡಿಸಿಕೊಂಡಿದೆ. ಜರ್ಮನಿಯಲ್ಲಿ ನಾಝಿಗಳು 15 ವರ್ಷಗಳಕಾಲ ಯುವಜನರನ್ನು ಮಕ್ಕಳನ್ನು ಪ್ರತ್ಯೇಕಿಸಿ ಹುಲಿಯಂತೆ ತಯಾರುಗೊಳಿಸಿ ಜನರ ಮೇಲೆ ಎರಗಲು ಬಿಡುತ್ತಿದ್ದರು. ಇದಕ್ಕೆ ಅಮೆರಿಕಾ ಬೆಂಬಲ ನೀಡಿತ್ತು. ಭಾರತದಲ್ಲಿ ಆರ್.ಎಸ್.ಎಸ್. ಶಾಖೆಗಳು ಇದೇ ರೀತಿಯಲ್ಲಿ ಕಾರ್ಯವೆಸಗುತ್ತಿವೆ. ದೈಹಿಕ ಶಿಕ್ಷಣ ಹಾಗೂ ಶಿಸ್ತು ಇವುಗಳ ಹೆಸರಿನಲ್ಲಿ ಇದನ್ನು ನಡೆಸುತ್ತಿದ್ದಾರೆ. ಕೋಮುವಾದಿ ಸಿದ್ಧಾಂತದ ಮಾನಸಿಕ ಪ್ರಭಾವದ ಜೊತೆಗೆ ಅವರು 'ದೈಹಿಕ ಕಾರ್ಯಕ್ರಮ'ಗಳನ್ನು ನೀಡಿದ್ದಾರೆ. ಯುವಜನರನ್ನು ಆರೋಗ್ಯಕರವಾಗಿ ತಯಾರು ಮಾಡುವುದಕ್ಕಲ್ಲ. ಆಕ್ರಮಣಕಾರಿಯಾಗಿ ತಯಾರು ಮಾಡುವುದಕ್ಕೆ. ಶಾಂತ 'ಹಸನ್ಮುಖಿ'ರಾಮನನ್ನು ಅಯೋಧ್ಯೆ ಚಳುವಳಿಯಲ್ಲಿ 'ಆಕ್ರಮಣಕಾರಿ ರಾಮ'ನನ್ನಾಗಿ ಮಾಡಿದರು.

ದೇಶದಲ್ಲಿ ಆರ್.ಎಸ್.ಎಸ್. ಪರ್ಯಾಯ ಶಿಕ್ಷಣ ವ್ಯವಸ್ಥೆ ರೂಪಿಸುತ್ತಿದೆ. 1942 ರಲ್ಲಿ ಸ್ಥಾಪನೆಯಾದ 'ಸರಸ್ವತಿ ವಿದ್ಯಾಮಂದಿರ'ಹೆಸರಿನ ಶಾಲೆಗಳು ಇಂದು 1000 ಕ್ಕಿಂತ ಹೆಚ್ಚು ದೇಶದಲ್ಲಿವೆ. ಕ್ರಿಶ್ಚಿಯನ್ನರ ಮೇಲೆ ಧಾಳಿ ನಡೆಯುತ್ತಿದೆ ಏಕೆಂದರೆ ಅವರೂ ಸಹ ಶಾಲೆ ನಡೆಸುತ್ತಿದ್ದಾರೆ ಎಂದು ಫಣಿಕ್ಕರ್ ತಿಳಿಸಿದರು.

ಸಂಶೋಧನಾ ಸಂಸ್ಥೆಗಳ ಕೇಸರೀಕರಣ ನಡೆದಿದೆ. ಹಳೆಯ ಆದರ್ಶ ರಾಜ್ಯ 'ರಾಮರಾಜ್ಯ' ವನ್ನು ಪುನರುತ್ಥಾನಗೊಳಿಸುವುದು - ಮುಸ್ಲಿಂರ ಆಕ್ರಮಣದಿಂದ ಸುವರ್ಣಯುಗ ನಾಶವಾಯಿತು ಎಂದು ನಿರೂಪಿಸುವುದು - ವೈರಿಯನ್ನು ಅವರಿಗೆ ಬೇಕಾಗುವಂತೆ ರೂಪಿಸಿಕೊಳ್ಳುವುದು ಅಥವಾ ವೈರಿಯನ್ನು ನಿವಾರಿಸುವುದು ಇವು ಕೇಸರೀಕರಣದ ಪ್ರಮುಖ ಗುರಿಗಳು. ಒಟ್ಟಾರೆ ಭಾರತವನ್ನು 'ಹಿಂದೂರಾಷ್ಟ್ರ'ವಾಗಿ ಪುನರ್ ಅರ್ಥೈಸುವುದು.

ಸ್ವಾತಂತ್ರ್ಯ ಪೂರ್ವದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯತೆಯಲ್ಲಿ ಒಂದು ನಕಾರಾತ್ಮಕ ಅಂಶವಿತ್ತು. ಅದು ಧರ್ಮಾಧಾರಿತವಾಗಿತ್ತು. ಸಂಸ್ಕೃತಿ-ಧರ್ಮ ಬೇರೆ ಬೇರೆ. ಆದರೆ ಸಾಂಸ್ಕೃತಿ ರಾಷ್ಟ್ರೀಯತೆಯನ್ನು, ಧಾರ್ಮಿಕತೆಯೊಂದಿಗೆ ಸಮೀಕರಿಸುವುದು ನಡೆಯಿತು. ಈಗ ಆರ್ಯರು ಭಾರತದವರು ಎಂಬ ವಾದ ಸಾಗಿದೆ. ಇತಿಹಾಸದ ಹಿಂದೂಕರಣ ನಡೆದಿದೆ.

ಶಿಕ್ಷಣದ ಮಾಧ್ಯಮ, ಮಾತೃಭಾಷಾ ಮಾಧ್ಯಮ ಇರಬೇಕೆಂಬುದು. ವೈಜ್ಞಾನಿಕ ಧೋರಣೆ. ಆದರೆ ಮಾತೃಭಾಷಾ ಶಿಕ್ಷಣಕ್ಕೆ ಆರ್.ಎಸ್.ಎಸ್[...] ವಿರೋಧವಿದೆ. ಹಾಗೂ ಆ ಸ್ಥಾನದಲ್ಲಿ ಅದು ಹಿಂ[...] ಭಾಷೆಯನ್ನು ಪ್ರತಿಪಾದಿಸುತ್ತದೆ. ಹೆಣ್ಣು ಮಕ್ಕಳ[...] ಅಸಮಾನತೆಯನ್ನು ಪ್ರತಿಪಾದಿಸುವ ಪ್ರತ್ಯೇ[...] ಶಿಕ್ಷಣವನ್ನು ಪ್ರತಿಪಾದಿಸುತ್ತದೆ. ನಮ್ಮ ಮುಂದೆ ಎರ[...] ಬಗೆಯ ಶಿಕ್ಷಣ ಇದೆ. ಹಿಂದೂ ರಾಷ್ಟ್ರದ ಕಲ್ಪನೆಯ[...] ಒಂದು, ಮತ್ತೊಂದು ಜಾತ್ಯಾತೀತ ಶಿಕ್ಷಣ.

ಇಂದು ಶಿಕ್ಷಣದಲ್ಲಿ ಕೋಮುವಾ[...] ಮಧ್ಯಪ್ರವೇಶವನ್ನು ತಡೆಯಬೇಕಿದೆ. ಶಿಕ್ಷಣ[...] ಪ್ರಜಾಪ್ರಭುತ್ವೀಕರಣ ಆಗಬೇಕಿದೆ. ಕೋಮುವಾ[...] 50 ವರ್ಷಗಳಲ್ಲಿ ಸಾಕಷ್ಟು ಬೆಳೆದಿದೆ. ಇದ[...] ಮೊದಲು ನಾವು ಒಪ್ಪಬೇಕು. ನಂತರ ಇದ[...] ಸರಿಪಡಿಸಲು ಹೊರಡಬಹುದು. ಜಾತ್ಯಾತೀ[...] ಶಕ್ತಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿ[...] ಜಾತ್ಯಾತೀತ ಶಕ್ತಿಗಳು ಒಂದಾಗಬೇಕು. ಯಾವು[...] ಸಂಘಟನೆಯು ಇಂದು ಒಂ[...] ವಿಷಯವನ್ನಿಟ್ಟುಕೊಂಡು ಸಂಘಟಿಸಲಾರ[...] ಕೋಮುವಾದವನ್ನು ಸೋಲಿಸದೇ ಪ್ರಜಾಪ್ರ[...] ಉಳಿಯದು. ಪ್ರಜಾಪ್ರಭುತ್ವ ಉಳಿಯ[...] ಸಮಾಜವಾದ ಬೆಳೆಯದು, ಹೊಸ ಶತಮಾ[...] ಸಮಾಜವಾದಕ್ಕಾಗಿ ನಡೆಯುವ ಹೋರಾಟ[...] ಶತಮಾನ ಎಂದು ಡಾ. ಫಣಿಕ್ಕರ್ ತಿಳಿಸಿದರು.



Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ಸಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ